ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 22 ಶನಿವಾರ 2025


ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 214 | ಪುಟಗಳು: 12+IV

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4


ಲಾಂಚಿಂಗ್ ಫೇಸ್ 3
G SQUARE
Alchemy
ನ್ಯೂ ಕಾಂತರಾಜ್ ಅರಸ್ 80 ಅಡಿ ರಸ್ತೆ
ಶಾಲೆಗಾ
25,000 ಚದರ
ಸಲೂನ್‌ಗಳು ಮತ್ತು ಸ್ಪಾಗಳಿಗೆ 7000 ಚದರ. ಅಡಿ
ಬ್ಯಾಂಕ್ ಮತ್ತು ಎಟಿಎಂ ಗಳಿಗೆ 8000 ಚದರ. ಅಡಿ
80 ಅಡಿ ರಸ್ತೆ, ORR - PRR ಸಂಪರ್ಕ ಹಾಗೂ ವಾಣಿ
ಗಳಿಗೆ ಪ್ರವೇಶವನ್ನು ಹೊಂದಿರುವ 41 ಎಕ
ಕೋ ವರ್ಕಿಂಗ್ ಸ್ಥಳಗಳ
15,000 ಚದರ. ಅಡಿ
ಅಪಾರ್ಟ್ ಮೆಂಟ್ 25,000 ಚದರ. ಅಡಿ
ಔಟರ್ ರಿಂಗ್ ರೋಡ್
.AVAIL UP TO 90%
LOAN FROM ALL LEADING BANKS
FOR COMMERCIAL APPROVED PLOTS

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 22 ಶನಿವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 214 | ಪುಟಗಳು: 12 + IV

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ರಾಜ್ಯದಲ್ಲಿ ಅಧಿಕಾರ ಹಂಚಿಕೆ ಜಟಾಪಟಿ

ಸಿಎಂ, ಡಿಸಿಎಂ ಶಾಸಕರ ಬಲಾಬಲ ಪ್ರದರ್ಶನ



ಬೆಂಗಳೂರು, ನ.21(ಕೆಎಂಶಿ)– ಅಧಿಕಾರ ಹಂಚಿಕೆ ಸಮರ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ನಡುವೆ ಶಾಸಕರ ಬಲಾ ಬಲ ಪ್ರದರ್ಶನ ಹಂತ ತಲುಪಿದೆ. ಅಧಿಕಾರ ಪಡೆಯಲೇ ಬೇಕೆಂದು ಪಣ ತೊಟ್ಟಿರುವ ಶಿವಕುಮಾರ್ ಕಳೆದ ಎರಡು ದಿನಗಳಿಂದ ತಮ್ಮ ಎಲ್ಲಾ ಕಾರ್ಯಕ್ರಮ ಗಳನ್ನು ರದ್ದುಗೊಳಿಸಿ ಪಕ್ಷದ ಶಾಸಕರ ವಿಶ್ವಾಸ ಪಡೆಯುವಲ್ಲಿ ನಿರತರಾಗಿದ್ದಾರೆ.

ಮತ್ತೊಂದೆಡೆ ಸಿದ್ದರಾಮಯ್ಯ ಅವರನ್ನು ಅಧಿಕಾರದಲ್ಲಿ ಉಳಿಸಲೇ ಬೇಕೆಂದು ಪಣ ತೊಟ್ಟಿರುವ ದಲಿತ ಸಚಿವರು, ಇಂದು ಬೆಳಗ್ಗೆ ಉಪಹಾರ ಸಭೆ ನಡೆಸಿ ಶಾಸಕರ ಬಲ ಪ್ರದರ್ಶನಕ್ಕೆ ಮುಂದಾಗಿದ್ದಾರೆ. ಇದರ ನಾಯಕತ್ವ ವಹಿಸಿಕೊಂಡಿರುವ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಮುಖ್ಯಮಂತ್ರಿ ಪರ ಸಹಿ ಸಂಗ್ರಹಕ್ಕೆ ಇಳಿಯುವ ಜೊತೆಗೆ ವರಿಷ್ಠರ ಭೇಟಿ ಮಾಡಿ ಸಿದ್ದರಾಮಯ್ಯ ಅವರನ್ನೇ ಮುಂದುವರೆಸುವಂತೆ ಮನವಿ ಮಾಡಲು ಸಭೆ ನಿರ್ಧರಿಸಿದೆ.

ದೆಹಲಿಗೆ ತೆರಳುವುದಕ್ಕೂ ಮುನ್ನ ನಗರಕ್ಕೆ ಧಾವಿಸಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭೇಟಿ ಮಾಡಿ ನಂತರ ರಾಹುಲ್ ಗಾಂಧಿ ಭೇಟಿಗೆ ತೆರಳಲಿದ್ದಾರೆ. ರಾಹುಲ್ ಮತ್ತು ಖರ್ಗೆ ಭೇಟಿ ಸಮಯ ನಿಗದಿ ಅಧಿಕಾರವನ್ನು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರಿಗೆ ಸಭೆ ನೀಡಿದೆ. ಸಿದ್ದರಾಮಯ್ಯ ಅವರ ಆಡಳಿತ ಎರಡೂವರೆ ವರ್ಷ ಪೂರ್ಣಗೊಳ್ಳುತ್ತಿದ್ದಂತೆ ಶಿವಕುಮಾರ್ ಬಣ ಅಧಿಕಾರ ಹಸ್ತಾಂತರಕ್ಕೆ ವರಿಷ್ಠರ ಮೊರೆ ಹೋಗಿದ್ದಾರೆ. ಡಿ.ಕೆ ಸಹೋದರರು ಕಳೆದ ದೀಪಾವಳಿ ಹಬ್ಬದಿಂದಲೇ ತಮಗೆ ದಕ್ಕಬೇಕಾದ ಸ್ಥಾನ ಪಡೆಯಲು ಪೂರ್ವ ಸಿದ್ಧತೆ ಮಾಡಿಕೊಂಡು ಬಂದಿದ್ದಾರೆ. ನವೆಂಬರ್ 20ಕ್ಕೆ ಎರಡೂವರೆ ವರ್ಷ ಆಡಳಿತ ಪೂರ್ಣಗೊಳ್ಳುತ್ತಿದ್ದಂತೆ ಸಿದ್ದರಾಮಯ್ಯ ಅಧಿಕಾರ ಬಿಟ್ಟುಕೊಡುವ ಲಕ್ಷಣಗಳನ್ನು ತೋರದೇ ಇರುವುದು ಹಾಗೂ ವರಿಷ್ಠರು ಅಧಿಕಾರ ಹಂಚಿಕೆ ಕುರಿತು ಏನನ್ನೂ ಹೇಳದಿರುವುದರಿಂದ ಶಿವಕುಮಾರ್ ಬಣ ಬಹಿರಂಗವಾಗಿ ಹೋರಾಟಕ್ಕೆ ಇಳಿದಿದೆ. ಶಿವಕುಮಾರ್ ಬಣ ಸಹಿ ಸಂಗ್ರಹದ ಜೊತೆಗೆ ತಂಡೋಪ ತಂಡವಾಗಿ ವರಿಷ್ಠರನ್ನು ಭೇಟಿ ಮಾಡಿ, ಸರ್ಕಾರ ರಚನೆ ವೇಳೆ ರೂಪಿಸಿರುವ ಸೂತ್ರ ಅನುಷ್ಠಾನಕ್ಕೆ ಒತ್ತಡ ಹೇರುತ್ತಿದ್ದಾರೆ.

ಇದರ ಮಧ್ಯೆ, ಶಿವಕುಮಾರ್ ಗೌಪ್ಯವಾಗಿ ಶಾಸಕರ ಜೊತೆ ಸಭೆಗಳನ್ನು ಒಂದೆಡೆ ನಡೆಸುತ್ತಿದ್ದರೆ, ಮತ್ತೊಂದೆಡೆ ಕೊಲೆ ಮತ್ತು ಭ್ರಷ್ಟಾಚಾರ ಆರೋಪದ ಮೇಲೆ

■ 11ನೇ ಪುಟಕ್ಕೆ

ನಾಯಕತ್ವ ಬದಲಾವಣೆ ಬಗ್ಗೆ ಯಾವುದೇ ಹೇಳಿಕೆ ನೀಡಬೇಡಿ

ಕಾಂಗ್ರೆಸ್ ಶಾಸಕರಿಗೆ ಸುರ್ಜೇವಾಲ ವಾರ್ನ್



ನವದೆಹಲಿ, ನ.21– ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ಚರ್ಚೆ ತೀವ್ರ ಸ್ವರೂಪ ಪಡೆದು ಕೊಳ್ಳುತ್ತಿದ್ದು, ಪಕ್ಷದ ಶಾಸಕರು ಮತ್ತು ನಾಯಕರಿಗೆ ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಸಾರ್ವಜನಿಕವಾಗಿ ಯಾವುದೇ ಹೇಳಿಕೆಗಳನ್ನು ನೀಡದಂತೆ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇ ವಾಲಾ ಶುಕ್ರವಾರ ಎಚ್ಚರಿಕೆ ನೀಡಿದ್ದಾರೆ.

■ 11ನೇ ಪುಟಕ್ಕೆ

ಪೂರ್ಣಾವಧಿಗೆ ನಾನೇ ಸಿಎಂ; ಮುಂದಿನ ಎರಡೂ ಬಜೆಟ್ ನಾನೇ ಮಂಡಿಸುತ್ತೇನೆ

ಮೈಸೂರಿನಲ್ಲಿ ಡಿ.ಕೆ.ಶಿವಕುಮಾರ್ ಬಣಕ್ಕೆ ಸಿಎಂ ಸಿದ್ದರಾಮಯ್ಯ ಖಡಕ್ ಸಂದೇಶ

- ಇಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭೇಟಿ ಮಾಡುವೆ
- ನಾನು ಸಿಎಂ ಆಗಿ ಮುಂದುವರೆಯುವ ಬಗ್ಗೆ ಅನುಮಾನವೇ?
- ಹೈಕಮಾಂಡ್ ಸೂಚನೆಯನ್ನು ನಾನೂ ಕೇಳಬೇಕು, ಡಿಕೆನೂ ಕೇಳಬೇಕು
- ಗ್ಯಾರಂಟಿ ವಿಚಾರದಲ್ಲಿ ಮಾತು ತಪ್ಪಲ್ಲ ಎಂದು ಡಿ.ಕೆ.ಸುರೇಶ್ ಹೇಳಿರಬೇಕು



ಮೈಸೂರು ವಿಮಾನ ನಿಲ್ದಾಣದಲ್ಲಿ ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರಕರ್ತರೊಂದಿಗೆ ಮಾತನಾಡಿದರು.

ಮೈಸೂರು, ನ.21 (ಬಿಎಲ್‌ಯು)– ಪೂರ್ಣಾವಧಿವರೆಗೆ ಮುಖ್ಯಮಂತ್ರಿಯಾಗಿ ನಾನೇ ಮುಂದುವರೆಯುತ್ತೇನೆ. ಇನ್ನೂ ಎರಡು ಬಜೆಟ್ ನಾನೇ ಮಂಡನೆ ಮಾಡಲಿದ್ದೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು. ಅಧಿಕಾರ ಹಸ್ತಾಂತರಕ್ಕೆ ಪಟ್ಟು ಹಿಡಿದಿರುವ ಡಿಸಿಎಂ ಡಿ.ಕೆ.ಶಿವ ಕುಮಾರ್ ಬಣ, ದೆಹಲಿ ಮಟ್ಟದಲ್ಲಿ ಲಾಬಿ ನಡೆಸುತ್ತಿರುವ ನಡುವೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೀಡಿರುವ ಈ ಹೇಳಿಕೆ ಮಹತ್ವ ಪಡೆದುಕೊಂಡಿದೆ.

ಮೈಸೂರು ವಿಮಾನ ನಿಲ್ದಾಣದಲ್ಲಿ ಇಂದು ಕಾಂಗ್ರೆಸ್ ಪಾಳೆಯದ ಪ್ರಸಕ್ತ ರಾಜಕೀಯ ಬೆಳವಣಿಗೆಗಳ ಬಗ್ಗೆ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಯಾವುದೇ ಕಾರಣಕ್ಕೂ ಯಾರಿಗೂ ಅಧಿಕಾರ ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ ಎಂದು ಹೇಳುವ ಮೂಲಕ ಡಿ.ಕೆ.ಶಿವಕುಮಾರ್ ಬಣಕ್ಕೆ ಸ್ಪಷ್ಟ ಸಂದೇಶ ರವಾನಿಸಿದರು.

ನಾನು ಮುಖ್ಯಮಂತ್ರಿಯಾಗಿ ಮುಂದುವರೆಯುವ ಬಗ್ಗೆ ನಿಮಗೆ ಏಕೆ ಅನುಮಾನ, ಈ ವಿಚಾರವಾಗಿ ಮತ್ತೆ ಮತ್ತೆ ಏಕೆ ಅದೇ ಪ್ರಶ್ನೆ ಕೇಳುತ್ತೀರಾ ಎಂದು ಪತ್ರಕರ್ತರ ಪ್ರಶ್ನೆಗಳಿಗೆ ಖಾರವಾಗಿ ಪ್ರತಿಕ್ರಿಯೆ ನೀಡಿದರು.

ಹೈಕಮಾಂಡ್ ಏನಾದರೂ ನಾಯಕತ್ವ ಬದಲಾವಣೆ ಬಗ್ಗೆ ಮಾತನಾಡಿದೆಯೇ ಎಂದು ಪ್ರಶ್ನಿಸಿದ ಸಿದ್ದರಾಮಯ್ಯ ಅವರು, ನಾಯಕತ್ವ ಬದಲಾವಣೆ ಹಾಗೂ ಪುನಾರಚನೆ ಎಲ್ಲವನ್ನೂ ಹೈಕಮಾಂಡ್ ತೀರ್ಮಾನ ಮಾಡುತ್ತದೆ ಎಂದು ಸ್ಪಷ್ಟನೆ ನೀಡಿದರು.

ಈ ವಿಚಾರದ ಬಗ್ಗೆ ಹೈಕಮಾಂಡ್ ಇಲ್ಲಿವರೆಗೆ ಏನಾದರೂ ಮಾತನಾಡಿದೆಯೇ, ಮಾತನಾಡಿಲ್ಲ ತಾನೆ,

■ 11ನೇ ಪುಟಕ್ಕೆ

ಅವರಿಗೆ ಶುಭ ಕೋರುತ್ತೇನೆ



ಬೆಂಗಳೂರು, ನ.21(ಕೆಎಂಶಿ)– ಐದು ವರ್ಷ ನಾನೇ ಮುಖ್ಯಮಂತ್ರಿ ಎಂಬ ಸಿದ್ದರಾಮಯ್ಯ ಹೇಳಿಕೆಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವ ಕುಮಾರ್, 'ಐ ವಿಶ್ ಹಿಮ್ ಆಲ್ ದಿ ಬೆಸ್ಟ್' (ಅವರಿಗೆ ಶುಭ ಕೋರು ತ್ತೇನೆ) ಎಂದು ವ್ಯಂಗ್ಯ ಭರಿತ ಮಾತುಗಳನ್ನಾಡಿದ್ದಾರೆ.

ಮೈಸೂರಿನಲ್ಲಿ ಮುಖ್ಯ ಮಂತ್ರಿ ಈ ಹೇಳಿಕೆ ನೀಡುತ್ತಿದ್ದಂತೆ ಶಿವಕುಮಾರ್ ತಮ್ಮ ನಿವಾಸದ ಬಳಿ ಭೇಟಿ ಮಾಡಿದ ಸುದ್ದಿಗಾರರೊಂದಿಗೆ ಮಾತನಾಡಿ, ಮುಖ್ಯಮಂತ್ರಿಗೆ ಶುಭಾಶಯ ಹೇಳಿದ್ದಲ್ಲದೆ, ಅವರು ತಮ್ಮ ವಿಚಾರಧಾರೆ ತಿಳಿಸಿದ್ದಾರೆ. ಆ ಬಗ್ಗೆ ನಾನು ಮಾತನಾಡುವುದಿಲ್ಲ.

ನಾನುಂಟು, ಹೈಕಮಾಂಡ್ ಉಂಟು, ಅವರು ಹೇಳಿದಂತೆ ಕೇಳುವುದಾಗಿ ಮುಖ್ಯಮಂತ್ರಿ ಹೇಳಿದ್ದಾರೆ. ನಾನೂ ಹೇಳಿದ್ದೇನೆ. ಅದಕ್ಕೆ ನಾವೂ ಬದ್ಧ, ಅಷ್ಟು ಬಿಟ್ಟರೆ ಬೇರೆ ಏನೂ ಇಲ್ಲ ಎಂದರು. ಕಳೆದ ಎರಡೂವರೆ ವರ್ಷಗಳಿಂದ ಡಿನ್ನರ್ ಸಭೆಗಳು ನಡೆಯುತ್ತಲೇ ಬಂದಿವೆ, ಆ ಡಿನ್ನರ್ ಸಭೆಗಳ ಬಗ್ಗೆ ಗೊತ್ತಿಲ್ಲ. ನಾಲ್ಕೈದು ಡಿಸಿಎಂ ಮಾಡಬೇಕು.

■ 11ನೇ ಪುಟಕ್ಕೆ

ಬೆಂಗಳೂರು ಎಟಿಎಂ ಹಣ ದರೋಡೆ ಪ್ರಕರಣ

ಚೆನ್ನೈನಲ್ಲಿ 6.30 ಕೋಟಿ ಪೊಲೀಸ್ ವಶಕ್ಕೆ



ಬೆಂಗಳೂರು, ನ.21–ಬೆಂಗಳೂರಿನಲ್ಲಿ ನಡೆದ 7.11 ಕೋಟಿ ರೂ. ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಮಹತ್ವದ ಕಾರ್ಯಾಚರಣೆಯಲ್ಲಿ ಚೆನ್ನೈನಲ್ಲಿ 6.30 ಕೋಟಿ ರೂ.ಗಳನ್ನು ವಶಪಡಿಸಿಕೊಂಡಿದ್ದಾರೆ.

ದರೋಡೆ ನಡೆದು 48 ಗಂಟೆಗಳ ಒಳಗಾಗಿ ಪೊಲೀಸರು ತನಿಖೆಯಲ್ಲಿ ಯಶಸ್ಸು ಸಾಧಿಸಿದ್ದು, ಪೊಲೀಸ್ ಕಾನ್ಸ್‌ಟೇಬಲ್, ಸಿಎಂಎಸ್ ಸೆಕ್ಯೂರಿಟಿ ಏಜೆನ್ಸಿಯ ಮಾಜಿ ನೌಕರ ಸೇರಿದಂತೆ 8 ಮಂದಿಯನ್ನು ವಶಕ್ಕೆ ಪಡೆದಿದ್ದು, ತೀವ್ರ ವಿಚಾರಣೆಗೊಳಪಡಿಸಿದ್ದಾರೆ.

ಈ ಹಿಂದೆ ಟ್ರಾವೆಲ್ ಏಜೆನ್ಸಿ ನಡೆಸುತ್ತಿದ್ದ ರವಿ ಎಂಬಾತ ಈ ಪ್ರಕರಣದಲ್ಲಿ ಕಿಂಗ್‌ಪಿನ್ ಆಗಿ ಕಾರ್ಯ ನಿರ್ವಹಿಸಿದ್ದಾನೆ. ಕಾನ್ಸ್‌ಟೇಬಲ್ ಅಣ್ಣಪ್ಪ ನಾಯಕ ದರೋಡೆ ಮಾಡುವುದು ಹಾಗೂ ಪೊಲೀಸರಿಂದ ತಪ್ಪಿಸಿಕೊಳ್ಳುವುದು ಹೇಗೆ ಎಂಬುದರ ಬಗ್ಗೆ ಬಾಣಸವಾಡಿಯ ಕಲ್ಯಾಣನಗರ ಮತ್ತು ಕಮ್ಮನಹಳ್ಳಿ ಹುಡುಗರಿಗೆ ತರಬೇತಿ ನೀಡಿದ್ದ. ಅದೇ ವೇಳೆ ಸಿಎಂಎಸ್ ಸೆಕ್ಯೂರಿಟಿ ಏಜೆನ್ಸಿಯ ಮಾಜಿ ನೌಕರ ಜೇವಿಯರ್, ಹಣವಿದ್ದ ಎಟಿಎಂ ವಾಹನದಲ್ಲಿನ ಸುರಕ್ಷತಾ ವ್ಯವಸ್ಥೆಯ ಬಗ್ಗೆ ದರೋಡೆಕೋರರಿಗೆ ವಿವರಿಸಿದ್ದ ಎಂಬುದು ವಿಚಾರಣೆ ವೇಳೆ ಬೆಳಕಿಗೆ ಬಂದಿದೆ. ಮೊದಲಿಗೆ ಕಲ್ಯಾಣನಗರದ ಇಬ್ಬರು ಹುಡುಗರು ಪೊಲೀಸರಿಗೆ ಸಿಕ್ಕಿಬಿದ್ದಿದ್ದು,

■ 11ನೇ ಪುಟಕ್ಕೆ

ನಾನು ಡಿ.ಕೆ.ಶಿವಕುಮಾರ್ ಅವರ ಋಣ ತೀರಿಸುವುದು ಇದ್ದೇ ಇದೆ!

ನಾನು ಯಾರ ಪರ ಇಲ್ಲ ವಿರುದ್ಧ ಅಲ್ಲ; ಎಸ್.ಎಂ.ಕೃಷ್ಣ ರಾಜಕೀಯ ಜನ್ಮ ಕೊಟ್ಟರೆ; ಡಿ.ಕೆ.ಶಿವಕುಮಾರ್ ರಾಜಕೀಯ ರೂಪ ನೀಡಿದರು



ಮೈಸೂರು, ನ.21– ನಾನು ಯಾರ ಪರ ಅಥವಾ ವಿರುದ್ಧ ಅಲ್ಲ. ಆದರೆ, ನಾನು ಡಿ.ಕೆ.ಶಿವಕುಮಾರ್ ಅವರ ಋಣ ತೀರಿಸುವುದು ಇದ್ದೇ ಇದೆ ಎಂದು ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಹೇಳಿದ್ದಾರೆ.


ಅಧಿಕಾರ ಹಂಚಿಕೆ ಸಂಬಂಧ ವಿದ್ಯಮಾನಗಳ ಬಗ್ಗೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಅವರು, ಪ್ರಾರಂಭದಿಂದಲೂ ಈ ವಿಚಾರ ಕೇಳಿಬರುತ್ತಿದೆ. ಆದರೆ ಈ ಬಗ್ಗೆ ನಮಗೆ ಸ್ಪಷ್ಟ ಉತ್ತರ ಸಿಕ್ಕಿಲ್ಲ. ಶಾಸಕಾಂಗ ಸಭೆಯಲ್ಲೂ ನಮಗೆ ಯಾವುದೇ ಮಾಹಿತಿ ನೀಡಿಲ್ಲ. ಅಧಿಕಾರ ಹಂಚಿಕೆ ಅಥವಾ ಸರ್ಕಾರ ಕುರಿತಂತೆ ಯಾರೂ ಹೊರಗೆ ಮಾತನಾಡದಂತೆ ವರಿಷ್ಠರು ಹಾಗೂ ನಾಯಕರು ಸ್ಪಷ್ಟವಾಗಿ ಹೇಳಿದ್ದರು. ಈ ಬಗ್ಗೆ ಯಾವ ರೀತಿ ತೀರ್ಮಾನ ಆಗಿತ್ತು ಎಂಬುದು ಶಾಸಕರ ಗಮನಕ್ಕೆ ಇಲ್ಲ. ಹಾಗಾಗಿ ಈ ಬಗ್ಗೆ ಹೆಚ್ಚು ಮಾತನಾಡುವುದಿಲ್ಲ ಎಂದಿದ್ದಾರೆ.

ನಾನು ಯಾರ ಪರ ಅಥವಾ ವಿರುದ್ಧ ಅಲ್ಲ. ಆದರೆ ಡಿ.ಕೆ.ಶಿವಕುಮಾರ್ ಅವರ ಋಣ ತೀರಿಸುವುದು ಇದ್ದೇ ಇದೆ. ಕಾರಣ 2002ರಲ್ಲಿ ನಮ್ಮ ತಂದೆಯವರ ನಿಧನದ ನಂತರ ನಡೆದ ಉಪಚುನಾವಣೆ ಸಂದರ್ಭದಲ್ಲಿ ಎಸ್.ಎಂ.ಕೃಷ್ಣ ಅವರು ನನ್ನನ್ನು ಅಭ್ಯರ್ಥಿ ಮಾಡಿದಾಗ ಡಿ.ಕೆ.ಶಿವಕುಮಾರ್ ಅವರು ಲೋಕಸಭಾ ಚುನಾವಣೆಯಲ್ಲಿ ಸೋತಿದ್ದರೂ ಇಲ್ಲಿಗೆ ಬಂದು ಪ್ರಚಾರ ಮಾಡಿದರು. ಅಜೀಜ್ ಸೇಠ್ ಅವರು ನನಗೆ ಜನ್ಮಕೊಟ್ಟ ತಂದೆಯಾದರೆ, ರಾಜಕೀಯ ಜನ್ಮ ಕೊಟ್ಟಿದ್ದು ಎಸ್.ಎಂ.ಕೃಷ್ಣ ಅವರು. ಜೊತೆಗೆ ನನಗೆ ರಾಜಕೀಯ ರೂಪ ನೀಡಿದ್ದು ಡಿ.ಕೆ.ಶಿವಕುಮಾರ್ ಅವರು ಎಂದು ನಾನು ಅನೇಕ ಸಂದರ್ಭಗಳಲ್ಲಿ ಹೇಳಿದ್ದೇನೆ.

ಸಂದರ್ಭ ಬಂದಾಗ ನಾನು ಖಂಡಿತವಾಗಿ ಪಕ್ಷದ ನಾಯಕರನ್ನು ಭೇಟಿಯಾಗುತ್ತೇನೆ. ನಾನು ಧರ್ಮ ಭಿಕ್ಷೆ ಕೇಳಿಕೊಂಡು ಯಾರ ಹತ್ತಿರವೂ ಹೋಗುವುದಿಲ್ಲ. ನನಗೆ ಪಕ್ಷ ಮುಖ್ಯ. ಪಕ್ಷ ಯಾವುದೇ ಕಾಲಕ್ಕೂ ಸೂಚನೆ ನೀಡಿದರೂ ಯುದ್ಧದ ಮೈದಾನಕ್ಕೆ ಇಳಿಯುತ್ತೇನೆ. ಕುರ್ಚಿ ಮೇಲೆ ಕುಳಿತು ಅಧಿಕಾರ ನಡೆಸಬೇಕು ಎಂದರೂ ಸಿದ್ಧನಿದ್ದೇನೆ. ನನಗೆ ಪಕ್ಷದ ಆದೇಶ ಮುಖ್ಯವೇ ವಿನಃ, ಯಾರ ಪರ, ವಿರೋಧವೂ ಇಲ್ಲ ಎಂದು ಸ್ಪಷ್ಟಪಡಿಸಿದರು.

ದುಬೈ ಏರ್ ಶೋನಲ್ಲಿ ತೇಜಸ್ ಯುದ್ಧ ವಿಮಾನ ಪತನ; ಪೈಲೆಟ್ ಸಾವು





ದುಬೈ, ನ.21– ವಿಶ್ವದ ಪ್ರತಿಷ್ಠಿತ ವೈಮಾನಿಕ ಪ್ರದರ್ಶನಗಳಲ್ಲಿ ಒಂದಾದ 'ದುಬೈ ಏರ್ ಶೋ'ನಲ್ಲಿ ಭಾರತದ ತೇಜಸ್ ಲಘು ಯುದ್ಧ ವಿಮಾನ ಪ್ರದರ್ಶನ ನೀಡುತ್ತಿದ್ದ ವೇಳೆ ಪತನ ಗೊಂಡಿದ್ದು, ಪೈಲೆಟ್ ಮೃತಪಟ್ಟಿದ್ದಾರೆ ಎಂದು ಭಾರತೀಯ ವಾಯುಪಡೆ (ಐಎಎಫ್) ಖಚಿತಪಡಿಸಿದೆ.

ದುಬೈನ ಅಲ್ ಮಕ್ತುಮ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಶುಕ್ರವಾರ ಮಧ್ಯಾಹ್ನ ಸ್ಥಳೀಯ ಕಾಲಮಾನ ಮಧ್ಯಾಹ್ನ 2.10ಕ್ಕೆ ಈ ದುರಂತ ಸಂಭವಿಸಿದೆ. ಭಾರತದ ದೇಶೀಯ ರಕ್ಷಣಾ ಉತ್ಪಾದನಾ ಸಾಮರ್ಥ್ಯಗಳನ್ನು ಪ್ರದರ್ಶಿಸಲು ತೇಜಸ್ ಈ ಜಾಗತಿಕ ಕಾರ್ಯಕ್ರಮ ದಲ್ಲಿ ಭಾಗವಹಿಸಿತ್ತು. ದುಬೈ ಏರ್ ಶೋನಲ್ಲಿ ವೈಮಾನಿಕ ಪ್ರದರ್ಶನದ ವೇಳೆ ಐಎಎಫ್‌ನ ತೇಜಸ್ ವಿಮಾನ ಅಪಘಾತಕ್ಕೀಡಾಗಿದೆ. ದುರದೃಷ್ಟವಶಾತ್ ಪೈಲಟ್ ಸಾವನಪ್ಪಿದ್ದಾರೆ. ದುಃಖಿತ ಕುಟುಂಬಕ್ಕೆ ಸಂಪೂರ್ಣ ಬೆಂಬಲ ನೀಡುತ್ತೇವೆ ಎಂದು ಐಎಎಫ್ ಟ್ವೀಟ್ ಮಾಡಿದೆ.

2ನೇ ಬಾರಿ ಪತನ: ಇದು ಎರಡು ವರ್ಷ ಗಳ ಅವಧಿಯಲ್ಲಿ ಸಂಭವಿಸಿದ ಎರಡನೇ ಘಟನೆಯಾಗಿದೆ

ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷರಾಗಿ ಹೆಚ್.ಡಿ.ದೇವೇಗೌಡರು, ರಾಜ್ಯಾಧ್ಯಕ್ಷರಾಗಿ ಹೆಚ್.ಡಿ.ಕುಮಾರಸ್ವಾಮಿ ಅವಿರೋಧ ಆಯ್ಕೆ

ಪಕ್ಷದ ರಾಷ್ಟ್ರೀಯ ಮಂಡಳಿ ಸಭೆ ನಂತರ ಪ್ರಕಟಿಸಿದ ಶಾಸಕಾಂಗ ಪಕ್ಷದ ನಾಯಕ ಸಿ.ಬಿ.ಸುರೇಶ್ ಬಾಬು

ಬೆಂಗಳೂರು: ಜೆಡಿಎಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿ ಮಾಜಿ ಪ್ರಧಾನಿಗಳಾದ ಹೆಚ್.ಡಿ.ದೇವೇಗೌಡರು ಹಾಗೂ ರಾಜ್ಯಾಧ್ಯಕ್ಷರಾಗಿ ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ ಅವರು ಅವಿರೋಧವಾಗಿ ಪುನರಾಯ್ಕೆ ಆಗಿದ್ದಾರೆ.

ಪಕ್ಷದ ರಾಜ್ಯ ಕಚೇರಿ ಜೆಪಿ ಭವನದಲ್ಲಿ ನಡೆದ ರಾಷ್ಟ್ರೀಯ ಮಂಡಳಿ ಸಭೆಯಲ್ಲಿ ಈ ಇಬ್ಬರು ನಾಯಕರ ಪುನರಾಯ್ಕೆ ಬಗ್ಗೆ ರಾಷ್ಟ್ರೀಯ ಪ್ರತಿನಿಧಿಗಳು ಒಮ್ಮತ ನಿರ್ಧಾರ ಕೈಗೊಂಡರು.

ರಾಷ್ಟ್ರ ಮಟ್ಟದಲ್ಲಿ ಪಕ್ಷ ಸಂಘಟನೆಗೆ ವಿಪುಲ ಅವಕಾಶಗಳಿವೆ. ಅದೇ ರೀತಿಯಲ್ಲಿ ಕರ್ನಾಟಕದಲ್ಲಿ ಪಕ್ಷ ಸಂಘಟನೆಯನ್ನು ಬಲಿಷ್ಠವಾಗಿ ಮಾಡಬೇಕಿದೆ. ಈ ಹಿನ್ನೆಲೆಯಲ್ಲಿ ದೇವೇಗೌಡರು ಹಾಗೂ ಕುಮಾರಸ್ವಾಮಿ ಅವರ ನೇತೃತ್ವದಲ್ಲೇ ಪಕ್ಷವನ್ನು ಸಂಘಟಿಸುವ ನಿರ್ಧಾರಕ್ಕೆ ರಾಷ್ಟ್ರೀಯ ಮಂಡಳಿ ಬಂದಿತು.

ಸಭೆಯ ಬಳಿಕ ಮಾಧ್ಯಮಗಳಿಗೆ ಈ ಬಗ್ಗೆ ವಿವರಿಸಿದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸಿ.ಬಿ.ಸುರೇಶ್ ಬಾಬು, ರಾಜ್ಯದ ಏಕೈಕ ಪ್ರಾದೇಶಿಕ ಪಕ್ಷ ಜೆಡಿಎಸ್ ಆಗಿದ್ದು, ಪಕ್ಷಕ್ಕೆ ಈಗ 25 ವರ್ಷ ತುಂಬಿದೆ. ದೇವೇಗೌಡರು ಮತ್ತು ಕುಮಾರಸ್ವಾಮಿ ಅವರ ಅವಿರತ ಶ್ರಮದಿಂದ ಪಕ್ಷ ಇವತ್ತಿಗೂ ಗಟ್ಟಿಯಾಗಿ ಉಳಿದಿದೆ. ಅಸಂಖ್ಯಾತ ಕಾರ್ಯಕರ್ತ ಪಡೆಯನ್ನು ಹೊಂದಿದೆ. ದೇವೇಗೌಡರು ಪಕ್ಷವನ್ನು ಕಟ್ಟಿ ಬೆಳೆಸಿ, ತಮ್ಮ ಬದುಕನ್ನೇ ಪಕ್ಷಕ್ಕೆ ಮೀಸಲಿಟ್ಟಿದ್ದಾರೆ. ಪಕ್ಷದ ಬೆಳ್ಳಿಹಬ್ಬದ ಸಂದರ್ಭದಲ್ಲಿ ಈ ಇಬ್ಬರು ಬಲಿಷ್ಠ ನಾಯಕರೇ ಪಕ್ಷವನ್ನು ಮುನ್ನಡೆಸಬೇಕು ಎಂದು ರಾಷ್ಟ್ರೀಯ ಮಂಡಳಿ ತೀರ್ಮಾನಿಸಿತು ಎಂದು ತಿಳಿಸಿದರು. ನಿಖಿಲ್ ಕುಮಾರಸ್ವಾಮಿ ಅವರು ರಾಜ್ಯದ ಉದ್ದಗಲಕ್ಕೂ ಕೈಗೊಂಡಿರುವ ಸಂಘಟನಾತ್ಮಕ ಪ್ರವಾಸ

■ 11ನೇ ಪುಟಕ್ಕೆ

ಪ್ರಮುಖ ನಿರ್ಣಯ

"ಜೆಡಿಎಸ್ ರಾಷ್ಟ್ರೀಯ ಮಂಡಳಿ ಸಭೆಯಲ್ಲಿ ರೈತರ ಪರವಾಗಿ ಹಾಗೂ ಪಕ್ಷ ಸಂಘಟನೆ ಬಗ್ಗೆ ಎರಡು ಮಹತ್ವದ ನಿರ್ಣಯಗಳನ್ನು ಕೈಗೊಳ್ಳಲಾಗಿದ್ದು, ಈ ನಿರ್ಣಯಗಳಿಗೆ ಶನಿವಾರ ನಡೆಯಲಿರುವ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಅಂಗೀಕಾರ ಪಡೆಯಲಾಗುವುದು.

-ಸುರೇಶ್ ಬಾಬು,
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ



ಬೆಂಗಳೂರಿನಲ್ಲಿ ಜೆಡಿಎಸ್ ಪಕ್ಷದ ಬೆಳ್ಳಿಹಬ್ಬ ಸಂಭ್ರಮ ಹಾಗೂ ಪಕ್ಷದ ರಾಷ್ಟ್ರೀಯ ಮಂಡಳಿ ಸಭೆಯನ್ನು ರಾಷ್ಟ್ರೀಯ ಅಧ್ಯಕ್ಷ ಹೆಚ್.ಡಿ.ದೇವೇಗೌಡರು ಉದ್ಘಾಟಿಸಿ, ಮಾತನಾಡಿದರು. ಈ ವೇಳೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಯುವ ಜೆಡಿಎಸ್ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಪಕ್ಷದ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು ಮತ್ತಿತರರಿದ್ದರು.

ಇಂದು ಯಾರು ಸಿಎಂ ಆಗಿದ್ದಾರೋ ಅವ್ರೇ ಅಂದು ನಮ್ಮ ಸರ್ಕಾರ ಉರುಳಿಸಿದರು

ಹೆಸರು ಹೇಳದೇ ಸಿಎಂ ಸಿದ್ದರಾಮಯ್ಯಗೆ ಕುಟುಕಿದ ಹೆಚ್.ಡಿ.ದೇವೇಗೌಡರು

ಬೆಂಗಳೂರು, ನ.21– ರಾಜ್ಯ ಕಾಂಗ್ರೆಸ್‌ನಲ್ಲಿ ನವೆಂಬರ್ ಕ್ರಾಂತಿ ಚರ್ಚೆ ಜೋರಾಗಿದೆ. ರಾಜ್ಯದಲ್ಲಿ ನಡೆಯುತ್ತಿರುವ ಕುರ್ಚಿ ಕದನ ಕಾಂಗ್ರೆಸ್ ಹೈಕಮಾಂಡ್ ಅಂಗಳ ತಲುಪಿದೆ. ಈ ಮಧ್ಯೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಸ್ಫೋಟಕ ಹೇಳಿಕೆ ನೀಡಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಸರು ಹೇಳದೇ ಪರೋಕ್ಷವಾಗಿ ವಾಗ್ದಾಳಿ ನಡೆಸಿದ ಅವರು, ಇವತ್ತು ಯಾರು ಮುಖ್ಯಮಂತ್ರಿ ಆಗಿದ್ದಾರೋ ಅವರೇ ಅವತ್ತು ನಮ್ಮ ಸರ್ಕಾರ ಉರುಳಿಸಿದರು ಎಂದು ಹೇಳುವ ಮೂಲಕ ಸಂಚಲನ ಸೃಷ್ಟಿಸಿದ್ದಾರೆ.

ಜೆಡಿಎಸ್ ಪಕ್ಷಕ್ಕೆ 25 ವರ್ಷ ತುಂಬಿದ ಹಿನ್ನೆಲೆ ಬೆಂಗಳೂರಿನಲ್ಲಿರುವ ಪಕ್ಷದ ಕಚೇರಿ ಜೆಪಿ ಭವನದ ಆವರಣದಲ್ಲಿ ನಡೆದ ಜೆಡಿಎಸ್ ರಜತ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹಿಂದಿನ ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರದ ಪತನ ವಿಚಾರವನ್ನು ಪ್ರಸ್ತಾಪಿಸಿ, ಸಿಎಂ ಸಿದ್ದರಾಮಯ್ಯ ವಿರುದ್ಧ ಪರೋಕ್ಷವಾಗಿ ಕಿಡಿಕಾರಿದರು. ಈಗಿರುವ ಮುಖ್ಯಮಂತ್ರಿಯೇ 18 ಜನರನ್ನು ದೆಹಲಿಗೆ ಕಳುಹಿಸಿ, ಅಂದಿನ ಮೈತ್ರಿ ಸರ್ಕಾರವನ್ನು ಉರುಳಿಸಿದ್ದರು. ಸತ್ಯಕ್ಕೆ ಬೆಲೆ ಇದೆ, ಸತ್ಯ ಮುಚ್ಚಿಡಲು ಆಗಲ್ಲ, ಯಾರೂ ತಪ್ಪಿಸಿ ಕೊಳ್ಳೋಕೆ ಆಗಲ್ಲ, ದೈವದ ಅನುಗ್ರಹ ಇರುತ್ತದೆ ಎನ್ನುವ ಮೂಲಕ ದೇವೇಗೌಡರು ಸಿಎಂ ಸಿದ್ದರಾಮಯ್ಯ ಅವರನ್ನು ಮಾತಿನಲ್ಲೇ ಕುಟುಕಿದರು.

ಮುಂದುವರೆದು ಮಾತನಾಡಿದ ಅವರು, ನಾಳೆ ಮತ್ತೆ ಮಾತನಾಡುತ್ತೇನೆ ಎಂದು ಹೇಳುವ ಮೂಲಕ ಕುತೂಹಲ ಮೂಡಿಸಿದರು. ಕುಮಾರಸ್ವಾಮಿ ಅವರು ಎರಡು ಬಾರಿ ಮುಖ್ಯಮಂತ್ರಿ ಆಗಿ ಅನುಭವ ಪಡೆದುಕೊಂಡಿದ್ದಾರೆ. ರಾಜ್ಯದ ಸಮಸ್ಯೆ ಅವರಿಗೆ ಗೊತ್ತಿದೆ, ರಾಜ್ಯದಲ್ಲಿ ಮತ್ತೆ ಜೆಡಿಎಸ್ ತಲೆ ಎತ್ತಿ ನಿಲ್ಲಬೇಕು. ಬಾಕಿ ವಿಚಾರಗಳನ್ನು ನಾಳೆ

■ 11ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಮನೆ ಯಜಮಾನಿ (ಕೆಲಸದವಳಿಗೆ) : ನೀನು ಮದುವೆ ಆಗುತ್ತಿದ್ದೀಯಾ. ಇನ್ನೆಲ್ಲಿ ನಮ್ಮ ಮನೆ ಕೆಲಸಕ್ಕೆ ಬರುತ್ತೀಯಾ?
ಕೆಲಸದಾಕೆ : ಖಂಡಿತ ಬರ್ತೀನಮ್ಮ, ನಾನು ಮದುವೆ ಆಗುತ್ತಿರುವುದು ನಿಮ್ಮ ಮಗನ್ನೆ!

ಮೈಸೂರು ಮಿತ್ರ

ಶನಿವಾರ, 22 ನವೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಎಷ್ಟೇ ಕಷ್ಟವಿದ್ದರೂ ಹೊತ್ತು ಸಾಗಬೇಕು. ಇನ್ನೊಬ್ಬರಿಗೆ ಹೇಳಿಕೊಳ್ಳಲು ಆಗಲ್ಲ. ಹಂಚಿಕೊಳ್ಳಲು ಆಗಲ್ಲ. ಬಂದಿದ್ದು ಅನುಭವಿಸಲೇಬೇಕು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ದುಷ್ಟರ ಸಂಗದಿ ನೆರಳು ಕೊಯ್ಯದೆ ಬಿಡದು ಕೊರಳು.

ನಿಮ್ಮ ಪತ್ರಗಳು

ಮೌಢ್ಯತೆಗೆ ಇತಿಶ್ರೀ ಹಾಡಿದ ಸಿಎಂ ಸಿದ್ದರಾಮಯ್ಯ

ಮಾನ್ಯರೆ,

ಕಂದಾಚಾರ, ಮೌಢ್ಯತೆ, ಮೂಢನಂಬಿಕೆಗಳನ್ನು ವಿರೋಧಿಸುತ್ತಾ ಬರುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಚಾಮರಾಜನಗರಕ್ಕೆ ಭೇಟಿ ನೀಡಿದರೆ ಅಧಿಕಾರವನ್ನು ಕಳೆದುಕೊಳ್ಳುತ್ತಾರೆ ಎಂಬ ಹಣೆಪಟ್ಟಿಯನ್ನು ದೂರ ಮಾಡಿದ್ದಾರೆ. ಇತ್ತೀಚೆಗೆ ಚಾಮರಾಜನಗರದಲ್ಲಿ ನಡೆದ ಅಖಿಲ ಭಾರತ ಸಹಕಾರ ಸಪ್ತಾಹ ಸಮಾರೋಪ ಸಮಾರಂಭಕ್ಕೆ ಒಂಬತ್ತನೇ ಬಾರಿಗೆ ಭೇಟಿ ನೀಡುವುದರ ಮೂಲಕ ಮೌಢ್ಯತೆಗೆ ಇತಿಶ್ರೀ ಹಾಡಿದ್ದಾರೆ. ಚಾಮರಾಜನಗರ ಜಿಲ್ಲೆಯ ಜನತೆಯ ಮನಸ್ಸನ್ನು ಗೆದ್ದು ಅವರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಶಾಪಗ್ರಸ್ತ ಜಿಲ್ಲೆ ಎಂಬ ಹಣೆಪಟ್ಟಿಯನ್ನು ತೆಗೆದು ಹಾಕಿದ್ದಾರೆ. ಕರ್ನಾಟಕದ ಮುಖ್ಯಮಂತ್ರಿಯಾದವರು ಚಾಮರಾಜನಗರ ಕೇಂದ್ರ ಸ್ಥಾನಕ್ಕೆ ಭೇಟಿ ನೀಡಲು ಹಿಂದೇಟು ಹಾಕುತ್ತಾರೆ. ಯಾಕೆಂದರೆ ಅಧಿಕಾರ ಕಳೆದುಕೊಳ್ಳುತ್ತೇವೆ ಎಂಬ ಭಯ ಅವರನ್ನು ಕಾಡುತ್ತಿರುತ್ತದೆ. ಕಾಕತಾಳೀಯವೆಂಬಂತೆ ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ದೇವರಾಜ್ ಅರಸ್, ಆರ್. ಗುಂಡೂರಾವ್, ರಾಮಕೃಷ್ಣ ಹೆಗಡೆ, ಎಸ್.ಆರ್. ಬೊಮ್ಮಾಯಿ, ಮತ್ತು ವೀರೇಂದ್ರ ಪಾಟೀಲ್ ಇವರು ಭೇಟಿ ನೀಡಿ ನಂತರ ತಮ್ಮ ಅಧಿಕಾರವನ್ನು ಕಳೆದುಕೊಂಡಿದ್ದಾರೆ. ಇದಕ್ಕೆ ತದ್ವಿರುದ್ಧ ಎಂಬಂತೆ ಸಿದ್ದರಾಮಯ್ಯನವರು ಮಾತ್ರ ಅನೇಕ ಬಾರಿ ಚಾಮರಾಜನಗರಕ್ಕೆ ಭೇಟಿ ನೀಡುವುದರ ಮೂಲಕ ಅಲ್ಲಿಯ ಜನರ ವಿಶ್ವಾಸವನ್ನು ಗಳಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಈ ನಂಬಿಕೆಯನ್ನು ಸುಳ್ಳು ಮಾಡಲು ಚಾಮರಾಜನಗರ ಜಿಲ್ಲೆಯ ಶ್ರೀ ಮಲೈ ಮಹದೇಶ್ವರ ಬೆಟ್ಟದಲ್ಲಿ ಸಚಿವ ಸಂಪುಟ ಸಭೆ ನಡೆಸಿ ಜಿಲ್ಲೆಯ ಮೇಲಿನ ಮೂಢನಂಬಿಕೆಯ ಕಳಂಕವನ್ನು ಹೋಗಲಾಡಿಸಿ ಮುನ್ನುಡಿಯನ್ನೇ ಬರೆದಿದ್ದಾರೆ.

–ಪರಶಿವಮೂರ್ತಿ ಎನ್ ಪಿ, ನಂಜೀಪುರ, ಸರಗೂರು ತಾ.

ಶಬರಿಮಲೆ ಯಾತ್ರೆ ಕಂಟಕವಾಗದಿರಲಿ

ಮಾನ್ಯರೆ,

ಈ ತಿಂಗಳಲ್ಲಿ ಎಲ್ಲೆಲ್ಲೂ ಶಬರಿಮಲೆ ಯಾತ್ರಿಕರ ಭಕ್ತರ ದಂಡು ಕಾಣಿಸಿಕೊಳ್ಳುತ್ತಿದೆ. ಚಿಕ್ಕ ಮಕ್ಕಳು ಹಾಗೂ 50ರ ನಂತರ ಮಹಿಳೆಯರು ಭಕ್ತಿ ಭಾವದಿಂದ ಯಾತ್ರೆಯನ್ನು ಕೈಗೊಳ್ಳುತ್ತಾರೆ. ವರ್ಷದಿಂದ ವರ್ಷಕ್ಕೆ ಶಬರಿಯಾತ್ರೆಗೆ ಹೋಗುವ ಭಕ್ತರ ಸಂಖ್ಯೆ ಮಿತಿಮೀರಿ ಹೆಚ್ಚಾಗುತ್ತಿದೆ. ಅಲ್ಲಿ ಅನುಕೂಲದ ಕೊರತೆಯು ಕಾಣಿಸಿಕೊಳ್ಳುತ್ತಿದೆ. ಈಗಾಗಲೇ ಕೇರಳದಲ್ಲಿ ಅಮೀಬಾ ಕಾಯಿಲೆ ಕಾಣಿಸಿಕೊಂಡಿದೆ. ಇದು ನೀರಿನಿಂದ ಹರಡುವ ಕಾಯಿಲೆಯಾಗಿದೆ. ಜನ ಇದರ ಬಗ್ಗೆ ಎಚ್ಚೆತ್ತುಕೊಳ್ಳಬೇಕಾಗಿದೆ. ಸ್ನಾನ ಮಾಡುವಾಗ ಮೂಗಿನಿಂದ ಅಮೀಬಾ ಎಂಬ ವೈರಸ್ ಪ್ರವೇಶಿಸಿದರೆ ಮೆದುಳನ್ನು ಸೇರಿ ಕಾಯಿಲೆಯನ್ನು ಹರಡುತ್ತದೆ. ಜನ ಇದರ ಬಗ್ಗೆ ಎಚ್ಚೆತ್ತುಕೊಳ್ಳಬೇಕಾಗಿದೆ. ಈಗಾಗಲೇ ಭಕ್ತರ ಸಂಖ್ಯೆ ಹೆಚ್ಚಾದಂತೆಲ್ಲ ಉಸಿರಾಟದ ತೊಂದರೆ ಕಾಲು ತುಳಿತ, ಹೃದಯಾಘಾತದಿಂದ ಸಾವನ್ನಪ್ಪುವವರ ಸಂಖ್ಯೆ ಹೆಚ್ಚಾಗುತ್ತಿದೆ. ಕೇರಳ ಸರ್ಕಾರ ದೇವರ ದರ್ಶನಕ್ಕೆ ಜನರನ್ನು ಮಿತಿಗೊಳಿಸಿ ಹೀಗೆ ಹೆಚ್ಚಿನ ಸಂಖ್ಯೆಯಲ್ಲಿ ನೂಕು ನುಗ್ಗಲು ಆರಂಭವಾದರೆ ನಿಯಂತ್ರಿಸಲು ಕಷ್ಟವಾಗುತ್ತದೆ. ದಿನಕ್ಕೆ ಇಷ್ಟು ಯಾತ್ರಿಕರೆಂದು ಕಡ್ಡಾಯಗೊಳಿಸಿ ಸಾವು ನೋವು ಸಂಭವಿಸುವ ಮುನ್ನ ಮುಂಜಾಗ್ರತೆ ಅವಶ್ಯವಾಗಿರುತ್ತದೆ. ಇದರ ಬಗ್ಗೆ ಯೋಚನೆ ಅಗತ್ಯವಾಗಿದೆ. ಜನಹಿತದೃಷ್ಟಿಯಿಂದ ಇದರ ಬಗ್ಗೆ ಆಲೋಚನೆ ಮಾಡಿ ಕ್ರಮ ಕೈಗೊಳ್ಳಬೇಕೆಂದು ಮನವಿ.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು

ದೇವಾಲಯಗಳ ಜೀರ್ಣೋದ್ಧಾರಕ್ಕೆ ಪ್ರಸ್ತಾವನೆ

ಮಾನ್ಯರೆ,

ಸನಾತನ ಧರ್ಮದ ಸಂರಕ್ಷಣೆಯ ನಿಟ್ಟಿನಲ್ಲಿ ದೇಶದಾದ್ಯಂತ ಅಳಿವಿನಂಚಿನಲ್ಲಿರುವ ದೇವಾಲಯಗಳ ಜೀರ್ಣೋದ್ಧಾರ ಮಾಡುವ ದೃಷ್ಟಿಯಿಂದ ಆಲ್ ಇಂಡಿಯಾ ಓಲ್ಡ್ ಟೆಂಪಲ್ ರಿನೋವೇಷನ್ ಟ್ರಸ್ಟ್ ಸ್ಥಾಪನೆ ಮಾಡಲಾಗಿದೆ ಎಂದು ಟ್ರಸ್ಟ್‌ನ ಸಂಸ್ಥಾಪಕ ರಾಷ್ಟ್ರೀಯ ಅಧ್ಯಕ್ಷ ರವಿಕುಮಾರ್ ಜೈನ್ ತಿಳಿಸಿರುವುದು ಶ್ಲಾಘನೀಯ ಸಂಗತಿ. ದೇಶದಲ್ಲಿ 1947ರಲ್ಲಿ ಹದಿನೇಳೂವರೆ ಲಕ್ಷ ದೇವಾಲಯಗಳು ಇದ್ದದ್ದು, ಈಗ 7 ಲಕ್ಷಕ್ಕೆ ಇಳಿದಿದೆ. ಈ ದೇವಾಲಯಗಳನ್ನು ಉಳಿಸಿ ಮುಂದಿನ ಪೀಳಿಗೆಗೆ ಕೊಡುಗೆಯಾಗಿ ನೀಡಬೇಕಿರುವುದು ನಮ್ಮ ಆದ್ಯ ಕರ್ತವ್ಯ ಎಂದು ಹೇಳಿರುವುದು ಸ್ವಾಗತಾರ್ಹ ಸಂಗತಿ. ಸಂಸದ ಯದುವೀರ ಕೃಷ್ಣದತ್ತ ಒಡೆಯರ್ ಅವರು ಈ ಕಾರ್ಯದಲ್ಲಿ ಕೈಜೋಡಿಸಿ, ಸುಮಾರು 200 ವರ್ಷಗಳ ಇತಿಹಾಸ ಹೊಂದಿರುವ ಬಿಳಿಕೆರೆಯ ಶ್ರೀ ಲಕ್ಷ್ಮೀಕಾಂತ ದೇವಾಲಯದ ಜೀರ್ಣೋದ್ಧಾರ ಕಾರ್ಯ ಆರಂಭಿಸುವಂತೆ ಸಲಹೆ ನೀಡಿರುವುದು ಮೆಚ್ಚುವಂತದ್ದು. ಬಿಳಿಕೆರೆಯ ದೇವಾಲಯವೂ ಸೇರಿದಂತೆ ರಾಜ್ಯದಲ್ಲಿ 10 ದೇವಾಲಯಗಳನ್ನು ಜೀರ್ಣೋದ್ಧಾರಕ್ಕಾಗಿ ಗುರುತಿಸಿರುವುದು ಒಳ್ಳೆಯ ಬೆಳವಣಿಗೆ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ಅರುಣ್ ಯೋಗಿರಾಜ್‌ಗೆ ಭಾರತೀಯ ಸಂಸ್ಕೃತಿ ಕಲಾ ಪುರಸ್ಕಾರ



ಗುರುವಾರ (ನ.20) ಗುಜರಾತ್‌ನ ಅಹ್ಮದಾಬಾದ್‌ನಲ್ಲಿ ನಡೆದ ಖಾಸಗಿ ಕಾರ್ಯಕ್ರಮ ಅದಾನಿ ಅಂಡ್ ಗ್ರೂಪ್‌ನ ಗ್ಲೋಬಲ್ ಇಂಡೋಲಜಿ ಕಾನ್‌ಕ್ಲೇವ್–2025 ಇದರಲ್ಲಿ ಶಿಲ್ಪಕಲೆ ಕ್ಷೇತ್ರದಲ್ಲಿನ ಅಪ್ರತಿಮ ಸಾಧನೆ ಪರಿಗಣಿಸಿ ಮೈಸೂರಿನ ಖ್ಯಾತಶಿಲ್ಪಿ ಅರುಣ್ ಯೋಗಿರಾಜ್ ಅವರಿಗೆ ಅದಾನಿ ಗ್ರೂಪ್‌ನ ಗೌತಮ್ ಅದಾನಿ ಅವರು, 'ಭಾರತೀಯ ಸಂಸ್ಕೃತಿ ಕಲಾ ಪುರಸ್ಕಾರ' ನೀಡಿ ಗೌರವಿಸಿದರು.

ಅಪ್ರಾಪ್ತರ ಕೈಗೆ ವಾಹನ ಕೊಟ್ಟವರಿಗೆ ದಂಡ ಮಾತ್ರವಲ್ಲ, ಜೈಲು ಶಿಕ್ಷೆಯೂ ಆಗಬಹುದು

ಅಪ್ರಾಪ್ತ ವಯಸ್ಸಿನ ಬಾಲಕ–ಬಾಲಕಿಯರು ವಾಹನ ಸವಾರಿ, ಚಾಲನೆ ಮಾಡುವುದು ಮೋಟಾರು ವಾಹನ ಕಾಯಿದೆಯ ಅನ್ವಯ ಶಿಕ್ಷಾರ್ಹ ಅಪರಾಧ.

ಇಂತಹ ಮಕ್ಕಳು ಬಾಲಾಪರಾಧ ತಡೆ ಕಾಯಿದೆ ಅನ್ವಯ ವಿಚಾರಣೆ ಎದುರಿಸುವುದರ ಜೊತೆಗೆ ಅಂತಹ ಮಕ್ಕಳಿಗೆ ಸವಾರಿ, ಚಾಲನೆ ಮಾಡಲು ವಾಹನ ನೀಡಿದ ಪೋಷಕರು ಮತ್ತು ವಾಹನದ ಮಾಲೀಕರಿಗೆ ನ್ಯಾಯಾಲಯವು ರೂ.25 ಸಾವಿರ ದಂಡ ವಿಧಿಸಬಹುದು ಹಾಗೂ ಅಂತಹ ಪೋಷಕರಿಗೆ ಮೂರು ವರ್ಷಗಳ ಸೆರೆವಾಸದ ಶಿಕ್ಷೆಯನ್ನೂ ವಿಧಿಸಬಹುದು. ಜೊತೆಗೆ ಅಪ್ರಾಪ್ತ ವಯಸ್ಸಿನ ಮಕ್ಕಳು ಚಲಾಯಿಸಿದ ಇಲ್ಲವೆ ಸವಾರಿ ಮಾಡಿದ ವಾಹನದ ನೋಂದಣಿಯನ್ನು ಒಂದು ವರ್ಷದ ಅವಧಿಗೆ ರದ್ದು ಮಾಡಬಹುದು. ಅದರೊಂದಿಗೆ ವಾಹನ ಸವಾರಿ ಮಾಡಿದ ಇಲ್ಲವೆ ಚಲಾಯಿಸಿದ ಅಪ್ರಾಪ್ತ ವಯಸ್ಸಿನ ಬಾಲಕ–ಬಾಲಕಿಗೆ 25 ವರ್ಷ ತುಂಬುವವರೆಗೆ ಚಾಲನಾ ಪರವಾನಗಿ ನೀಡದಂತೆ ಕ್ರಮ ಕೈಗೊಳ್ಳಬಹುದು.

ಅಕಸ್ಮಾತ್ ಅಪ್ರಾಪ್ತ ವಯಸ್ಸಿನ ಮಕ್ಕಳು ವಾಹನ ಸವಾರಿ, ಚಾಲನೆ ಮಾಡಿ ಅಪಘಾತ ಎಸಗಿ ಬೇರೆಯವರಿಗೆ ಗಾಯ ಉಂಟಾದರೆ ಅಥವಾ ಪ್ರಾಣಹಾನಿ ಸಂಭವಿಸಿದರೆ ಅಂತಹ ವಾಹನಕ್ಕೆ ಮಾಡಿಸಿರುವ ವಿಮೆ ಉಪಯೋಗಕ್ಕೆ ಬರುವುದಿಲ್ಲ. ಅಂತಹ ಸಮಯದಲ್ಲಿ ಆ ವಾಹನದ ಮಾಲೀಕರೇ ಪರಿಹಾರ ನೀಡಬೇಕಾಗುತ್ತದೆ. ಆಗ ಆ ಪೋಷಕರು ತಮ್ಮ ಮನೆ–ಮಠ ಮಾರಿಕೊಂಡು ಬೀದಿಗೆ ಬರಬೇಕಾಗುತ್ತದೆ.

ಅಪ್ರಾಪ್ರ ವಯಸ್ಸಿನ ಮಗನಿಗೆ ವಾಹನ ಸವಾರಿ ಮಾಡಲು ಅವಕಾಶ ನೀಡಿದ ಆರೋಪಿಗೆ ಮೈಸೂರಿನ ಜೆಎಂಎಫ್‌ಸಿ ಎರಡನೇ ನ್ಯಾಯಾಲಯವು 25 ಸಾವಿರ ರೂಪಾಯಿ ದಂಡ ವಿಧಿಸಿದೆ. ಈಗಾಗಲೇ ರಾಜ್ಯದ ಹಲವು ನ್ಯಾಯಾಲಯಗಳು ಇಂತಹ ಪ್ರಕರಣಗಳಲ್ಲಿ ಬೇಜವಾಬ್ದಾರಿಯುತ ಪೋಷಕರಿಗೆ 25 ಸಾವಿರ ರೂಪಾಯಿ ದಂಡ ವಿಧಿಸುವ ಜೊತೆಗೆ ಕೆಲವು ದಿನಗಳ ಸೆರೆವಾಸವನ್ನೂ ವಿಧಿಸಿವೆ. ಆದರೂ ಸಹ ಇಂತಹ ಬೇಜವಾಬ್ದಾರಿ ಪೋಷಕರು ಎಚ್ಚೆತ್ತುಕೊಂಡಿಲ್ಲ. ಕಾನೂನಿನ ಅಜ್ಞಾನ ಕ್ಷಮಾರ್ಹವಲ್ಲ ಎನ್ನುತ್ತದೆ ನ್ಯಾಯಶಾಸ್ತ್ರ.



> ಈ ಮಾಹಿತಿಯನ್ನು ವ್ಯಾಪಕವಾಗಿ ಪ್ರಚಾರ ಮಾಡಬೇಕು. ಶಾಲಾ ಪಠ್ಯಪುಸ್ತಕದಲ್ಲಿ ಸೇರಿಸುವುದು ಒಳ್ಳೆಯದು. ಜೊತೆಗೆ ಪ್ರತಿಯೊಂದು ಶಾಲಾ–ಕಾಲೇಜು, ಟ್ಯೂಷನ್ ಕೇಂದ್ರಗಳ ಪ್ರವೇಶ ದ್ವಾರದಲ್ಲಿ ಫ್ಲೆಕ್ಸ್ ಮೂಲಕ ಎಚ್ಚರಿಕಾ ಸಂದೇಶ ನೀಡುವ ಕ್ರಮಕ್ಕೂ ಪೊಲೀಸ್ ಆಯುಕ್ತರು ಮುಂದಾಗಬೇಕಿದೆ.

ನನಗೆ ಕಾನೂನಿನ ಅರಿವಿರಲಿಲ್ಲ ಎನ್ನುವ ಮೂಲಕ ಪೋಷಕರು ಶಿಕ್ಷೆಯಿಂದ ತಪ್ಪಿಸಿಕೊಳ್ಳಲಾಗದು. ಈ ವಿಚಾರವಾಗಿ ಕಾನೂನಿನ ಅರಿವಿದ್ದೂ ಪೋಷಕರು ತಮ್ಮ ಮಕ್ಕಳಿಗೆ ಸವಾರಿ ಮಾಡಲು ವಾಹನ ನೀಡುತ್ತಿದ್ದಾರೆ ಎಂದರೆ ಅದು ಅವರ ದುರಹಂಕಾರಕ್ಕೆ ಸಾಕ್ಷಿ.

ಹಲವಾರು ಪೋಷಕರು ತಮ್ಮ ಪುಟ್ಟ ಮಕ್ಕಳನ್ನು ದ್ವಿಚಕ್ರವಾಹನದ ಮುಂದೆ ಕೂರಿಸಿಕೊಂಡು ರಾಜಾರೋಷವಾಗಿ ನಗರದ ಮುಖ್ಯರಸ್ತೆಗಳಲ್ಲಿ ಮಕ್ಕಳಿಂದಲೇ ವಾಹನ ಸವಾರಿ ಮಾಡಿಸುತ್ತಿದ್ದಾರೆ. ಶಾಲೆಗೆ ತೆರಳುವಾಗ ಇಂತಹ ಬೇಜವಾಬ್ದಾರಿ ಪೋಷಕರು ಮಕ್ಕಳ ಕೈಗೆ ವಾಹನ ನೀಡಿ ತಾವು ಹಿಂದೆ ಕುಳಿತು ಬೀಗುತ್ತಿರುತ್ತಾರೆ.



ಪಿ.ಜೆ.ರಾಘವೇಂದ್ರ
ನ್ಯಾಯವಾದಿ
ಮೈಸೂರು

ಇದು ದಂಡನಾರ್ಹ ಅಪರಾಧ ಎಂಬ ಅರಿವು ಅಂತಹ ಬೇಜವಾಬ್ದಾರಿ ಪೋಷಕರಿಗಿಲ್ಲ. ಅಥವಾ ಆ ಪೋಷಕರಿಗೆ ಹಣದ ಮದ ಇರಬಹುದು. ಅಷ್ಟೇ ಅಲ್ಲ. ಶಾಲೆ, ಕಾಲೇಜು ಹಾಗೂ ಟ್ಯೂಷನ್ ಕೇಂದ್ರಗಳಿಗೆ ಅಪ್ರಾಪ್ತ ವಯಸ್ಸಿನ ವಿದ್ಯಾರ್ಥಿಗಳು ದ್ವಿಚಕ್ರ ವಾಹನಗಳನ್ನು ಸವಾರಿ ಮಾಡುತ್ತಾ ಶಾಲೆ, ಕಾಲೇಜು ಹಾಗೂ ಟ್ಯೂಷನ್ ಕೇಂದ್ರಗಳಿಗೆ ಹೋಗಿ ಬರುತ್ತಿದ್ದಾರೆ. ಅದರಲ್ಲೂ ವಾಹನ ಸವಾರಿ ಮಾಡುವ ಹೈಸ್ಕೂಲ್ ಮಕ್ಕಳ ಸಂಖ್ಯೆ ಹೆಚ್ಚಾಗಿದೆ.

ಈ ವಿಚಾರವಾಗಿ ಶಾಲಾ ಕಾಲೇಜು ಹಾಗೂ ಟ್ಯೂಷನ್ ಕೇಂದ್ರಗಳ ಶಿಕ್ಷಕ ವೃಂದಕ್ಕೂ ಕಾನೂನು ಅರಿವು ಇದ್ದಂತಿಲ್ಲ. ಈ ವಿಚಾರವನ್ನು ಶಾಲೆ ಕಾಲೇಜು ಹಾಗೂ ಟ್ಯೂಷನ್ ಕೇಂದ್ರಗಳ ಗಮನಕ್ಕೆ ತಂದರೂ ಅವರು ತಿದ್ದಿಕೊಂಡಿಲ್ಲ. ಶಾಲಾ–ಕಾಲೇಜು ಹಾಗೂ ಟ್ಯೂಷನ್ ಕೇಂದ್ರದ ಬಳಿ ಸಾಲಾಗಿ ನಿಂತ ದ್ವಿಚಕ್ರ ವಾಹನಗಳೇ ಇದಕ್ಕೆ ಸಾಕ್ಷಿ.

ಅಪ್ರಾಪ್ತ ವಯಸ್ಸಿನ ಮಕ್ಕಳು ವಾಹನ ಸವಾರಿ, ಚಾಲನೆ ಮಾಡಿದರೆ ಅವರ ಪೋಷಕರಿಗೆ ಶಿಕ್ಷೆ ಆಗುತ್ತದೆ ಎಂಬ ಮಾಹಿತಿಯನ್ನು ಶಾಲಾ ಪಠ್ಯ ಪುಸ್ತಕದ ಪಠ್ಯದ ಮೂಲಕ ಮಕ್ಕಳಿಗೆ ತಿಳಿಸಿದರೆ ಈ ಮಕ್ಕಳಿಗೆ ಅರಿವು ಮೂಡಬಹುದು.ಈ ಮಾಹಿತಿ ಪಠ್ಯದಲ್ಲಿ ಇದ್ದರೆ ಶಿಕ್ಷಕ ವೃಂದಕ್ಕೂ ಜ್ಞಾನೋದಯ ಆಗಬಹುದು. ಹಾಗಾಗಿ ಪಠ್ಯಪುಸ್ತಕ ಸಮಿತಿಯು ಈ ವಿಚಾರವಾಗಿ ಚಿಂತಿಸಿ ಈ ಮಾಹಿತಿಯನ್ನು ಪಠ್ಯದಲ್ಲಿ ತಕ್ಷಣ ಅಳವಡಿಸುವ ಮೂಲಕ ಮಕ್ಕಳು, ಶಿಕ್ಷಕರು ಹಾಗೂ ಪೋಷಕರಲ್ಲಿ ಕಾನೂನು ಅರಿವು ಮೂಡಿಸಬೇಕಾಗಿದೆ.

ಶಾಲಾ–ಕಾಲೇಜುಗಳು ಪುನರಾರಂಭವಾಗುವ ಮುನ್ನ ಈ ಮಾಹಿತಿಯನ್ನು ಶಾಲಾ ಪಠ್ಯದಲ್ಲಿ ಸೇರಿಸುವುದರ ಜೊತೆಗೆ ಈ ಮಾಹಿತಿಯನ್ನು ಪೊಲೀಸರು ಪೋಸ್ಟರ್ ಅಥವಾ ಫ್ಲೆಕ್ಸ್ ಮೂಲಕ ಪ್ರತಿಯೊಂದು ಶಾಲಾ–ಕಾಲೇಜು ಹಾಗೂ ಟ್ಯೂಷನ್ ಕೇಂದ್ರದ ಪ್ರವೇಶದ್ವಾರದಲ್ಲಿ ಕಡ್ಡಾಯವಾಗಿ ಪ್ರಕಟಣೆಯನ್ನು ಪ್ರದರ್ಶಿಸಲು ಪೊಲೀಸ್ ಇಲಾಖೆ ನಿರ್ದೇಶನ ನೀಡಬೇಕಿದೆ.

ಲಾ ಓದುವಾಗ ಚಕ್ಕರ್ ಹೊಡೆದು ಪ.ಮಲ್ಲೇಶ್ ಜೊತೆ ಹೋಗುತ್ತಿದ್ದೆ...

● ದೋಸ್ತ್ ನೆನೆದು ಬಾವುಕರಾದ ಮುಖ್ಯಮಂತ್ರಿ ಸಿದ್ದರಾಮಯ್ಯ ● ಅಂಗಾಯತರಾಗಿ ಹುಟ್ಟಿದ್ದರೂ ಜಾತಿ ವ್ಯವಸ್ಥೆಯಲ್ಲಿ ಪ.ಮಲ್ಲೇಶ್ ನಂಬಿಕೆ ಇಟ್ಟವರಲ್ಲಾ ● ಪ.ಮಲ್ಲೇಶರ ಎರಡು ಕೃತಿಗಳ ಬಿಡುಗಡೆ

ಮೈಸೂರು,ನ.21(ಎಸ್‌ಪಿಎನ್)–ಸಮಾಜವಾದಿ ಚಿಂತಕ ಪ.ಮಲ್ಲೇಶ್ ನನ್ನ ಮಾರ್ಗದರ್ಶಕರು. ಅವರು, ನಾನು ಲಾ ಓದುವಾಗ ಪರಿಚಯವಾದರು. ಆ ವೇಳೆ ಒಂದು ಗಂಟೆ ತರಗತಿ ಕೇಳಿ, ಇನ್ನುಳಿದ ತರಗತಿಗೆ ಚಕ್ಕರ್ ಹೊಡೆದು, ಮಲ್ಲೇಶ್ ಅವರ ಜೊತೆ ಸೇರಿಕೊಳ್ಳುತ್ತಿದ್ದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಿಂದಿನ ನೆನಪುಗಳನ್ನು ಮೆಲುಕು ಹಾಕಿದರು.

ಮೈಸೂರು ವಿವಿ ಮಾನಸಗಂಗೋತ್ರಿ ಆವರಣದ ವಿಜ್ಞಾನಭವನದಲ್ಲಿ ಪ್ರಗತಿಪರ ಸಂಘಟನೆಗಳ ಒಕ್ಕೂಟ, ಗಾಂಧಿ ವಿಚಾರ ಪರಿಷತ್ತು ಹಾಗೂ ಮೈಸೂರು ವಿವಿ ವಿದ್ಯಾರ್ಥಿಗಳು ಮತ್ತು ಸಂಶೋಧಕರ ಸಹಯೋಗದೊಂದಿಗೆ ಆಯೋಜಿಸಿದ್ದ ರಾಷ್ಟ್ರೀಯ ವಿಚಾರ ಸಂಕಿರಣ ಹಾಗೂ ಪ.ಮಲ್ಲೇಶ್ ರಚಿತ ಇಂಗ್ಲಿಷ್ ಅನುವಾದಿತ 'ಗಾಂಧೀ ಪ್ರಣೀತ ಧರ್ಮದರ್ಶಿತ್ವ' ಮತ್ತು 'ಬುದ್ಧ ನಾಗಾರ್ಜುನರ ಶೂನ್ಯಯಾನ' ಕೃತಿಗಳನ್ನು ಬಿಡುಗಡೆಗೊಳಿಸಿ ಅವರು, ಮಾತನಾಡಿದರು.

ನಾನು ಲಾ ಓದುವಾಗ ಬೆಳಗ್ಗೆ 8ರಿಂದ 10 ಗಂಟೆಯವರೆಗೆ ಮೂರು ತರಗತಿಗಳು ನಡೆಯುತ್ತಿದ್ದವು. ಅದರಲ್ಲಿ ಒಂದು ತರಗತಿ ಅಟೆಂಡ್ ಮಾಡಿ, ಉಳಿದ ತರಗತಿಗಳಿಗೆ ಚಕ್ಕರ್ ಹೊಡೆಯುತ್ತಿದ್ದೆ. ಬಳಿಕ ಮಲ್ಲೇಶ್ ಪ್ರೆಸ್‌ಗೆ ಹೋಗಿ, ಕೆಲವು ವಿಷಯಗಳ ಬಗ್ಗೆ ಚರ್ಚಿಸಿ, ಯಾವುದಾದರೂ ವಿಷಯದ ಬಗ್ಗೆ ಹೋರಾಟ ರೂಪಿಸಿ, ಕೆ.ಆರ್. ವೃತ್ತದಲ್ಲಿ ಪ್ರತಿಭಟನೆ ಮಾಡುತ್ತಿದ್ದ ಪ್ರಸಂಗವನ್ನು ನೆನೆದರು.

ಪ.ಮಲ್ಲೇಶ್ ಲಿಂಗಾಯತ ಜಾತಿಯಲ್ಲಿ ಹುಟ್ಟಿದರೂ ಎಂದಿಗೂ ಜಾತಿ ವ್ಯವಸ್ಥೆಯಲ್ಲಿ ನಂಬಿಕೆಯಿಟ್ಟವರಲ್ಲಾ. ಅವರು ಇಷ್ಟು ಬೇಗ ಸಾಯಬಾರದಿತ್ತು. ಮಲ್ಲೇಶ್ ಕಾಲವಾಗುವ 6 ತಿಂಗಳ ಹಿಂದೆ ನಾನು, ಮಲ್ಲೇಶ್ ಹಾಗೂ ಪುತ್ರಿ ಸವಿತಾ ಮಲ್ಲೇಶ್ ನೃಪತುಂಗ ಶಾಲೆಯಲ್ಲಿ ಸಭೆ ಸೇರಿದ್ದೆವು. ತದನಂತರ ಅವರನ್ನು ಭೇಟಿಯಾಗಲಿಲ್ಲ. ಕಳೆದ 40 ವರ್ಷಗಳಿಂದ ಮೈಸೂರು ನಗರದಲ್ಲಿ ಪ.ಮಲ್ಲೇಶ್ ನೇತೃತ್ವದಲ್ಲಿ ಹಲವು ಪ್ರತಿಭಟನೆಗಳು ನಡೆದಿವೆ. ಎಲ್ಲವೂ ಮಾನವೀಯತೆಯ ಹಿನ್ನೆಲೆಯಲ್ಲಿ ನಡೆದಂತವು ಎಂದು ಅಭಿಪ್ರಾಯಪಟ್ಟರು.



ಪ.ಮಲ್ಲೇಶ್ ರಚಿತ ಇಂಗ್ಲಿಷ್ ಅನುವಾದಿತ 'ಗಾಂಧೀ ಪ್ರಣೀತ ಧರ್ಮದರ್ಶಿತ್ವ' ಮತ್ತು 'ಬುದ್ಧ ನಾಗಾರ್ಜುನರ ಶೂನ್ಯಯಾನ' ಕೃತಿಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಡುಗಡೆಗೊಳಿಸಿದರು.

ವಿದ್ಯಾವಂತರೇ ಜಾತಿ ವ್ಯವಸ್ಥೆ ಪೋಷಿಸುತ್ತಿದ್ದಾರೆ: ಪ.ಮಲ್ಲೇಶ್ ಅವರು ಅಹಿಂದ ವರ್ಗದವರೊಂದಿಗೆ ಹೆಚ್ಚು ಒಡನಾಟವಿತ್ತು. ಹಿಂದುಳಿದವರನ್ನು ಮುಖ್ಯವಾಹಿನಿಗೆ ತರುವ ಉದ್ದೇಶ ಅವರಲ್ಲಿತ್ತು. ಭಾರತಕ್ಕೆ ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ಶೇ.14ರಷ್ಟು ಸಾಕ್ಷರತೆ ದೇಶದಲ್ಲಿತ್ತು. ಪ್ರಸ್ತುತ ದೇಶದಲ್ಲಿ ಶೇ.78ರಷ್ಟು ಸಾಕ್ಷರತೆ ಇದ್ದರೂ ಜಾತಿ ವ್ಯವಸ್ಥೆ ಕೊನೆಯಾಗಿಲ್ಲ. ವಿದ್ಯಾವಂತರೇ ಜಾತಿ ವ್ಯವಸ್ಥೆಯನ್ನು ಪೋಷಿಸುತ್ತಿರುವುದು ಆತಂಕಕಾರಿ ವಿಷಯ ಎಂದರು.

ವಚನ ಹೇಳಿ, ನಿನ್ನ ಜಾತಿ ಯಾವುದೆಂದರೆ?: ಬಸವಣ್ಣನವರ ಕಾಲದಿಂದಲೂ ಜಾತಿ ವ್ಯವಸ್ಥೆ ನಾಶವಾಗಬೇಕೆಂದು ಹೇಳುತ್ತಿದ್ದೇವೆ. ಆದರೆ, ಇಂದಿಗೂ ಜಾತಿ ವ್ಯವಸ್ಥೆ ಹೋಗಿಲ್ಲ. ನಾನು ಬಿಎಸ್ಸಿ ಮುಗಿಸಿದ ಮೇಲೆ ನಮ್ಮಪ್ಪ ದನಗಳಿಗೆ ನೀರುಣಿಸುವ ಕೆಲಸ ನೀಡಿದ್ದರು. ಆಗ ಬೋರ್‌ವೆಲ್ ಇರಲಿಲ್ಲ. ದೂರದ ಬಾವಿಗಳಿಂದ ನೀರು ತಂದು ದನಗಳಿಗೆ ನೀರುಣಿಸಬೇಕಿತ್ತು. ನಾನು ನೀರು ತರುತ್ತಿದ್ದ ಬಾವಿ ಕಸಕಡ್ಡಿ ಸೇರಿ ಕಲುಷಿತವಾಗಿತ್ತು. ಆ ನೀರು ಸಂಗ್ರಹಿಸುವಾಗ ಕಸಕಡ್ಡಿಗಳನ್ನು ಬಿಂದಿಗೆಯಿಂದ ಬದಿಗೆ ಸರಿಸಿ, ನೀರು ತರುತ್ತಿದ್ದೆ. ಪ್ರತಿಸಲ ಹಾಗೆ ಮಾಡಬೇಕಿತ್ತು. ಅದೇ ರೀತಿ ಸಮಾಜದಲ್ಲಿ ಜಾತಿ ವ್ಯವಸ್ಥೆ ಕಸಕಡ್ಡಿಯಿಂದ ಆವರಿಸಿದೆ. ಎಷ್ಟೇ ಪ್ರಯತ್ನಿಸಿದರೂ ಜಾತಿ ವ್ಯವಸ್ಥೆ ಹೋಗುತ್ತಿಲ್ಲ. ಬಸವಣ್ಣನವರ ವಚನ ಹೇಳಿದ ಮೇಲೂ ನೀನು ಯಾವ ಜಾತಿಯವ ಎಂದು ಕೇಳುವ ವ್ಯವಸ್ಥೆ ಇರುವುದು ನೋವಿನ ವಿಚಾರ ಎಂದರು.

ಜಾತಿ ವ್ಯವಸ್ಥೆ ಚಲನೆರಹಿತ ಸಮಾಜದಲ್ಲಿದೆ: ಚಿಂತಕ ಪ.ಮಲ್ಲೇಶ್ ತಮಗೆ ಎಷ್ಟೇ ಕಷ್ಟ ಎದುರಾದರೂ ಸಿದ್ಧಾಂತದೊಂದಿಗೆ ರಾಜೀ ಮಾಡಿಕೊಂಡಿರಲಿಲ್ಲ. ಹಾಗಾಗಿ ಅವರು ಎಲ್ಲರೊಂದಿಗೂ ನಿಷ್ಠುರವಾಗಿ ಮಾತನಾಡುತ್ತಿದ್ದರು. ಗಾಂಧೀಜಿ, ಲೋಹಿಯಾ ವಿಚಾರ ಮೈಗೂಡಿಸಿಕೊಂಡಿದ್ದ ಪ.ಮಲ್ಲೇಶ್, ಸಮಾಜದಲ್ಲಿನ ವ್ಯವಸ್ಥೆಯನ್ನು ನೋಡಿ, ನಮ್ಮ ಮನಸ್ಸಿನಿಂದ ಗುಲಾಮಗಿರಿ, ಜಾತಿ ವ್ಯವಸ್ಥೆ ಇನ್ನೂ ಹೋಗಿಲ್ಲ ಎಂದು ಕೆಲ ಸಂದರ್ಭಗಳಲ್ಲಿ ಬೇಸರ ವ್ಯಕ್ತಪಡಿಸುತ್ತಿದ್ದರು. ಈ ವ್ಯವಸ್ಥೆ ಅಷ್ಟರಮಟ್ಟಿಗೆ ಸಮಾಜದ ಮೇಲೆ ಪ್ರಭಾವ ಬೀರಿದೆ. ಜಾತಿ ವ್ಯವಸ್ಥೆ ಚಲನರಹಿತ ಸಮಾಜದಲ್ಲಿದೆ. ಅದಕ್ಕೆ ಚಾಲನೆಕೊಟ್ಟಾಗ ಬದಲಾವಣೆ ಸಾಧ್ಯ. ಅದಕ್ಕಾಗಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಶಕ್ತಿ ದೊರೆಯಬೇಕು. ಈ ಹಿನ್ನೆಲೆಯಲ್ಲಿ ಪಂಚ ಗ್ಯಾರಂಟಿ ಯೋಜನೆ ಜಾರಿಗೆ ತಂದಿದ್ದು ಎಂದು ಸಮರ್ಥಿಸಿಕೊಂಡರು.

ಒಮ್ಮೆ ಪ.ಮಲ್ಲೇಶ್, ನನ್ನ ಬಳಿ ಪೊಲೀಸರು ಕೆ.ಆರ್. ವೃತ್ತದಲ್ಲಿ ಪ್ರತಿಭಟನೆ ಮಾಡಲು ಬಿಡುತ್ತಿಲ್ಲ. ನೀನು ಅಧಿಕಾರಕ್ಕೆ ಬಂದ ಮೇಲೆ ಈ ಆದೇಶವನ್ನು ರದ್ದುಪಡಿಸು ಎಂದು ಕೇಳಿದ್ದರು. ಆದರೆ, ಅದು ಸಾಧ್ಯವಾಗಲಿಲ್ಲ. ಅವರ ಆದರ್ಶ ಇಂದಿನ ಯುವಕರಿಗೆ ಮಾದರಿ ಎಂದರಲ್ಲದೆ, ಪ.ಮಲ್ಲೇಶ್ ನಿಧನ ನಂತರ ಹೋರಾಟಕ್ಕೆ, ವಿಚಾರ ಮಂಥನಕ್ಕೆ ಮೈಸೂರಿನಲ್ಲಿ ಶೂನ್ಯ ಆವರಿಸಿದೆ ಎಂದು ಮಲ್ಲೇಶ್ ಅವರ ನೆನೆದು ಭಾವುಕರಾದರು.

> 1983–84ರ ಚುನಾವಣೆಯಲ್ಲಿ ಸ್ಪರ್ಧಿಸಿದ್ದೆ. ಆಗ ಪ.ಮಲ್ಲೇಶ್ ಅವರಿಗೆ ನನ್ನ ಚುನಾವಣಾ ವೆಚ್ಚಕ್ಕಾಗಿ ಹಣ ನೀಡಿದ್ದೆ. ಚುನಾವಣೆ ಮುಗಿದ ಮೇಲೆ ಎಲ್ಲಾ ವೆಚ್ಚಗಳನ್ನು ನಮೂದಿಸಿ, ಉಳಿದ 1.75 ಲಕ್ಷ ಹಣವನ್ನು ವಾಪಸ್ ಮಾಡಿದ್ದರು. ಯಾರೂ ಈ ಕೆಲಸ ಮಾಡುತ್ತಾರೆ, ಹೇಳಿ!. ಅದೇ ರೀತಿ 1986ರಲ್ಲಿ ರಾಮಕೃಷ್ಣಹೆಗಡೆ ಅವರು, ಮಂತ್ರಿ ಮಂಡಲದಿಂದ ಕೈಬಿಟ್ಟಿದ್ದರು. ಆಗ ನಾನು ಬಸ್‌ನಲ್ಲಿ ಓಡಾಡುತ್ತಿದ್ದೆ. ಇದನ್ನು ಗಮನಿಸಿದ ಪ.ಮಲ್ಲೇಶ್ ಮತ್ತು ಸ್ನೇಹಿತರು ಸೇರಿ, 75 ಸಾವಿರ ಹಣ ಹೊಂದಿಸಿ, ಸೆಕೆಂಡ್ ಹ್ಯಾಂಡ್ ಅಂಬಾಸಿಡರ್ ಕಾರು ಕೊಡಿಸಿದ್ದರು. ಆ ಕಾರು 1994ರವರೆಗೂ(ಹಣಕಾಸು ಸಚಿವನಾಗುವವರೆಗೂ) ನನ್ನ ಬಳಿಯಿತ್ತು. ಅವರ ಒಡನಾಟವನ್ನು ಎಷ್ಟು ನೆನಪಿಸಿಕೊಂಡರೂ ಸಾಲದು. ಅವರ ಗುಣಗಳನ್ನು ಪುತ್ರಿ ಸವಿತಾ ಮಲ್ಲೇಶ್ ಮೈಗೂಡಿಸಿಕೊಂಡಿದ್ದಾರೆ.
> – ಮುಖ್ಯಮಂತ್ರಿ ಸಿದ್ದರಾಮಯ್ಯ

ಶ್ರೀ ರಾಮಕೃಷ್ಣ ಆಶ್ರಮ ಗ್ರಾಮ ಸೇವೆಗೆ ಆದ್ಯತೆ ನೀಡಿರುವುದು ಶ್ಲಾಘನೀಯ

● ಕಾನೂನು ಸಚಿವ ಹೆಚ್.ಕೆ.ಪಾಟೀಲ್ ಶ್ಲಾಘನೆ ● ಕುವೆಂಪು 'ರಾಷ್ಟ್ರಕವಿ' ಆಗುವಲ್ಲಿ ಆಶ್ರಮದ ಮಹತ್ತರ ಪಾತ್ರವಿದೆ ● ಆಶ್ರಮದ ಶತಮಾನೋತ್ಸವ ಸಂಭ್ರಮ ಸಮಾರಂಭ

ಮೈಸೂರು, ನ.21(ಎಸ್‌ಬಿಡಿ)– ಸ್ವಾಮಿ ವಿವೇಕಾನಂದರ ಆಶಯಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಸೇವಾಯಜ್ಞದಲ್ಲಿ ತೊಡಗಿರುವ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮವು, ಗ್ರಾಮ ಸೇವೆಗೂ ಆದ್ಯತೆ ನೀಡಿ ರುವುದು ವಿಶೇಷ ಎಂದು ಪ್ರವಾಸೋದ್ಯಮ ಮತ್ತು ಕಾನೂನು ಸಚಿವ ಹೆಚ್.ಕೆ.ಪಾಟೀಲ್ ಬಣ್ಣಿಸಿದರು.

ನಗರದ ರಾಮಕೃಷ್ಣ ವಿದ್ಯಾಶಾಲಾ ಬಯಲು ರಂಗಮಂದಿರದ ವಿವೇಕಾನಂದ ಸಭಾಂಗಣದಲ್ಲಿ ನಾಲ್ಕು ದಿನಗಳ ಕಾಲ ಆಯೋಜಿಸಿರುವ ಶ್ರೀರಾಮಕೃಷ್ಣ ಆಶ್ರಮದ ಶತಮಾನೋತ್ಸವ ಸಮಾರಂಭದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಆಧ್ಯಾತ್ಮ, ಶಿಕ್ಷಣ, ಆರೋಗ್ಯ ಸೇವೆ ನೀಡುವ ಮಠಮಾನ್ಯಗಳು ಗ್ರಾಮ ಸೇವೆ ಬಗ್ಗೆ ಹೆಚ್ಚು ಗಮನಹರಿಸುವುದಿಲ್ಲ. ಆದರೆ ರಾಮಕೃಷ್ಣ ಆಶ್ರಮವು ಇದಕ್ಕೆ ಅಪವಾದವೆಂಬಂತೆ ಗ್ರಾಮ ಸೇವೆಗೆ ಆದ್ಯತೆ ನೀಡಿದೆ ಎಂದರು.

ಸೇವಾ ಯಜ್ಞವೇ ರಾಮಕೃಷ್ಣ ಆಶ್ರಮದ ಪ್ರಮುಖ ಆಶಯವಾಗಿದೆ. ಸ್ವಾಮಿ ವಿವೇಕಾನಂದರ ಮಹತ್ತರ ಆಶಯವನ್ನು ಅನುಷ್ಠಾನ ಮಾಡಿದೆ. ಆಶ್ರಮದ ಶತಮಾನೋತ್ಸವದಲ್ಲಿ ಪಾಲ್ಗೊಳ್ಳುವುದೇ ನನ್ನ ಸೌಭಾಗ್ಯ ಎಂದು ಭಾವಿಸಿದ್ದೇನೆ. ಕುವೆಂಪು ಅವರು ಇಷ್ಟು ಎತ್ತರಕ್ಕೆ ಏರುವಲ್ಲಿ ರಾಮಕೃಷ್ಣ ಆಶ್ರಮದ ಪ್ರಭಾವವಿದೆ ಎನ್ನುವುದು ನನ್ನ ವೈಯಕ್ತಿಕ ಅಭಿಪ್ರಾಯ. ಆಶ್ರಮದಲ್ಲಿ ದೊರೆತಂತಹ ಅನುಭವ ಹಾಗೂ ಇಲ್ಲಿನ ಸಂತರೊಂದಿಗಿನ ಒಡನಾಟದಿಂದ ಕುವೆಂಪು ಅವರ ಭಾಷೆ ಪ್ರಬುದ್ಧಗೊಂಡಿರಬಹುದು. ಕುವೆಂಪು ಅವರನ್ನು ರಾಷ್ಟ್ರಕವಿ ಮಾಡುವಲ್ಲಿ ಆಶ್ರಮದ ಕೊಡುಗೆ ಮಹತ್ತರವಾಗಿದೆ ಎಂದು ಹೇಳಿದರು.



ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಶತಮಾನೋತ್ಸವ ಸಮಾರಂಭವನ್ನು ಶುಕ್ರವಾರ ಬೇಲೂರು ಮಠದ ಪರಮಾಧ್ಯಕ್ಷರಾದ ಸ್ವಾಮಿ ಗೌತಮಾನಂದಜೀ ಮಹಾರಾಜ್ ಸಾನಿಧ್ಯದಲ್ಲಿ ಸಚಿವರಾದ ಹೆಚ್.ಕೆ.ಪಾಟೀಲ್, ಡಾ.ಹೆಚ್.ಸಿ.ಮಹದೇವಪ್ಪ ದೀಪ ಬೆಳಗಿಸಿ, ಉದ್ಘಾಟಿಸಿದರು.

ಯಾವ ಆಶ್ರಮ, ಸಂಘಟನೆ ಅಥವಾ ಸಂಸ್ಥೆಯು ನೈತಿಕತೆ ಬೋಧಿಸುವುದಿಲ್ಲವೋ, ಸಮಾಜದ ಹಿತ ಬಯಸುವುದಿಲ್ಲವೋ, ಆ ಸಂಸ್ಥೆಗಳಿಂದ ಸಮಾಜಕ್ಕೆ ಯಾವ ಉಪಯೋಗವಾಗುವುದಿಲ್ಲ. ಆದರೆ ರಾಮಕೃಷ್ಣ ಆಶ್ರಮದ ಸೇವೆ ಸ್ಮರಣೀಯವಾದುದು. ಈ ಸಂದರ್ಭದಲ್ಲಿ ಶ್ರೀ ಮುಕ್ತಿದಾನಂದಜಿ ಅವರನ್ನು ಎಲ್ಲರ ಪರವಾಗಿ ಅಭಿನಂದಿಸುತ್ತೇನೆ. ಈ ಆಶ್ರಮವು ನಮ್ಮ ತಂದೆ ಮೇಲೆ ಬಹುದೊಡ್ಡ ಪ್ರಭಾವ ಬೀರಿದ್ದು, ರಾಮಕೃಷ್ಣ ಪರಮಹಂಸರ ಹೆಸರಿನಲ್ಲಿ ಗ್ರಾಮದಲ್ಲಿ ಶಾಲೆ ಪ್ರಾರಂಭಿಸಿದರು ಎಂದು ರಾಮಕೃಷ್ಣ ಆಶ್ರಮದೊಂದಿಗಿನ ನಂಟನ್ನು ತಿಳಿಸಿದರು.

ಶ್ರೇಷ್ಠ ಸಂತರು: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾತನಾಡಿ, ಸ್ವಾಮಿ ವಿವೇಕಾನಂದರು ಹಾಗೂ ಅವರ ಗುರುಗಳಾದ ರಾಮಕೃಷ್ಣ ಪರಮಹಂಸರು ಶ್ರೇಷ್ಠ ಸಂತರು. ಇವರು ಆಧ್ಯಾತ್ಮಿಕ ಪ್ರೇರಣಾ ಶಕ್ತಿಯಾಗಿದ್ದಾರೆ. ಮೋಕ್ಷ ಹಾಗೂ ಜಗತ್ತಿನ ಕಲ್ಯಾಣದ ಧ್ಯೇಯ ಹಾಗೂ ತಾತ್ವಿಕ ನೆಲೆಗಟ್ಟಿನಲ್ಲಿ ಆರಂಭಗೊಂಡ ರಾಮಕೃಷ್ಣ ಆಶ್ರಮ, ನಂತರದಲ್ಲಿ ಶಿಕ್ಷಣ, ಆರೋಗ್ಯ, ಸಮಾಜ ಸೇವೆ, ಆಧ್ಯಾತ್ಮಿಕ, ನಾಯಕತ್ವ, ಚಾರಿತ್ರ್ಯ ನಿರ್ಮಾಣದಂತಹ ಸೇವೆ ರೂಢಿಸಿಕೊಂಡಿದೆ. ಆಶ್ರಮದ ಮೂಲಕ ಆಧ್ಯಾತ್ಮ ಹಾಗೂ ಧಾರ್ಮಿಕ ಕಾರ್ಯಗಳು, ಮಿಷನ್‌ಗಳ ಮೂಲಕ ಶೈಕ್ಷಣಿಕ ಹಾಗೂ ಸಾಮಾಜಿಕ ಸೇವೆಗಳನ್ನು ನಡೆಸಿಕೊಂಡು ಬಂದಿದೆ. ನೈತಿಕ, ಮೌಲ್ಯಾಧಾರಿತ ಶಿಕ್ಷಣ ದೊರಕಬೇಕೆಂಬ ಆಶಯದೊಂದಿಗೆ ರಾಮಕೃಷ್ಣ ಆಶ್ರಮದಲ್ಲಿ ಅಸ್ಪೃಶ್ಯರು, ಪೌರಕಾರ್ಮಿಕರ ಮಕ್ಕಳಿಗೂ ಶಿಕ್ಷಣ ನೀಡುತ್ತಿರುವುದು ಅಭಿನಂದನಾರ್ಹ ಎಂದು ಬಣ್ಣಿಸಿದರು.

ಬೇಲೂರು ಮಠದ ರಾಮಕೃಷ್ಣ ಮಠ ಹಾಗೂ ರಾಮಕೃಷ್ಣ ಮಿಷನ್‌ನ ಪರಮಾಧ್ಯಕ್ಷರಾದ ಸ್ವಾಮಿ ಗೌತಮಾನಂದಜಿ ಮಹಾರಾಜ್ ಅವರ ದಿವ್ಯ ಸಾನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೈಸೂರು ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜಿ ಅವರು ಆಶ್ರಮದ ಸೇವೆ, ಸಾಧನೆಗಳ ಬಗ್ಗೆ ವಿವರಿಸಿದರು. ಇದೇ ವೇಳೆ ಶ್ರೀ ರಾಮಕೃಷ್ಣ ಆಶ್ರಮದ ಚಿತ್ರವುಳ್ಳ ಅಂಚೆ ಚೀಟಿ, ಲಕೋಟೆ ಹಾಗೂ ಅರಮನೆ ಚಿತ್ರವುಳ್ಳ ಸ್ಟ್ಯಾಂಪ್ ಅನ್ನು ಬಿಡುಗಡೆಗೊಳಿಸಲಾಯಿತು. ಊಟಿ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ರಾಘವೇಶಾನಂದಜಿ, ವಿಧಾನ ಪರಿಷತ್ ಮಾಜಿ ಸದಸ್ಯ ಡಾ.ಡಿ.ಮಾದೇಗೌಡ, ಭಾರತೀಯ ಅಂಚೆ ಸೇವೆಯ ಅಧಿಕಾರಿ ಜಿ.ಹರೀಶ್ ಮತ್ತಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com


ಜನತಾದಳ (ಜಾತ್ಯತೀತ)
25
ವರ್ಷಗಳು
ರಜತ ಮಹೋತ್ಸವ
2025
SILVER JUBILEE
ರಜತ ಮಹೋತ್ಸವ ಸಂಭ್ರಮ
ಸ್ಥಳ: ಜೆ.ಪಿ ಭವನ, ಬೆಂಗಳೂರು | ದಿನಾಂಕ-: 22-11-2025
ಹೆಚ್.ಎಸ್. ವಿಜಯ್ ಕುಮಾರ್
ಜೆಡಿಎಸ್ ಯುವ ಮುಖಂಡರು
ಕೃಷಿ ಪತ್ತಿನ ಸಹಕಾರ ಸಂಘ, ಸದಸ್ಯರು
ಮೈದನಹಳ್ಳಿ

ಯುಎಸ್‌ಎ ಅಂಡರ್-11 ಟಿಟಿ ಬಾಲಕಿಯರ ತಂಡಕ್ಕೆ ಶ್ರೇಯಾ ಶ್ರೀನಿವಾಸನ್ ಆಯ್ಕೆ

ಮೈಸೂರು, ನ.21- ಅಮೆರಿಕಾ ಕ್ಯಾಲಿಫೋರ್ನಿಯಾದ ಮಿಲ್‌ಪಿತಾಸ್‌ನ ನಿವಾಸಿ ಶ್ರೇಯಾ ಶ್ರೀನಿವಾಸನ್ ಅವರು ಅಂಡರ್-11 ಯುಎಸ್‌ಎ ಟೇಬಲ್ ಟೆನ್ನಿಸ್ ನ್ಯಾಷನಲ್ ತಂಡಕ್ಕೆ ಆಯ್ಕೆಯಾಗಿದ್ದಾರೆ.

ಇವರು ಮೈಸೂರಿನ ನಿವಾಸಿಯಾಗಿದ್ದ ಮಾಧುರಿ ಕಂತೂರ್ ಶೇಖರ್ ಮತ್ತು ಶ್ರೀನಿವಾಸನ್ ರಾಮಕುಮಾರ್ ದಂಪತಿ ಪುತ್ರಿ. ಮಾಧುರಿ ಮಾಜಿ ಟೇಬಲ್ ಟೆನ್ನಿಸ್ ಆಟಗಾರ್ತಿಯಾಗಿದ್ದು, ಏಷಿಯನ್ ಸ್ಕೂಲ್ ಗೇಮ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು. ಸತತ ಎಂಟು ವರ್ಷಗಳ ಕಾಲ ಟೇಬಲ್ ಟೆನ್ನಿಸ್‌ನಲ್ಲಿ ಕರ್ನಾಟಕದ 2ನೇ ರ್‍ಯಾಂಕಿಂಗ್‌ನಲ್ಲಿದ್ದರು.

ಶ್ರೇಯಾ ಅವರು ಪ್ರಸ್ತುತ 2025 ಯುಎಸ್‌ಎ ಅಂಡರ್-11 ಬಾಲಕಿಯರ ನ್ಯಾಷನಲ್ ಟೀಂನ ಅತೀ ಕಿರಿಯ ಸದಸ್ಯರಾಗಿದ್ದಾರೆ. ಇತ್ತೀಚೆಗೆ, ಅಮೆರಿಕದ ಡಬ್ಲ್ಯುಟಿಟಿ ಯೂತ್ ಕಂಟೆಂಡರ್ ಸ್ಯಾನ್‌ಫ್ರಾನ್ಸಿಸ್ಕೋ-3ರಲ್ಲಿ ಅಂಡರ್-11 ಬಾಲಕಿಯರ ಚಾಂಪಿಯನ್ ಆಗಿ ಹೊರ ಹೊಮ್ಮಿದ್ದರು. ಈ ವರ್ಷ ಡಬ್ಲ್ಯುಟಿಟಿ ಯೂತ್ ಕಂಟೆಂಡರ್ ಸ್ಯಾನ್‌ಫ್ರಾನ್ಸಿಸ್ಕೋ-2ರಲ್ಲಿ ಮೂರನೇ ಸ್ಥಾನ ಪಡೆದುಕೊಂಡಿದ್ದಾರೆ.

ಶ್ರೇಯಾ ಅವರು ಮಿಲ್‌ಪಿತಾಸ್‌ನ ಇಂಡಿಯಾ ಕಮ್ಯೂನಿಟಿ ಸೆಂಟರ್ (ಎಂಸಿಸಿ) ಟೇಬಲ್ ಟೆನ್ನಿಸ್ ಕ್ಲಬ್‌ನಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಶ್ರೇಯಾ ಅವರಿಗೆ ಮಾಜಿ ಇಂಡಿಯನ್ ನ್ಯಾಷನಲ್ ಆಟಗಾರ ಕಿರಂಜಾಯ್ ಪುಷಿಲಾಲ್ ತರಬೇತಿ ನೀಡುತ್ತಿದ್ದಾರೆ.



ಇವರ ಸಾಧನೆಗಳು: ಡಬ್ಲ್ಯುಟಿಟಿ ಯೂತ್ ಕಂಟೆಂಡರ್ ಸ್ಯಾನ್‌ಫ್ರಾನ್ಸಿಸ್ಕೊ-3 ಅಂಡರ್ 11 ಗರ್ಲ್ಸ್ ಚಾಂಪಿಯನ್; ಅಂಡರ್-11 ಯುಎಸ್‌ಎ ಗರ್ಲ್ಸ್ ನ್ಯಾಷನಲ್ ಟೀಂ ಯಂಗ್ ಮೆಂಬರ್; ಡಬ್ಲ್ಯುಟಿಟಿ ಯೂತ್ ಕಂಟೆಂಡರ್ ಸ್ಯಾನ್‌ಫ್ರಾನ್ಸಿಸ್ಕೊ-2 ಅಂಡರ್-11 ಗರ್ಲ್ಸ್ ಟೂರ್ನಮೆಂಟ್ ಸೆಮಿ ಫೈನಲಿಸ್ಟ್; ಯುಎಸ್ ನ್ಯಾಷನಲ್ಸ್ ಅಂಡರ್-11 ಗರ್ಲ್ಸ್ ಡಬಲ್ಸ್ ರನ್ನರ್ ಅಪ್- ಒಮ್ನಿಪಾಂಗ್; 2025ರ ಯುಎಸ್ ನ್ಯಾಷನಲ್ಸ್ ಅಂಡರ್-11 ಮಿಕ್ಸೆಡ್ ಡಬಲ್ಸ್‌ನಲ್ಲಿ ಕ್ವಾರ್ಟರ್ ಫೈನಲಿಸ್ಟ್; ವೆಸ್ಟ್‌ಚೆಸ್ಟರ್ ನಾರ್ತ್ ಈಸ್ಟ್ ಯುಎಸ್‌ಎ ಟಿಟಿ ರೀಜನಲ್ಸ್ ಅಂಡರ್-11 ಗರ್ಲ್ಸ್‌ನಲ್ಲಿ ಮೂರನೇ ಸ್ಥಾನ ಪಡೆದುಕೊಂಡಿದ್ದಾರೆ.

ಶ್ರೇಯಾ ಶ್ರೀನಿವಾಸನ್ ಅವರು ಮೈಸೂರಿನ ವಿದ್ಯಾರಣ್ಯಪುರಂ ನಿವಾಸಿ ಕೆ.ಎನ್. ಶೇಖರ್ ಮತ್ತು ಉಷಾ ಶೇಖರ್ ಅವರ ಮೊಮ್ಮಗಳು.

ಜೆಡಿಎಸ್ ರಜತೋತ್ಸವ ಸಂಭ್ರಮಾಚರಣೆ



ಜನತಾದಳ ಜಾತ್ಯತೀತ ಪಕ್ಷ ಉದಯವಾಗಿ 25 ವರ್ಷಕ್ಕೆ ರಜತ ಮಹೋತ್ಸವದ ಅಂಗವಾಗಿ ಮೈಸೂರಿನ ಸ್ನೇಹ ಕಿರಣ ವಿಶೇಷ ಮಕ್ಕಳಿಗೆ ಸಿಹಿ ವಿತರಿಸಿ, ಬಿಸಿ ನೀರು ಹಾಗೂ ಶುದ್ಧ ಕುಡಿಯುವ ನೀರಿನ ಯಂತ್ರವನ್ನು ಮಾಜಿ ಸಚಿವರೂ ಆದ ರಾಜ್ಯ ಜೆಡಿಎಸ್ ರಾಜಕೀಯ ವ್ಯವಹಾರ ಸಮಿತಿ ಸದಸ್ಯ ಸಾರಾ ಮಹೇಶ್ ವಿತರಿಸಿದರು. ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ಎಸ್‌ಬಿಎಂ ಮಂಜು, ಅಶ್ವಿನಿ ಅನಂತ್, ಶೋಭಾ ಕುಮಾರಿ, ಜೆಡಿಎಸ್ ಮುಖಂಡರಾದ ಗಂಗಾಧರಗೌಡ, ಚಂದ್ರಹಾಸ, ನರಸಿಂಹೇಗೌಡ, ಟೆಂಟ್ ರವಿ, ರಾಮಕೃಷ್ಣ, ಕೃಷ್ಣಚಾರಿ, ಹನುಮೇಶ್‌ಗೌಡ, ಶರತ್, ಸ್ನೇಹ ಕಿರಣ ಸಂಸ್ಥೆಯ ರಾಣಿ ಬರ್ನಾಡ್ ಉಪಸ್ಥಿತರಿದ್ದರು



ನಿಖಿಲ್ ಕುಮಾರಸ್ವಾಮಿ ಅಭಿಮಾನಿಗಳ ಬಳಗದ ವತಿಯಿಂದ ಮೈಸೂರಿನ ಹೊಸ ಹುಂಡಿ ರಿಂಗ್ ರಸ್ತೆಯಲ್ಲಿ ಜಾತ್ಯಾತೀತ ಜನತಾದಳದ 25ನೇ ವರ್ಷದ ಬೆಳ್ಳಿ ಹಬ್ಬದ ಸಂಭ್ರಮಾಚರಣೆಯನ್ನು ಅದ್ದೂರಿಯಾಗಿ ಮಾಡಲಾಯಿತು. ಈ ವೇಳೆ ಬಳಗದ ಅಧ್ಯಕ್ಷ ಪ್ರದೀಪ್ ಕೃಷ್ಣೇಗೌಡ, ವರುಣ ಜೆಡಿಎಸ್ ಅಧ್ಯಕ್ಷ ಬಾಲಕೃಷ್ಣ, ಚಂದ್ರಶೇಖರ, ಪ್ರಸನ್ನ, ನಾಗರಾಜು ಹಾಗೂ ಜೆಡಿಎಸ್ ಕಾರ್ಯಕರ್ತರು ಮುಖಂಡರು ಸಿಹಿ ಹಂಚಿ ಸಂಭ್ರಮಿಸಿದರು



ಜೆಡಿಎಸ್‌ನ 25ನೇ ವರ್ಷದ ಬೆಳ್ಳಿ ಹಬ್ಬದ ಪ್ರಯುಕ್ತ ವರುಣ ವಿಧಾನಸಭಾ ಕ್ಷೇತ್ರದ ವತಿಯಿಂದ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಎಂ.ಬಾಲಕೃಷ್ಣ ಪದಾಧಿಕಾರಿಗಳು, ಮುಖಂಡರು ಸಿಹಿ ಹಂಚಿ ಸಂಭ್ರಮಾಚರಣೆ ಮಾಡಿದರು



ಮೈಸೂರಿನ 36 ನೇ ವಾರ್ಡ್ ಯರಗನಹಳ್ಳಿ ಜೆಡಿಎಸ್ ಮುಖಂಡ ಸಿ.ಮಹೇಶ್, ಅವರ ಪತ್ನಿ ಲೀಲಾವತಿ ನೇತೃತ್ವದಲ್ಲಿ ಜೆಡಿಎಸ್ ರಜತೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು.



ಜನತಾದಳ (ಜಾತ್ಯತೀತ) 25 ವರ್ಷಗಳ ಬೆಳ್ಳಿ ಹಬ್ಬ ಸಂಭ್ರಮಾಚರಣೆ ಹಿನ್ನೆಲೆಯಲ್ಲಿ ಲಕ್ಷ್ಮೀಪುರಂನಲ್ಲಿರುವ ಸರ್ಕಾರಿ ಶಾಲಾ ಮಕ್ಕಳಿಗೆ ಸಿಹಿ ತಿಂಡಿ, ಹಂಪಲು ಹಂಚುವ ಮೂಲಕ ಸಂಭ್ರಮಿಸಲಾಯಿತು. ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಬಿ.ಜಿ.ಸಂತೋಷ್, ಮೈಸೂರು ನಗರ ಜೆಡಿಎಸ್ ಕಾರ್ಯಾಧ್ಯಕ್ಷ ಎಸ್.ಪ್ರಕಾಶ್ ಪ್ರಿಯಾದರ್ಶನ, ನಗರ ಪಾಲಿಕೆ ಮಾಜಿ ಸದಸ್ಯೆ ಶೋಭಾ, ಪ್ರಧಾನ ಕಾರ್ಯದರ್ಶಿ ಸತ್ಯನಾರಾಯಣ, ಮುಖಂಡರಾದ ಯದುನಂದನ್, ರಾಮು ಇದ್ದರು.

ಮೈಸೂರಲ್ಲಿ ಜಿ ಸ್ಕ್ವೇರ್ ಹೊಸ ಮೈಲಿಗಲ್ಲು

'ಜಿ ಸ್ಕ್ವೇರ್ ಆಲ್ಕೆಮಿ' 3ನೇ ಹಂತ ಪ್ರಾರಂಭ

G SQUARE GROUP — YOUR HOME. YOUR DREAM. YOUR CHOICE. — PLOTS | VILLAS | APTS.

- 39.8 ಎಕರೆ ವಿಸ್ತೀರ್ಣದ ಸ್ಮಾರ್ಟ್ ಪ್ಲಾಟ್ ಟೌನ್‌ಶಿಪ್
- 1 ಮತ್ತು 2ನೇ ಹಂತದ 300 ಪ್ಲಾಟ್‌ಗಳು ಯಶಸ್ವಿ ಮಾರಾಟ

ಮೈಸೂರು, ನ.21(ಎಂಕೆ)- ಭಾರತದ ಅತಿದೊಡ್ಡ ಹಾಗೂ ಪ್ರತಿಷ್ಠಿತ ಪ್ಲಾಟ್ ರಿಯಲ್ ಎಸ್ಟೇಟ್ ಡೆವಲಪರ್ ಸಂಸ್ಥೆಯಾದ 'ಜಿ ಸ್ಕ್ವೇರ್', ಮೈಸೂರಿನ ರಾಜರಾಜೇಶ್ವರಿನಗರದಲ್ಲಿ 39.8 ಎಕರೆ ವಿಸ್ತೀರ್ಣದ ಸ್ಮಾರ್ಟ್ ಪ್ಲಾಟ್ ಟೌನ್‌ಶಿಪ್ ಮಾದರಿಯ 'ಜಿ ಸ್ಕ್ವೇರ್ ಆಲ್ಕೆಮಿ'ಯ 3 ನೇ ಹಂತ ಪ್ರಾರಂಭಿಸಿದೆ.

'ಜಿ ಸ್ಕ್ವೇರ್ ಆಲ್ಕೆಮಿ'ಯ 1 ಮತ್ತು 2ನೇ ಹಂತದ 300 ಪ್ಲಾಟ್‌ಗಳ ಯಶಸ್ವಿ ಮಾರಾಟದೊಂದಿಗೆ 3ನೇ ಹಂತದ ಅತ್ಯಾಧುನಿಕ ಪ್ಲಾಟ್‌ಗಳ ಮಾರಾಟಕ್ಕೆ ಸಂಸ್ಥೆಯು ಮುಂದಾಗಿದ್ದು, ಸಾಂಸ್ಕೃತಿಕ ನಗರಿ ಮೈಸೂರಿನ ಅತ್ಯಂತ ಪ್ರಗತಿಶೀಲ ಪ್ಲಾಟೆಡ್ ಡೆವಲಪ್‌ಮೆಂಟ್ ಮುಂದಿನ ಅಧ್ಯಾಯ ಇದಾಗಿದೆ.

ಕಾಂತರಾಜ ಅರಸು ರಸ್ತೆ ಸಮೀಪದಲ್ಲಿರುವ 'ಜಿ ಸ್ಕ್ವೇರ್ ಆಲ್ಕೆಮಿ'ಯ 3ನೇ ಹಂತದ ಪ್ಲಾಟ್‌ಗಳು ರಿಂಗ್ ರೋಡ್, ಮೈಸೂರು ಮಂಡಕಳ್ಳಿ ವಿಮಾನ ನಿಲ್ದಾಣ ಸೇರಿದಂತೆ ಪ್ರಮುಖ ಸಾರಿಗೆ ಸಂಪರ್ಕಗಳನ್ನು ಹೊಂದಿದೆ. ಸುತ್ತಮುತ್ತಲು ಉನ್ನತ ಮಟ್ಟದ ಶಾಲಾ-ಕಾಲೇಜುಗಳಿದ್ದು, ಆಸ್ಪತ್ರೆ ಸೌಲಭ್ಯ ಹಾಗೂ ವಾಣಿಜ್ಯ ಪ್ರದೇಶಗಳ ಸಂಪರ್ಕ ಹೊಂದಿದೆ.

ರಾಜ್ಯದಲ್ಲಿ ವೇಗವಾಗಿ ಬೆಳೆಯುತ್ತಿರುವ ಎರಡನೇ ಹಂತದ ನಗರಗಳಲ್ಲಿ ಒಂದಾದ ಮೈಸೂರಿನಲ್ಲಿ ಭವಿಷ್ಯಕ್ಕಾಗಿ ಸ್ಥಳವನ್ನು ಹುಡುಕುತ್ತಿರುವ ಕುಟುಂಬಗಳು, ವೃತ್ತಿಪರರು ಮತ್ತು ಹೂಡಿಕೆದಾರರಿಗೆ 'ಜಿ ಸ್ಕ್ವೇರ್ ಆಲ್ಕೆಮಿ' ಉತ್ತಮ ಆಯ್ಕೆಯಾಗಿದೆ. 'ಜಿ ಸ್ಕ್ವೇರ್ ಆಲ್ಕೆಮಿ' 3ನೇ ಹಂತದಲ್ಲಿ ಸುಧಾರಿತ ಸೌಕರ್ಯಗಳು, ವಾಸಕ್ಕೆ ಯೋಗ್ಯ, ವಾಣಿಜ್ಯ, ಸಂಸ್ಥೆಗಳಿಗೆ ಅಗತ್ಯವಿರುವ ಹಾಗೂ ರಿಟೇಲ್ ಉದ್ದೇಶಗಳಿಗೆ ಅನುಕೂಲಕರವಾದ ವಿಶಾಲ ಪ್ಲಾಟ್‌ಗಳು ಲಭ್ಯವಿದ್ದು, ಭವಿಷ್ಯದ ಅಭಿವೃದ್ಧಿ ಯೋಜನೆಯಾಗಿ ಗುರ್ತಿಸಿಕೊಂಡಿದೆ.



ರೆಡಿ ಟು ಕನ್ಸ್ಟ್ರಕ್ಷನ್ ಜೊತೆಗೆ ಆಕರ್ಷಕ ಬೆಲೆ: 'ಜಿ ಸ್ಕ್ವೇರ್ ಆಲ್ಕೆಮಿ' 3ನೇ ಹಂತದ ಪ್ರಾಜೆಕ್ಟ್‌ನಲ್ಲಿ 478 ರೆಡಿ ಟು ಕನ್ಸ್ಟ್ರಕ್ಷನ್ ಐಷಾರಾಮಿ ವಿಲ್ಲಾ ಪ್ಲಾಟ್‌ಗಳಿವೆ. ಅವುಗಳಲ್ಲಿ 'ಕಾಂಪ್ಯಾಕ್ಟ್ (822 - 2322 ಚದರ ಅಡಿ)', 'ಪ್ರೀಮಿಯಂ (2322 - 3822 ಚದರ ಅಡಿ)', 'ಎಲೈಟ್ (3822 - 6822 ಚದರ ಅಡಿ)' ಹಾಗೂ 'ಗ್ರಾಂಡಿಯರ್ (21,000+ ಚದರ ಅಡಿ)' ಗಳಾಗಿ ವಿಂಗಡಿಸಲಾಗಿದೆ. 'ಜಿ ಸ್ಕ್ವೇರ್ ಆಲ್ಕೆಮಿ' 3ನೇ ಹಂತದ ಮೊದಲ 25 ಬುಕಿಂಗ್‌ಗಳಿಗೆ ಮಾತ್ರ ಪ್ರತೀ ಚದರ ಅಡಿಗೆ 5,650 ರೂ.(ಪ್ರಸಕ್ತ ಮಾರುಕಟ್ಟೆ ದರಕ್ಕಿಂತ ಬಹಳ ಕಡಿಮೆ) ನಿಗದಿಪಡಿಸಲಾಗಿದೆ.

ಅಭಿವೃದ್ಧಿ ಪೂರಕ: ಈ ಕುರಿತು ಪ್ರತಿಕ್ರಿಯೆ ನೀಡಿರುವ ಜಿ ಸ್ಕ್ವೇರ್ ಸಂಸ್ಥಾಪಕ ಮತ್ತು ವ್ಯವಸ್ಥಾಪಕ ನಿರ್ದೇಶಕ ಬಾಲ ರಾಮಜಯಂ, 'ಜಿ ಸ್ಕ್ವೇರ್ ಆಲ್ಕೆಮಿ'ಯ 3ನೇ ಹಂತ ಯೋಜನೆಯು ಮೈಸೂರಿನ ಅಭಿವೃದ್ಧಿಗೆ ಪೂರಕವಾಗಿದೆ. ಕರ್ನಾಟಕದ ಹೊಸ ಐಟಿ ಪಾಲಿಸಿಯೊಂದಿಗೆ ಎರಡನೇ ಹಂತದ ನಗರಗಳಿಗೆ ವಿಸ್ತರಿಸುತ್ತಿರುವ ಕಂಪನಿಗಳು ಮತ್ತು ಸ್ಟಾರ್ಟಪ್‌ಗಳಿಗೆ ಹೆಚ್ಚಿನ ಪ್ರೋತ್ಸಾಹ ಒದಗಿಸಲಿದೆ. ವ್ಯಾಪಾರ ಚಟುವಟಿಕೆ, ಪ್ರತಿಭಾ ಸಂಪನ್ಮೂಲ ಆಗಮನ ಮತ್ತು ವಸತಿ ಬೇಡಿಕೆ ಬಹಳಷ್ಟು ಹೆಚ್ಚಲಿದೆ ಎಂದಿದ್ದಾರೆ.

ಭೂಮಿಯ ಮೌಲ್ಯವನ್ನು ಇನ್ನಷ್ಟು ವೇಗವಾಗಿ ಹೆಚ್ಚಿಸುವ ಜೊತೆಗೆ ಮೈಸೂರನ್ನು ದಕ್ಷಿಣ ಭಾರತದ ಅತ್ಯಂತ ಭರವಸೆಯ ರಿಯಲ್ ಎಸ್ಟೇಟ್ ತಾಣವನ್ನಾಗಿ ಬಲಪಡಿಸಲಿದೆ. ಜಿ ಸ್ಕ್ವೇರ್ ಆಲ್ಕೆಮಿಯು ಮೈಸೂರು ಬೆಳವಣಿಗೆಯ ಪೂರ್ಣ ಲಾಭ ಪಡೆಯಲು ಸಿದ್ಧವಾಗಿದೆ. ಕುಟುಂಬಗಳು ಮತ್ತು ಹೂಡಿಕೆದಾರರಿಗೆ ಭವಿಷ್ಯಕ್ಕೆ ಸಿದ್ಧವಾದ ಸ್ಮಾರ್ಟ್ ಪ್ಲಾಟೆಡ್ ಕಮ್ಯೂನಿಟಿ ಒದಗಿಸುತ್ತಿದೆ ಎಂದು ಹೇಳಿದ್ದಾರೆ.

41 ಎಕರೆ ಪ್ರದೇಶದ ಏಕೈಕ ಗೇಟೆಡ್ ಕಮ್ಯೂನಿಟಿ ಇದಾಗಿದ್ದು, ವಾಸ, ಉದ್ಯಮ, ಆತಿಥ್ಯ, ಆರೋಗ್ಯ, ಶಿಕ್ಷಣ ಮತ್ತು ರಿಟೇಲ್ ಸೇರಿದಂತೆ ಎಲ್ಲಾ ಬಗೆಯ ಸೌಲಭ್ಯವನ್ನು ಒಳಗೊಂಡಿದೆ. ಸ್ವಾವಲಂಬಿ ಪರಿಸರ ವ್ಯವಸ್ಥೆಯೊಂದಿಗೆ ಮೈಸೂರಿಗೆ ಕಳಶ ಪ್ರಾಯವಾಗಿ ಮೂಡಿಬಂದಿದೆ. ಹಾಗೆಯೇ ವಿಶೇಷ ಜಾಯಿಂಟ್ ವೆಂಚರ್ ಪಾಲುದಾರಿಕೆ ಅವಕಾಶ ತೆರೆಯಲಾಗಿದೆ. 25,000 ಚ.ಅ. ಕಸ್ಟಮೈಸ್ ಮಾಡಬಹುದಾದ ವಾಣಿಜ್ಯ ಪ್ಲಾಟ್‌ಗಳನ್ನು ಸಂಸ್ಥೆಗಳು, ರಿಟೇಲ್, ಜಿಮ್, ಸಲೂನ್, ವೆಲ್‌ನೆಸ್ ಸೆಂಟರ್‌ಗಳಿಗೆ ನೀಡುವ ಅವಕಾಶ ಒದಗಿಸಲಾಗುತ್ತಿದೆ. ಮೈಸೂರು ನಗರ ಕ್ಲಸ್ಟರ್‌ನಲ್ಲಿ ಬಲಿಷ್ಠ ತಾಣ ಬಯಸುವವರಿಗೆ ಇದು ಸೂಕ್ತ ಅವಕಾಶವಾಗಿದೆ ಎಂದಿದ್ದಾರೆ.

'ಜಿ ಸ್ಕ್ವೇರ್ ಸಂಸ್ಥೆಯು ತಮ್ಮ ಜಿ ಸ್ಕ್ವೇರ್ ಆಲ್ಕೆಮಿ'ಯ 3ನೇ ಹಂತ ಯೋಜನೆ ಮೂಲಕ ಕರ್ನಾಟಕದ ಹೊಸ ಐಟಿ ಪಾಲಿಸಿ 2025-2030 ರನ್ವಯ ಮೈಸೂರಿನಂತರ ಎರಡನೇ ದರ್ಜೆ ನಗರಗಳಲ್ಲಿ ಹೊಸ ಕಂಪನಿಗಳು- ಸ್ಟಾರ್ಟಪ್‌ಗಳ ವಿಸ್ತರಣೆಗೆ ಪ್ರೋತ್ಸಾಹ ನೀಡುತ್ತಿದೆ. ಶೇ.50 ಬಾಡಿಗೆ ಪುನರ್ ಪಾವತಿ, ಆಸ್ತಿ ತೆರಿಗೆ ಬೆಂಬಲ, ವಿದ್ಯುತ್ ಸುಂಕ ಮನ್ನಾ, ಕಡಿಮೆ ಟೆಲಿಕಾಂ ಅಥವಾ ಇಂಟರ್ನೆಟ್ ಶುಲ್ಕ, ಆರ್ ಅಂಡ್ ಡಿ ಪುನರ್ ಪಾವತಿ ಇತ್ಯಾದಿ ಸೌಲಭ್ಯ ನೀಡುತ್ತಿದೆ ಎಂದು ತಿಳಿಸಿದ್ದಾರೆ.

ಬೆಂಬಲ ಯೋಜನೆ: ಮೈಸೂರನ್ನು ವ್ಯಾಪಾರ ವಿಸ್ತರಣೆ, ನಾವೀನ್ಯತೆ ಮತ್ತು ಪ್ರತಿಭಾ ಸ್ಥಳವನ್ನಾಗಿಸಿ, ಉದಯೋನ್ಮುಖ ಐಟಿ ಹಬ್ ಆಗಿ ಮಾಡುತ್ತಿದೆ. ಇಲ್ಲಿನ ನಿವಾಸಿಗಳಿಗೆ ಜಿ ಸ್ಕ್ವೇರ್ ಬಿಲ್ಡ್ ಅಸಿಸ್ಟ್ ಸೌಲಭ್ಯ ಒದಗಿಸಲಾಗುತ್ತಿದ್ದು, ವಿಲ್ಲಾ ನಿರ್ಮಾಣವನ್ನು ಸರಳಗೊಳಿಸುವ ಹಾಗೂ ಖರೀದಿ ನಂತರದ ಬೆಂಬಲ ಯೋಜನೆ ಇದಾಗಿದೆ ಎಂದು ಭರವಸೆ ನೀಡಿದ್ದಾರೆ.

ವಿಶ್ವದರ್ಜೆ ಸೌಲಭ್ಯಗಳು

'ಜಿ ಸ್ಕ್ವೇರ್ ಆಲ್ಕೆಮಿ' 3ನೇ ಹಂತದ ಪ್ರಾಜೆಕ್ಟ್‌ನಲ್ಲಿ 35ಕ್ಕೂ ಹೆಚ್ಚು ವಿಶ್ವದರ್ಜೆ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಶೇ.53 ರಷ್ಟು ಹಸಿರು ವಲಯ, ಗಾರ್ಡನ್‌ಗಳು, ಪ್ಲಗ್ ಅಂಡ್ ಪ್ಲೇ ಇನ್‌ಫ್ರಾ (ಎಲ್‌ಇಡಿ ಸ್ಟ್ರೀಟ್ ಲೈಟಿಂಗ್), ದಿನದ 24 ಗಂಟೆಯೂ ಸಿಸಿಟಿವಿ ಸುರಕ್ಷತೆ, ಗೇಟೆಡ್ ಕಮ್ಯೂನಿಟಿ, ಒಂದು ವರ್ಷದ ಉಚಿತ ಮೇನ್ಟೆನೆನ್ಸ್ ಜೊತೆಗೆ ಸ್ಮಾರ್ಟ್ ಮತ್ತು ಸುಸ್ಥಿರ ಜೀವನಕ್ಕೆ ಪರಿಪೂರ್ಣವಾಗಿದೆ. ಪ್ರತಿ ಪ್ಲಾಟ್‌ಗೂ ಸಂಪೂರ್ಣ ಕಾನೂನು ದಾಖಲೆಗಳು, ರೇರಾ ನೋಂದಣಿ ಹಾಗೂ ಎಂಡಿಎ(ಮೈಸೂರು ಅಭಿವೃದ್ಧಿ ಪ್ರಾಧಿಕಾರ) ಅನುಮೋದನೆ ದೊರೆತಿದ್ದು, ಕ್ಯಾಶ್‌ಲೆಸ್ (ನಗದು ರಹಿತ) ಪಾರದರ್ಶಕ ನೀತಿ ಅನುಸರಿಸಲಾಗುತ್ತಿದೆ.

ನರ್ತನಾಮೃತ-2025 ಭರತನಾಟ್ಯ ಪ್ರದರ್ಶನ

ಮೈಸೂರು, ನ.21- ಮೈಸೂರಿನ ಗಾಯಿತ್ರಿಪುರಂನಲ್ಲಿರುವ ನೃತ್ಯ ಧಾರಾ ಸಂಸ್ಥೆಯ ವತಿಯಿಂದ ಸಬ್ ಜೂನಿಯರ್, ಜೂನಿಯರ್ ಹಾಗೂ ಸೀನಿಯರ್ ವಿದ್ಯಾರ್ಥಿನಿಯರ ಭರತನಾಟ್ಯ ಪ್ರದರ್ಶನ 'ನರ್ತನಾಮೃತ-2025' ಕಾರ್ಯಕ್ರಮವನ್ನು ನಾಳೆ(ಶನಿವಾರ) ಸಂಜೆ 5-30ಕ್ಕೆ ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ಆಯೋಜಿಸಲಾಗಿದೆ.



ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಆಯಾಮ ಅಕಾಡೆಮಿ ಆಫ್ ಫೈನ್ ಆರ್ಟ್ಸ್‌ನ ನಿರ್ದೇಶಕರಾದ ಡಾ.ಎಸ್.ವಿ.ಶಾಂಭವಿ ಸ್ವಾಮಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಮೈಸೂರಿನ ನೃತ್ಯ ವಿದ್ಯಾಪೀಠದ ಸಂಸ್ಥಾಪಕ ನಿರ್ದೇಶಕಿ ವಿದುಷಿ ಸಿ.ಎನ್.ಅನಿತ, ನೃತ್ಯ ಧಾರಾ ಸಂಸ್ಥೆ ಕಾರ್ಯದರ್ಶಿ ಎಂ.ಬಿ.ಸುರೇಶ್, ನಿರ್ದೇಶಕಿ ಕುಮಾರಿ ವಿದುಷಿ ಎಂ.ಎಸ್.ಅಮೃತ ಉಪಸ್ಥಿತರಿರಲಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊಬೈಲ್ ನಂ. 7019403943 ಅನ್ನು ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಇಂದು ಕೌದಿ ನಾಟಕ ಪ್ರದರ್ಶನ

ಮೈಸೂರು, ನ.21- ನಗರದ ಲಕ್ಷ್ಮೀಪುರಂನಲ್ಲಿರುವ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಾಳೆ(ನ.22) ಸಂಜೆ 6 ಗಂಟೆಗೆ 'ಕೌದಿ' ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ.



ಗಣೇಶ ಅಮೀನಗಡ ಅವರ ಈ ಏಕವ್ಯಕ್ತಿ ನಾಟಕವನ್ನು ಕವಿತಾ ಕಲಾ ತಂಡವು ಪ್ರಸ್ತುತಪಡಿಸಲಿದ್ದು, ಕಲಾವಿದೆ ಭಾಗ್ಯಶ್ರೀ ಪಾಳಾ ಅಭಿನಯಿಸಲಿದ್ದಾರೆ. ಜಗದೀಶ್ ಆರ್.ಜಾಣಿ ಅವರು ನಿರ್ದೇಶನದೊಂದಿಗೆ ಸಂಗೀತ, ವಿನ್ಯಾಸ ನಿರ್ವಹಿಸಿದ್ದಾರೆ.

ಸಂಗೀತ ವಿವಿ ಕುಲಪತಿ ಪ್ರೊ.ನಾಗೇಶ್ ಬೆಟ್ಟಕೋಟೆ ಅವರು ನಾಟಕ ಪ್ರದರ್ಶನ ಉದ್ಘಾಟಿಸಲಿದ್ದು, ಕುಲಸಚಿವ (ಮೌಲ್ಯಮಾಪನ) ಡಾ.ಎಂ.ಜಿ.ಮಂಜುನಾಥ, ಹಿರಿಯ ರಂಗಕರ್ಮಿ ಗೋವಿಂದಗೌಡ ಮತ್ತಿತರರು ಭಾಗವಹಿಸಲಿದ್ದಾರೆ. ನಾಟಕಕ್ಕೆ ಉಚಿತ ಪ್ರವೇಶ ಕಲ್ಪಿಸಲಾಗಿದೆ.

ನಾನು ಎಲ್ಲಿಯವರೆಗೆ ಅಧಿಕಾರದಲ್ಲಿ ಇರುತ್ತೇನೊ ಗೊತ್ತಿಲ್ಲ...!

ಮೈಸೂರಿನ ಬಿಸಿಎಂ ಹಾಸ್ಟೆಲ್ ಹಳೆ ವಿದ್ಯಾರ್ಥಿಗಳ ಸಮಾವೇಶದಲ್ಲಿ ಸಿಎಂ ಸಿದ್ದರಾಮಯ್ಯ ಹೇಳಿಕೆ

- ನನ್ನ ಅಧಿಕಾರ ಮುಂದುವರಿಕೆಯನ್ನು ಹೈಕಮಾಂಡ್ ನಿರ್ಧರಿಸುತ್ತೆ
- ಅಧಿಕಾರದಲ್ಲಿರಲು ಜನರ ಆಶೀರ್ವಾದ ಮುಖ್ಯ
- ನನ್ನ ಪತ್ನಿ ಶಕುನಗಳನ್ನ ನಂಬುತ್ತಾರೆ
- ಪ್ರೊ. ರವಿವರ್ಮ ಕುಮಾರ್ ಅಮಾವಾಸ್ಯೆಯಲ್ಲಿ ಮದುವೆಯಾಗಿದ್ದಾರೆ!

ಮೈಸೂರು, ನ.21(ಬಿಎಲ್‌ಯು)- ನಾನು ಎಲ್ಲಿಯವರೆಗೆ ಅಧಿಕಾರದಲ್ಲಿ ಇರುತ್ತೇನೊ ಗೊತ್ತಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮೈಸೂರಿನ ಮಾನಸ ಗಂಗೋತ್ರಿಯ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಇಂದು ಮೈಸೂರು ಜಿಲ್ಲಾ ಬಿಸಿಎಂ ವಿದ್ಯಾರ್ಥಿನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘದ ಮೊದಲ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ನನ್ನ ಕಾರಿನ ಮೇಲೆ ಕಾಗೆ ಕೂತಾಗ ಸಿಎಂ ಸ್ಥಾನ ಹೋಗುತ್ತದೆ ಎಂದು ಕೆಲವು ಜೋತಿಷ್ಯರು ಭವಿಷ್ಯ ನುಡಿದರು. ಆದರೆ ಅದಾದ ಎರಡೂವರೆ ವರ್ಷ ನಾನು ಸಿಎಂ ಆಗಿ ಮುಂದುವರೆದೆ. ಇಂತಹ ಶಕುನಗಳನ್ನು ನಾನು ನಂಬುವುದಿಲ್ಲ, ಆದರೆ ನನ್ನ ಪತ್ನಿ ನಂಬುತ್ತಾರೆ ಎಂದು ಹೇಳಿದರು.

ಈಗಲೂ ಪೂರ್ಣಾವಧಿವರೆಗೆ ನೀವೇ ಮುಖ್ಯಮಂತ್ರಿಯಾಗಿ ಮುಂದುವರೆಯಬೇಕು ಎಂದು ಅಭಿಮಾನಿಗಳು ಕೂಗಿದಾಗ, ಇದನ್ನು ಹೈಕಮಾಂಡ್ ತೀರ್ಮಾನ ಮಾಡುತ್ತದೆ ಎಂದು ದೆಹಲಿಯತ್ತ ಸಿದ್ದರಾಮಯ್ಯ ಬೊಟ್ಟು ಮಾಡಿದರು.

ಅಧಿಕಾರ ಪಡೆಯಲು ಜನರ ಆಶೀರ್ವಾದವೂ ಮುಖ್ಯ. ಈ ತನಕ ನಾನು 16 ಚುನಾವಣೆ ಎದುರಿಸಿದ್ದು, 9ರಲ್ಲಿ ಗೆಲುವು ಸಾಧಿಸಿದ್ದೇನೆ. ಎರಡು ವಿಧಾನ ಸಭಾ ಹಾಗೂ ಎರಡು ಲೋಕಸಭಾ ಚುನಾವಣೆಯಲ್ಲಿ ಸೋತಿದ್ದೇನೆ. ಜನರು ಆಶೀರ್ವಾದ ಮಾಡದಿದ್ದರೆ ಏನು ಮಾಡಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟರು.

ನಿಮ್ಮ ಅವಧಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರಿಗೆ ಅವಕಾಶ ನೀಡಿ ಎಂದು ಕಾರ್ಯಕರ್ತನೊಬ್ಬ ಕೂಗಿ ಆಗ್ರಹಿಸಿದಾಗ, ಇದನ್ನೆಲ್ಲಾ ಕೇಳಲು ಇದು ಕಾಂಗ್ರೆಸ್ ಸಮಾವೇಶವಲ್ಲ, ಕುಳಿತುಕೊ ಎಂದು ತಾಕೀತು ಮಾಡಿದರು.

ಸಿದ್ದರಾಮಯ್ಯ ಅವರ ಭಾಷಣದ ಮಧ್ಯೆ ಅವರ ಅಭಿಮಾನಿಗಳು 'ಹೌದು, ಹುಲಿಯಾ' ಎಂದು ಹಾಸ್ಯ ಧಾಟಿಯಲ್ಲಿ ಮಧ್ಯೆ ಮಧ್ಯೆ ಕೂಗುತ್ತಿದ್ದರು. ಆ ವೇಳೆ ಸಭೆ ನಗೆಗಡಲಲ್ಲಿ ತೇಲಿದರೆ, ಸಿದ್ದರಾಮಯ್ಯ ಮಾತ್ರ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

ನಾನು 100 ವರ್ಷ ಬದುಕುತ್ತೇನೆ

ನಾನು 100 ವರ್ಷ ಬದುಕುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

ಜನರ ಆರೋಗ್ಯ ಸಮಸ್ಯೆ ಸರ್ಕಾರ ನಿಗಾ ವಹಿಸಬೇಕು ಎಂದು ಪ್ರೇಕ್ಷಕರೊಬ್ಬರು ಆಗ್ರಹಿಸಿದಾಗ, ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ನಿಮ್ಮ ಸಲಹೆಯನ್ನ ಗಂಭೀರವಾಗಿ ಪರಿಗಣಿಸಿದ್ದೇನೆ ಎಂದರು.

ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರಿಗೆ ಅವರ ಅಭಿಮಾನಿಯೊಬ್ಬ ನೀವು 100 ವರ್ಷ ಬದುಕಬೇಕು ಎಂದು ಪತ್ರ ಬರೆದಿದ್ದರು. ಇದಕ್ಕೆ ಪ್ರತಿಕ್ರಿಯೆ ನೀಡಿದ ಗಾಂಧೀಜಿ ಅಮ್ಮ, ನೀನು ಕಡಿಮೆ ಹೇಳಿದ್ದೀಯಾ, 120 ವರ್ಷ ಬದುಕುವಂತೆ ನನಗೆ ನೀನು ಹೇಳಬೇಕಿತ್ತು ಎಂದಿದ್ದರು.

ಯಾರು ಏನೇ ಹೇಳಲಿ, ನಾನಂತೂ 100 ವರ್ಷ ಬದುಕುತ್ತೇನೆ. 78 ವರ್ಷ ತುಂಬಿ 79ನೇ ವರ್ಷಕ್ಕೆ ಈಗ ಕಾಲಿಟ್ಟಿದ್ದೇನೆ. 100 ವರ್ಷ ಬದುಕ್ತೇನೆ ಎಂದು ಮತ್ತೊಮ್ಮೆ ತಮ್ಮ ಮನದಾಸೆ ಹಂಚಿಕೊಂಡರು.



ಮೈಸೂರಿನ ಮಾನಸ ಗಂಗೋತ್ರಿಯ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಶುಕ್ರವಾರ ಮೈಸೂರು ಜಿಲ್ಲಾ ಬಿಸಿಎಂ ವಿದ್ಯಾರ್ಥಿನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘದ ಮೊದಲ ವಾರ್ಷಿಕೋತ್ಸವ ಸಮಾರಂಭದಲ್ಲಿ ಹಿರಿಯ ನ್ಯಾಯವಾದಿ ಪ್ರೊ.ರವಿವರ್ಮ ಕುಮಾರ್ ಅವರಿಗೆ ಡಿ.ದೇವರಾಜ ಅರಸ್ ಹಾಗೂ ಎಲ್.ಜಿ.ಹಾವನೂರು ಪ್ರಶಸ್ತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರದಾನ ಮಾಡಿದರು. ಈ ವೇಳೆ ಪ್ರೊ.ಶಾರದಾ ಬಾಯಿ ರವಿವರ್ಮ ಕುಮಾರ್ ಅವರನ್ನು ಕೂಡ ಅಭಿನಂದಿಸಲಾಯಿತು.

ಐಎಎಸ್, ಐಪಿಎಸ್, ಕೆಎಎಸ್ ಮಾಡಿದರೆ ಜಾತಿ ನೋಡದೆ ಹೆಣ್ಣು ಕೊಡುತ್ತಾರೆ!

ಐಎಎಸ್, ಐಪಿಎಸ್, ಕೆಎಎಸ್ ಮಾಡಿದರೆ ಯಾವ ಜಾತಿನೂ ನೋಡದೆ ಹೆಣ್ಣು ಕೊಡುತ್ತಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು. ಸಮಾಜವನ್ನು ಕಾಡುತ್ತಿರುವ ಜಾತಿ ವ್ಯವಸ್ಥೆಯನ್ನು ಎಳೆ ಎಳೆಯಾಗಿ ಬಿಡಿಸಿಟ್ಟ ಸಿದ್ದರಾಮಯ್ಯ, ಅಸಮಾನತೆ ಹೋಗಲಾಡಿಸದಿದ್ದರೆ ಸಮಾಜದಲ್ಲಿ ಜಾತಿ ವ್ಯವಸ್ಥೆ ಮುಕ್ತ ಮಾಡಲು ಸಾಧ್ಯವಿಲ್ಲ ಎಂದು ಹೇಳಿದರು.

ಮೇಲ್ಜಾತಿಯವರನ್ನು ಸ್ವಾಮಿ, ಬುದ್ಧಿ ಎಂದು ಕರೆಯುತ್ತಾರೆ. ಆದರೆ ದಲಿತನೊಬ್ಬ ಉನ್ನತ ಹುದ್ದೆಯಲ್ಲಿದ್ದರೂ ಏಕವಚನದಲ್ಲಿ ಮಾತನಾಡಿಸುತ್ತಾರೆ. ಇದು ಗುಲಾಮಗಿರಿಯ ಸಂಕೇತವಾಗಿದ್ದು, ಇದನ್ನು ಮೊದಲು ಹೋಗಲಾಡಿಸಬೇಕು ಎಂದು ಸಲಹೆ ನೀಡಿದರು. ಸಾಮಾನ್ಯವಾಗಿ ಹೆಣ್ಣು ಕೊಡಲು ಜಾತಿ, ಶ್ರೀಮಂತಿಕೆ ನೋಡುತ್ತಾರೆ. ಐಎಎಸ್,ಐಪಿಎಸ್, ಕೆಎಎಸ್ ಮಾಡಿದರೆ, ಯಾವ ಜಾತಿನೂ ನೋಡದೆ ಹೆಣ್ಣು ಕೊಡುತ್ತಾರೆ ಎಂದರು.

ಕನ್ನಡ ರಾಜ್ಯೋತ್ಸವದ ಬಗ್ಗೆ ಮಾತನಾಡಿದ ಸಿದ್ದರಾಮಯ್ಯ ಅವರು, ಬೆಂಗಳೂರಿನಲ್ಲಿ ಕನ್ನಡ ಮಾಯವಾಗಿದೆ. ಅಲ್ಲಿನ ಪರಿಸ್ಥಿತಿ ನೋಡಿದರೆ ನಾವು ಕನ್ನಡ ನಾಡಿನಲ್ಲಿದ್ದೇವೆಯೋ ಅಥವಾ ಬೇರೆಲ್ಲಿದ್ದೇವೆಯೋ ಎಂಬ ಆತಂಕ ಎದುರಾಗುತ್ತದೆ ಎಂದು ಹೇಳಿದರು.

ಹಿರಿಯ ನ್ಯಾಯವಾದಿ ಪ್ರೊ.ರವಿವರ್ಮ ಕುಮಾರ್ ಅವರಿಗೆ ಈ ವೇಳೆ ಡಿ.ದೇವ ರಾಜ ಅರಸ್ ಹಾಗೂ ಎಲ್.ಜಿ. ಹಾವನೂರು ಪ್ರಶಸ್ತಿಯನ್ನು ಸಿದ್ದರಾಮಯ್ಯ ಅವರು ಪ್ರದಾನ ಮಾಡಿದರು. ಈ ವೇಳೆ ಪ್ರೊ.ಶಾರದಾ ಬಾಯಿ ರವಿವರ್ಮ ಕುಮಾರ್ ಅವರನ್ನು ಕೂಡ ಅಭಿನಂದಿಸಲಾಯಿತು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರಾದ ಕೆ.ಹರೀಶ್ ಗೌಡ, ಡಿ.ರವಿಶಂಕರ್, ಡಾ.ತಿಮ್ಮಯ್ಯ, ಡಾ.ಶಿವಕುಮಾರ್, ಡಾ.ಸೋಮ ಇಳಂಗೋವಿ, ಬಿಸಿಎಂ ಹಾಸ್ಟೆಲ್ ಹಳೆ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಶಿವಸ್ವಾಮಿ, ಉಪಾಧ್ಯಕ್ಷ ಮಹದೇವಸ್ವಾಮಿ, ಕಾರ್ಯಾಧ್ಯಕ್ಷ ಡಾ.ಕುಮಾರ್, ಪದಾಧಿಕಾರಿಗಳಾದ ರಾಜೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಹಾಸ್ಟೆಲ್‌ನಲ್ಲಿ ಓದಿದವರು ಹೆಚ್ಚುವರಿ ಹಾಸ್ಟೆಲ್ ನಿರ್ಮಾಣಕ್ಕೆ ಧನ ಸಹಾಯ ಮಾಡಬೇಕು

ಹಾಸ್ಟೆಲ್‌ಗಳಲ್ಲಿ ಉಚಿತವಾಗಿ ವ್ಯಾಸಂಗ ಮಾಡಿ ಉನ್ನತ ಹುದ್ದೆಗೆ ನೇಮಕವಾದವರು ಮತ್ತಷ್ಟು ಹಾಸ್ಟೆಲ್‌ಗಳ ನಿರ್ಮಾಣಕ್ಕೆ ಧನ ಸಹಾಯ ಮಾಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ ನೀಡಿದರು.

ಪ್ರತಿಯೊಬ್ಬರ ಬದುಕಿನಲ್ಲಿ ಶಿಕ್ಷಣ ಬಹಳ ಮುಖ್ಯ. ಸ್ವತಂತ್ರ ಬಂದಾಗ ಭಾರತದಲ್ಲಿ ಸಾಕ್ಷರತೆ ಪ್ರಮಾಣ ಶೇಕಡ 10ರಿಂದ 12ರಷ್ಟಿತ್ತು. ಈ ಹಿನ್ನೆಲೆಯಲ್ಲಿ ಆರ್ಥಿಕ ಸಂಕಷ್ಟದಲ್ಲಿರುವ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಹಾಸ್ಟೆಲ್‌ಗಳನ್ನು ತೆರೆಯಲಾಯಿತು. ಮೈಸೂರಿನಲ್ಲಿ ಮೊದಲು ಎರಡು ಬಿಸಿಎಂ ಹಾಸ್ಟೆಲ್ ಇತ್ತು. ಈಗ 45 ಆಗಿದೆ. ರಾಜ್ಯದಲ್ಲಿ 3.88 ವಿದ್ಯಾರ್ಥಿಗಳು ಹಾಸ್ಟೆಲ್‌ಗಳಲ್ಲಿದ್ದು, ಉಚಿತ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ. ಇದರಿಂದ ಕರ್ನಾಟಕದಲ್ಲಿ ಸಾಕ್ಷರತೆ ಪ್ರಮಾಣ ಶೇಕಡ 78 ರಷ್ಟಿದೆ ಎಂದು ಹೇಳಿದರು.

ಹಾಸ್ಟೆಲ್‌ಗಳಲ್ಲಿದ್ದು ಚೆನ್ನಾಗಿ ಓದಿ ಒಳ್ಳೆ ಕೆಲಸಕ್ಕೆ ಸೇರಬೇಕು, ತರುವಾಯ ನಾನು ಹಾಸ್ಟೆಲ್‌ನಿಂದಲೇ ಈ ಮಟ್ಟಕ್ಕೆ ಬಂದಿದ್ದೇನೆ ಎಂದು ಅರಿತು, ಮುಂದಿನ ಪೀಳಿಗೆಗೆ ಅನುಕೂಲವಾಗುವ ನಿಟ್ಟಿನಲ್ಲಿ ಹೆಚ್ಚು ಹಾಸ್ಟೆಲ್ ನಿರ್ಮಾಣಕ್ಕೆ ಸಹಕಾರಿಯಾಗಿ ಎಂದು ಸಿದ್ದರಾಮಯ್ಯ ಕಿವಿಮಾತು ಹೇಳಿದರು.

ಜಾತಿಯತೆ, ಮೂಢ ನಂಬಿಕೆಗೆ ಜೋತು ಬೀಳಬಾರದು, ವೈಚಾರಿಕತೆ ಹಾಗೂ ವೈಜ್ಞಾನಿಕ ದೃಷ್ಟಿಕೋನದಲ್ಲಿ ಚಿಂತನೆ ಮಾಡಬೇಕು. ಈ ಮೂಲಕ ಸಮಾಜಕ್ಕೆ ಕೊಡುಗೆ ನೀಡಬೇಕು ಎಂದು ತಿಳಿಸಿದರು.

ಪ್ರೊ.ರವಿವರ್ಮ ಕುಮಾರ್ ಅವರು ಅಮಾವಾಸ್ಯೆ ದಿನದಂದು, ರಾಹುಕಾಲದಲ್ಲಿ ಮದುವೆಯಾಗಿದ್ದಾರೆ. ಇಬ್ಬರು ಮಕ್ಕಳಿರುವ ಅವರು ಸುಖಃ ಸಂತೋಷದಿಂದ ಬದುಕುತ್ತಿಲ್ಲವೇ ಎಂದರು.


ಜನತಾದಳ (ಜಾತ್ಯತೀತ)
25
ವರ್ಷಗಳ
ರಜತ ಮಹೋತ್ಸವ
2025
SILVER JUBILEE
ರಜತ ಮಹೋತ್ಸವ ಸಂಭ್ರಮ
ದಿನಾಂಕ: 22.11.2025ನೇ ಶನಿವಾರ
ಸ್ಥಳ: ಪಕ್ಷದ ಕಚೇರಿ ಜೆ.ಪಿ ಭವನ, ಬೆಂಗಳೂರು
ಕರ್ನಾಟಕದ ಸಮಗ್ರ ಅಭಿವೃದ್ಧಿಗಾಗಿ
ಜೆಡಿಎಸ್ ಬೆಂಬಲಿಸಿ
ಸರ್ವರಿಗೂ ಸುಸ್ವಾಗತ
VISMAYA
ADVERTISERS
8050302424

ಸಹಕಾರ ಸಪ್ತಾಹ ಸಮಾರೋಪ



ಚಾಮರಾಜನಗರದಲ್ಲಿ ನಡೆದ ಸಹಕಾರ ಸಪ್ತಾಹ ಸಮಾರೋಪ ಸಮಾರಂಭದಲ್ಲಿ ರಾಜ್ಯ ಸಹಕಾರ ಮಹಾಮಂಡಳ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡ ಹಾಗೂ ಮಾಜಿ ಸಚಿವ ಕೆ.ಎನ್.ರಾಜಣ್ಣ ಅವರೊಂದಿಗೆ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ, ಎ.ಮಂಚಪ್ಪ, ಆರ್.ಸೋಮಣ್ಣ, ಕಾರ್ಯದರ್ಶಿ ಕೆ.ಹರ್ಷಿತ್ ಗೌಡ ಇದ್ದಾರೆ.

ಮೈಸೂರು ಮಿತ್ರ 46 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಹೂಟಗಳ್ಳಿ ನಗರಸಭೆ ಆಯುಕ್ತ ಚಂದ್ರಶೇಖರ್ ಮೇಲೆ ಪಿರಿಯಾಪಟ್ಟಣ ಪುರಸಭೆ ಪೌರಾಯುಕ್ತ ಮಧು ಹಲ್ಲೆ

ಕೊಲೆ ಬೆದರಿಕೆ ಸಂಬಂಧ ಪ್ರಕರಣ ದಾಖಲು

ಮೈಸೂರು, ನ.21– ಮೈಸೂರಿನ ಹೂಟಗಳ್ಳಿಯ ನಗರಸಭೆ ಆಯುಕ್ತ ಬಿ.ಎನ್.ಚಂದ್ರಶೇಖರ್ ಮೇಲೆ ಈ ಹಿಂದೆ ಇದೇ ನಗರಸಭೆಯಲ್ಲಿ ಕಂದಾಯ ಅಧಿಕಾರಿಯಾಗಿದ್ದು, ಹಾಲಿ ಪಿರಿಯಾಪಟ್ಟಣ ಪುರಸಭೆ ಮುಖ್ಯಾಧಿಕಾರಿಯಾಗಿರುವ ಮಧು ಎಂಬುವರು ಇತರರೊಂದಿಗೆ ಸೇರಿ ತೀವ್ರ ಹಲ್ಲೆ ನಡೆಸಿರುವ ಘಟನೆ ಬುಧವಾರ ಸಂಜೆ ಸರಸ್ವತಿಪುರಂನಲ್ಲಿ ನಡೆದಿದೆ.

ಮಧು ಅವರು ಹೂಟಗಳ್ಳಿ ನಗರಸಭೆಯ ಕಂದಾಯ ಅಧಿಕಾರಿಯಾಗಿದ್ದ ವೇಳೆ ಅವರ ವರ್ಗಾವಣೆ ವಿಚಾರದಲ್ಲಿ ದ್ವೇಷ ಸಾಧಿಸುತ್ತಿದ್ದು, ಈ ಹಿನ್ನೆಲೆಯಲ್ಲಿ ತಮ್ಮ ಮೇಲೆ ಸಂಜಯ್‌ಗೌಡ ಹಾಗೂ ಇತರರೊಡಗೂಡಿ ಹಲ್ಲೆ ನಡೆಸಲಾಗಿದೆ ಎಂದು ಚಂದ್ರಶೇಖರ್ ಸರಸ್ವತಿಪುರಂ ಠಾಣೆಗೆ ಸಲ್ಲಿಸಿರುವ ದೂರಿನಲ್ಲಿ ತಿಳಿಸಿದ್ದಾರೆ.

ಅಂದು ಸಂಜೆ 6.45ರ ಸುಮಾರಿನಲ್ಲಿ ತಾವು ಮಾತ್ರೆ ಖರೀದಿಸುವ ಸಲುವಾಗಿ ವಿಶ್ವಮಾನವ ಜೋಡಿ ರಸ್ತೆಯ ಮುರುಗನ್ ಮೆಡಿಕಲ್ಸ್‌ಗೆ ಹೋಗಲು ಕಾರನ್ನು ನಿಲ್ಲಿಸಿ, ಕೆಳಗಿಳಿದಾಗ ಮಧು, ಸಂಜಯ್ ಗೌಡ ಹಾಗೂ ಮತ್ತೊರ್ವ ಸೇರಿ ತಮ್ಮ ಮೇಲೆ ಯಾವುದೋ ವಸ್ತುವಿನಿಂದ ಹಲ್ಲೆ ಮಾಡಿದ್ದಲ್ಲದೆ, ಕೊಲೆ ಬೆದರಿಕೆ ಹಾಕಿದ್ದಾರೆ. ಇವರು ಹಲ್ಲೆ ಮಾಡುವ ವೇಳೆ ತಮ್ಮೊಂದಿಗೆ ಬಂದಿದ್ದ ಹಿರಿಯ ಅಭಿಯಂತರರಾದ ದಿಲೀಪ್ ಅವರು ತಮ್ಮನ್ನು ರಕ್ಷಿಸಿದ್ದಾರೆ ಎಂದು ದೂರಿನಲ್ಲಿ ತಿಳಿಸಿರುವ ಚಂದ್ರಶೇಖರ್, ಕೆ.ಆರ್.ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಹಸಿರು ನಮ್ಮ ಉಸಿರು

ಜೆಡಿಎಸ್-25-ಬೆಳ್ಳಿ ಹಬ್ಬ ಆಚರಣೆ ಸಂಭ್ರಮ

ಅಧಿಕಾರಕ್ಕಾಗಿ ಆಂತರಿಕ ಕಚ್ಚಾಟವೇ ಕಾಂಗ್ರೆಸ್‌ಗೆ ಮುಳುವಾಗಲಿದೆ

ಮಾಜಿ ಸಚಿವ ಸಾರಾ ಮಹೇಶ್ ವಾಗ್ದಾಳಿ



ಮೈಸೂರಿನ ಜೆಡಿಎಸ್ ಕಚೇರಿಯಲ್ಲಿ ಬೆಳ್ಳಿ ಸಂಭ್ರಮ ಆಚರಿಸಲಾಯಿತು.

ಮೈಸೂರು, ನ.21(ವಿವಿಹೆಚ್)– ಕಾಂಗ್ರೆಸ್ ಪಕ್ಷದಲ್ಲಿರುವ ಆಂತರಿಕ ಕಚ್ಚಾಟವೇ ಅವರಿಗೆ ಮುಳುವಾಗಲಿದ್ದು, ಮುಂದಿನ ಬಾರಿಗೆ (2028) ಜೆಡಿಎಸ್–ಬಿಜೆಪಿ ನೇತೃತ್ವದ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬರುವುದು ಖಚಿತ ಎಂದು ಮೈಸೂರಿನಲ್ಲಿ ಜೆಡಿಎಸ್ ಕಾರ್ಯಾಧ್ಯಕ್ಷ ಸಾ.ರಾ ಮಹೇಶ್ ವಿಶ್ವಾಸ ವ್ಯಕ್ತಪಡಿಸಿದರು.

ಜೆಡಿಎಸ್ ಪಕ್ಷದ 25ನೇ ವರ್ಷದ ವಾರ್ಷಿಕೋತ್ಸವ ಸಂಭ್ರಮಾಚರಣೆ ಸಂಬಂಧ ಮೈಸೂರಿನ ಜೆಡಿಎಸ್ ಕಚೇರಿಯಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಕಾಂಗ್ರೆಸ್ ಎಂಬ ಮುಳುಗುತ್ತಿರುವ ಹಡಗನ್ನು ಹಿಡಿದು ಕೊಳ್ಳಲು ಇಬ್ಬರು ಪೈಪೋಟಿ ನಡೆಸುತ್ತಿದ್ದಾರೆ. ಆಡಳಿತಾರೂಢ ಕಾಂಗ್ರೆಸ್ ಪಕ್ಷದಲ್ಲಿ ಗದ್ದುಗೆ ಗುದ್ದಾಟ, ಜಂಗಿ ಕುಸ್ತಿ, ಆಂತರಿಕ ಒಳ ಜಗಳ ನಡೆಯುತ್ತಿದೆ ಇದೇ ಅವರಿಗೆ ಮುಳುವಾಗಲಿದೆ ಎಂದು ಭವಿಷ್ಯ ನುಡಿದರು.

ಅಧಿಕಾರಕ್ಕೆ ಬಂದು ಎರಡೂವರೆ ವರ್ಷಗಳು ಆಗಿದೆ. ಸಿಎಂ ಬದಲಾವಣೆ ವಿಚಾರವಾಗಿ ಬಹಳ ಚರ್ಚೆಗಳು ನಡೆಯುತ್ತಿವೆ. ಇದರ ಮಧ್ಯೆ ಸಚಿವ ಸಂಪುಟ ಪುನರ್ ರಚನೆ ಕುರಿತು ಪ್ರಸ್ತಾಪಗಳಾಗುತ್ತಿವೆ. ಸಿಎಂ ಕುರ್ಚಿಗಾಗಿ ಸಿದ್ದರಾಮಯ್ಯ, ಡಿಕೆಶಿ ನಡುವೆ ಒಳಗೊಳಗೆ ಪೈಪೋಟಿ ನಡೆಯುತ್ತಿದೆ. ಲಾಬಿ ನಡೆಸಲು ದೆಹಲಿಗೆ ಹೋಗಿ ಬರುವುದರಲ್ಲೇ ಕಾಲಹರಣ ಮಾಡುತ್ತಿದ್ದಾರೆ ಎಂದು ದೂರಿದರು.

ಇದರ ಮಧ್ಯೆ ರಾಜ್ಯದ ಅಭಿವೃದ್ಧಿ ಕುಂಠಿತವಾಗಿದೆ ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಎಲ್ಲೆಡೆ ಅಭದ್ರತೆ ಕಾಣುತ್ತಿದ್ದು ಮತದಾರರು ಇದೆಲ್ಲವನ್ನೂ ಗಮನಿಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಬುದ್ಧಿ ಕಲಿಸುವ ಸಲುವಾಗಿ 2028ಕ್ಕೆ ಬಿಜೆಪಿ ಜೆಡಿಎಸ್ ಮೈತ್ರಿ ಸರ್ಕಾರಕ್ಕೆ ಆಶೀರ್ವಾದ ಮಾಡಲಿದ್ದಾರೆ ಎಂದರು.

ಜೆಡಿಎಸ್ ಬೆಳ್ಳಿ ಹಬ್ಬದ ಆಚರಣೆ ಪ್ರಯುಕ್ತ ಮೈಸೂರಿನ ಜೆಡಿಎಸ್ ಕಚೇರಿಯಲ್ಲಿ ಸುಮಾರು 25 ವರ್ಷಗಳಿಂದ ಕಸ ಗುಡಿಸಿಕೊಂಡು ಬರುತ್ತಿರುವ ಮೈಸೂರಿನ ನಾಗರಾಜು ದಂಪತಿಗೆ ಒಂದು ಲಕ್ಷ ರೂಪಾಯಿ ಧನ ಸಹಾಯವನ್ನು ಪಕ್ಷದ ವತಿಯಿಂದ ನೀಡಲಾಯಿತು. ಜೊತೆಗೆ ನಗರದ ವಿವಿಧ ಆಸ್ಪತ್ರೆಗಳಿಗೆ ಭೇಟಿ ನೀಡಿ ಬಡ ರೋಗಿಗಳಿಗೆ ಹಣ್ಣು–ಹಂಪಲು ವಿತರಿಸಿದರು.

ಶಾಸಕ ಜಿ.ಡಿ.ಹರೀಶ್ ಗೌಡ, ವಿಧಾನ ಪರಿಷತ್ ಸದಸ್ಯ ಮಂಜೇಗೌಡ, ಮಾಜಿ ಶಾಸಕ ಕೆ.ಮಹದೇವ್, ಅಶ್ವಿನ್ ಕುಮಾರ್, ಮುಖಂಡರಾದ ಎಸ್‌ಬಿಎಂ ಮಂಜು, ಚಿನ್ನಿ ರವಿ ಉಪಸ್ಥಿತರಿದ್ದರು.

ಮಂಡ್ಯ ಡಿಸಿಸಿ ಬ್ಯಾಂಕ್ ನೂತನ ಅಧ್ಯಕ್ಷರಾಗಿ ಸಚಿನ್ ಚಲುವರಾಯಸ್ವಾಮಿ ಆಯ್ಕೆ



ಮಂಡ್ಯ ಡಿಸಿಸಿ ಬ್ಯಾಂಕ್ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಸಚಿವ ಚಲುವರಾಯಸ್ವಾಮಿ ಪುತ್ರ ಸಚಿನ್ ಅವರನ್ನು ಅಭಿನಂದಿಸಲಾಯಿತು.

ಮಂಡ್ಯ,ನ.21– ಮಂಡ್ಯ ಡಿಸಿಸಿ ಬ್ಯಾಂಕ್ ನೂತನ ಅಧ್ಯಕ್ಷರಾಗಿ ನಟ ಹಾಗೂ ಸಚಿವ ಚಲುವರಾಯಸ್ವಾಮಿ ಪುತ್ರ ಸಚಿನ್ ಚಲುವರಾಯಸ್ವಾಮಿ ಮತ್ತು ಉಪಾಧ್ಯಕ್ಷರಾಗಿ ಚಲುವರಾಜು ಆಯ್ಕೆಯಾಗಿದ್ದು, ಅಪೇಕ್ಸ್ ಬ್ಯಾಂಕ್ ನಿರ್ದೇಶಕರಾಗಿ ಶಾಸಕ ಪಿ.ಎಂ.ನರೇಂದ್ರ ಸ್ವಾಮಿ ಆಯ್ಕೆ ಯಾಗಿದ್ದಾರೆ.

ಚುನಾವಣೆಯಲ್ಲಿ ಆಯ್ಕೆಯಾದ ನಂತರ ಮಾತನಾಡಿದ ಸಚಿನ್ ಅವರು, ಈ ಗೆಲುವಿಗೆ ಕಾರಣರಾದ ಪಕ್ಷದ ಎಲ್ಲಾ ಕಾರ್ಯಕರ್ತರು, ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಕೃಷಿ ಸಚಿವರಾದ ಎನ್ ಚಲುವರಾಯಸ್ವಾಮಿ ಹಾಗೂ ಜಿಲ್ಲೆಯ ಎಲ್ಲಾ ಶಾಸಕರಿಗೂ ಹಾಗೂ ಮುಖ್ಯವಾಗಿ 12 ಜನ ನಿರ್ದೇಶಕರಿಗೂ ಧನ್ಯವಾದ ತಿಳಿಸಿದರು.

ಶಂಕರೇಗೌಡರು ಹಾಗೂ ಚೌಡೇಗೌಡರು ಸ್ಥಾಪಿಸಿದ ಸಂಸ್ಥೆ ಡಿ.ಸಿ.ಸಿ ಬ್ಯಾಂಕ್ ಅಲ್ಲಿಂದಲೂ ಉತ್ತಮ ಕೆಲಸ ಮಾಡಿಕೊಂಡು ಬರುತ್ತಿದೆ. ಕಳೆದ ಎರಡೂವರೆ ವರ್ಷಗಳಿಂದ ಜೋಗಿಗೌಡರು ಸಹ ಉತ್ತಮ ಕಾರ್ಯಗಳನ್ನು ರೂಪಿಸಿಕೊಂಡು ಬಂದಿದೆ. ಮುಂದಿನ ದಿನಗಳಲ್ಲಿ ಡಿ.ಸಿ.ಸಿ ಬ್ಯಾಂಕ್‌ನ ಎಲ್ಲಾ ಸಿಬ್ಬಂದಿ ವರ್ಗದ ಜೊತೆ ಸಮನ್ವಯ ಸಾಧಿಸಿ ಉತ್ತಮ ಕೆಲಸ ಮಾಡಲಾಗುವುದು ಎಂದರು.

ಶಾಸಕ ಹಾಗೂ ರಾಜ್ಯ ವಾಯು ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷ ಪಿ.ಎಂ.ನರೇಂದ್ರ ಸ್ವಾಮಿ ಮಾತನಾಡಿ, ಮೊದಲೇ ಬಾರಿಗೆ ಹೆಚ್ಚಿನ ಬಹುಮತ ಪಡೆದು ಒಮ್ಮತ ನಿರ್ಧಾರಕ್ಕೆ ಬಂದು ಒಗ್ಗಟ್ಟನ್ನು ಸಾಧಿಸಿದ್ದೇವೆ. ಈ ಒಗ್ಗಟ್ಟು ಸಾಧಿಸಲು ಸಹಕಾರಿಯಾದ ಎಲ್ಲಾ ನಾಯಕರಿಗೆ ಇದರ ಕೀರ್ತಿ ಸಲ್ಲುತ್ತದೆ ಎಂದು ಹೇಳಿದರು.

ಮುಂದಿನ ದಿನಗಳಲ್ಲಿ ಮಂಡ್ಯ ಜಿಲ್ಲೆಯ ಸಹಕಾರಿಗಳಿಗೆ, ರೈತ ಪರ ಚಿಂತನೆಯ ಜೊತೆಗೆ ಕೈಗಾರಿಕೆಗೂ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಡಿಸಿಸಿ ಬ್ಯಾಂಕ್ ಕಾರ್ಯ ನಿರ್ವಹಿಸುತ್ತದೆ. ಡಿ.ಸಿ.ಸಿ ಬ್ಯಾಂಕ್‌ನ ನೂತನವಾಗಿ ಅಧ್ಯಕ್ಷ ಸಚಿನ್ ಹಾಗೂ ಉಪಾಧ್ಯಕ್ಷ ಚಲುವರಾಜ್ ಅವರಿಗೆ ಅಭಿನಂದನೆ ಸಲ್ಲಿಸಿದರು.

ಉಪವಿಭಾಗಾಧಿಕಾರಿ ಶಿವಮೂರ್ತಿ ಮಾತನಾಡಿ, ಅಧ್ಯಕ್ಷ ಸ್ಥಾನಕ್ಕೆ ಸಚಿನ್ ಸಿ ಮತ್ತು ಉಪಾಧ್ಯಕ್ಷರ ಸ್ಥಾನಕ್ಕೆ ಚಲುವರಾಜ್ ಅವರು ನಾಮಪತ್ರ ಸಲ್ಲಿಸಿದರು. ನಾಮಪತ್ರವನ್ನು ಪರಿಶೀಲಿಸಿ ನಾಮಪತ್ರವನ್ನು ಅಂಗೀಕರಿಸಲಾಗಿದೆ. ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಒಂದೇ ನಾಮಪತ್ರ ಸಲ್ಲಿಕೆಯಾಗಿರುವುದರಿಂದ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ 5 ವರ್ಷದ ಅವಧಿ ಅಧ್ಯಕ್ಷರಾಗಿ ಸಚಿನ್ ಮಾತ್ತು ಉಪಾಧ್ಯಕ್ಷರಾಗಿ ಚೆಲುವರಾಜ್ ಆಯ್ಕೆಯಾಗಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಹೆಚ್.ಬಿ.ರಾಮು, ಮುಖಂಡರಾದ ತ್ಯಾಗರಾಜು, ಕಂಬದಹಳ್ಳಿ ಪುಟ್ಟಸ್ವಾಮಿ, ಸಿ.ಎಂ.ದ್ಯಾವಪ್ಪ ಸೇರಿದಂತೆ ಹಲವರಿದ್ದರು.

ಉಪ್ಪಾರ ಸಮುದಾಯ ಅತ್ಯಂತ ಹಿಂದುಳಿದ ಸಮಾಜವಾಗಿದೆ



ಮಂಡ್ಯ, ನ.21– ಅಖಂಡ ಭಾರತದಲ್ಲಿ ವೈಭವಯುತ ಸಾಮ್ರಾಜ್ಯ ಕಟ್ಟಿ ಮೆರೆದ ಉಪ್ಪಾರ ಸಮಾಜವು ಇಂದು ಅತ್ಯಂತ ಹಿಂದುಳಿದ ಸಮಾಜವಾಗಿದೆ ಎಂದು ಚಿತ್ರದುರ್ಗ ಭಗೀರಥ ಮಠದ ಪುರುಷೋತ್ತಮಾನಂದಪುರಿ ಸ್ವಾಮೀಜಿ ವಿಷಾದಿಸಿದರು.

ನಗರದ ಗಾಂಧಿ ಭವನದಲ್ಲಿ ಜಿಲ್ಲಾ ಜೈ–ಭಗೀರಥ ಉಪ್ಪಾರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಶುಕ್ರವಾರ ನಡೆದ ಭಗೀರಥ ಜಯಂತ್ಯುತ್ಸವ, ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಜನಪ್ರತಿನಿಧಿಗಳಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಭಗೀರಥ ಮಹಾಋಷಿಗಳು ಅಸಾಧ್ಯವಾದ ಕೆಲಸವನ್ನು ಸಾಧ್ಯ ಮಾಡಿ ತೋರಿಸಿದ್ದಾರೆ, ಅದೇ ರೀತಿ ಬಸವ, ಬುದ್ಧ, ನಾಡಪ್ರಭು ಕೆಂಪೇಗೌಡ, ಸ್ವಾಮಿವಿವೇಕಾನಂದ, ಬಸವಣ್ಣ ಅಂಬೇಡ್ಕರ್ ಸೇರಿದಂತೆ ಅನೇಕ ಸಂತರನ್ನ ಎಲ್ಲರೂ ಗೌರವಿಸುತ್ತಾರೆ. ಸೂರ್ಯವಂಶ ಕ್ಷತ್ರಿಯರಲ್ಲಿ ಬರುವ ಸಗರ ಚಕ್ರವರ್ತಿ, ದಿಲೀಪ ಚಕ್ರವರ್ತಿ, ಮಾಂಧಾತ ಚಕವರ್ತಿ, ಸತ್ಯಹರಿಶ್ಚಂದ್ರ, ಪ್ರಭು ಶ್ರೀರಾಮ, ದಶರಥ ಮಹಾರಾಜ, ಭಗೀರಥ ಮಹರ್ಷಿಗಳು ಇಡೀ ಭರತ ಭೂಮಿಯನ್ನು ಪವಿತ್ರಗೊಳಿಸಿ ದೈವಾನು ಸಂಭೂತರಾಗಿದ್ದರು ಎಂದು ಬಣ್ಣಿಸಿದರು.

ಶಾಸಕ ಎ.ಬಿ.ರಮೇಶ್ ಬಂಡಿಸಿದ್ದೇಗೌಡ ಮಾತನಾಡಿದರು. ಮಾಜಿ ಶಾಸಕ ಎಂ.ಶ್ರೀನಿವಾಸ್ ಅಧ್ಯಕ್ಷತೆ ವಹಿಸಿದ್ದರು. ಉಪ್ಪಾರ ಸಮುದಾಯದ ರಾಜಕೀಯ ಮುಖಂಡರನ್ನು ಸನ್ಮಾನಿಸಲಾಯಿತು. ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಕಾರ್ಯಕ್ರಮದಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಮನ್ ಮುಲ್ ನಿರ್ದೇಶಕ ಬಿ.ಆರ್.ರಾಮಚಂದ್ರು, ಉಪ್ಪಾರ ಸಂಘದ ಬಳ್ಳಾರಿ ಜಿಲ್ಲಾ ಘಟಕದ ಅಧ್ಯಕ್ಷ ಎರ್ರಿಸ್ವಾಮಿ, ಮಂಡ್ಯ ಜಿಲ್ಲಾ ಘಟಕದ ಅಧ್ಯಕ್ಷೆ ನಾಗರತ್ನ, ಮೈಸೂರು ಜಿಲ್ಲಾ ಘಟಕದ ಅಧ್ಯಕ್ಷ ನಾಗರಾಜು, ರಾಮನಗರ ಜಿಲ್ಲಾ ಘಟಕದ ಅಧ್ಯಕ್ಷ ಮಂಜಪ್ಪ, ಕೆ. ವೆಂಕಟೇಶ್, ಸೋಮಣ್ಣ ಇದ್ದರು.

ಪಾಲಹಳ್ಳಿಯಲ್ಲಿ ಕುಸ್ತಿ ಪಂದ್ಯಾವಳಿ



ಪಾಲಹಳ್ಳಿ, ನ.21– ಶ್ರೀರಂಗಪಟ್ಟಣ ತಾಲೂಕಿನ ಪಾಲಹಳ್ಳಿ ಗ್ರಾಮದಲ್ಲಿ ಶಂಭುಲಿಂಗೇಶ್ವರ ಜಾತ್ರಾ ಮಹೋತ್ಸವ ಪ್ರಯುಕ್ತ ಕುಸ್ತಿ ಪಂದ್ಯಾವಳಿಯನ್ನು ನಡೆಸಲಾಯಿತು.

ಪಾಲಹಳ್ಳಿ ಪೈಲ್ವಾನ್ ಗಿರೀಶ್ ಹಾಗೂ ಬೆಳಗಾಂ ಪೈಲ್ವಾನ್ ಗಿರೀಶ್ ಅವರನ್ನು ಕುಸ್ತಿಗೆ ಬಿಡಿಸುವ ಮೂಲಕ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಕುಸ್ತಿಗೆ ಚಾಲನೆ ನೀಡಿ ಶುಭ ಹಾರೈಸಿದರು.

ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಶಾಸಕರಾದ ರಮೇಶ್ ಬಂಡಿಸಿದ್ದೇಗೌಡ, ದರ್ಶನ್ ಪುಟ್ಟಣ್ಣಯ್ಯ, ಉದಯ್, ಎಂಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ಪಿಎಸ್ ಚಂದ್ರಶೇಖರ್, ಬಿಜೆಪಿ ಮುಖಂಡ ರಾದ ಇಂಡವಾಳು ಸಚ್ಚಿದಾನಂದ, ಕುಸ್ತಿ ವ್ಯವಸ್ಥಾಪಕ ರಘುಗೌಡ, ಪೈ.ಮುಕುಂದ, ಪಿಎಚ್ ನಾಗರಾಜು, ಪಿ.ಹೆಚ್.ಚಂದ್ರ ಶೇಖರ್, ಪೈ.ಉಮೇಶ್, ದೇವರಾಜು ಶಂಕರೇಗೌಡ ಪೈ.ಸಂಜು, ಪೈ.ವಿಜೇಂದ್ರ, ಎಂ.ಉಮೇಶ್ ಉಪಸ್ಥಿತರಿದ್ದರು.

ಐದನೇ ಪುಟದಿಂದ

ಸರ್ಕಾರ ಉರುಳಿಸಿದರು

ಮಾತನಾಡಿ ಎಂದು ಕುಮಾರಸ್ವಾಮಿ ಅವರು ಹೇಳಿದ್ದಾರೆ. ನಾಳೆ ಮಾತನಾಡುತ್ತೇನೆ ಎಂದರು. ತಮ್ಮ ಆರೋಗ್ಯದ ಬಗ್ಗೆ ಟೀಕಿಸುವವರಿಗೆ ತಿರುಗೇಟು ನೀಡಿದ ಅವರು, 'ದೇವೇಗೌಡರು ಮುಗಿದೇ ಹೋದ್ರು ಅಂತಾ ಅನೇಕರು ತಿಳಿದು ಕೊಂಡಿದ್ದಾರೆ. 93ನೇ ವಯಸ್ಸಿನಲ್ಲಿ ಧ್ವಜಾರೋಹಣ ಮಾಡ್ತಿದ್ದೇನೆ, ಪಕ್ಷಕ್ಕೆ ಹೋರಾಡುವ ಶಕ್ತಿ ನನಗಿದೆ. ದಿನಕ್ಕೆ ನಾಲ್ಕೈದು ಬಾರಿ ಡಯಾಲಿಸಿಸ್ ಮಾಡಿಸಿಕೊಳ್ತಿದ್ದೇನೆ. ಇದು ದೊಡ್ಡ ಸಮಸ್ಯೆ ಅಲ್ಲ. ಸವಿಸ್ತಾರವಾಗಿ ಮಾತನಾಡುವ ಶಕ್ತಿ ಪರಮಾತ್ಮ ಕೊಟ್ಟಿದ್ದಾನೆ. ಜೆಡಿಎಸ್ ಮತ್ತೊಮ್ಮೆ ತಲೆ ಎತ್ತಿ ನಿಲ್ಲಬೇಕು ಎಂದು ಮಾಜಿ ಪ್ರಧಾನಿ ಹೇಳಿದರು.

ಅವಿರೋಧ ಆಯ್ಕೆ

ಹಾಗೂ ಸದಸ್ಯತ್ವ ನೋಂದಣಿ ಅಭಿಯಾನ ಯಶಸ್ವಿ ಯಾಗಿ ಮುಂದುವರಿದಿದ್ದು, ಇದಕ್ಕೆ ಸಭೆಯಲ್ಲಿ ಮೆಚ್ಚುಗೆ ವ್ಯಕ್ತವಾಗಿದೆ. ಎಲ್ಲಾ ನಾಯಕರು ನಿಖಿಲ್ ಅವರ ಸಂಘಟನಾ ಶಕ್ತಿಯನ್ನು ಶ್ಲಾಘಿಸಿದ್ದಾರೆ ಎಂದರು. ಈ ವೇಳೆ ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಮಾಜಿ ಸಚಿವ ಬಂಡೆಪ್ಪ ಕಾಶೆಂಪುರ್, ಕೋರ್ ಕಮಿಟಿ ಅಧ್ಯಕ್ಷ ಎಂ.ಕೃಷ್ಣಾರೆಡ್ಡಿ, ವಿಧಾನಪರಿಷತ್ ಸದಸ್ಯ ಟಿ.ಎ. ಶರವಣ, ಮಾಜಿ ಶಾಸಕರಾದ ದೊಡ್ಡನಗೌಡ ಪಾಟೀಲ್, ಹೆಚ್.ಎಂ.ರಮೇಶ್ ಗೌಡ, ಜೆಡಿಎಸ್ ಐಟಿ ವಿಭಾಗದ ಅಧ್ಯಕ್ಷ ಚಂದನ್ ಸೇರಿ ದಂತೆ ಅನೇಕ ಮುಖಂಡರು ಉಪಸ್ಥಿತರಿದ್ದರು.

ಅವರಿಗೆ ಶುಭ ಕೋರುತ್ತೇನೆ

ಅಧ್ಯಕ್ಷರ ಬದಲಾವಣೆ ಮಾಡುವಂತೆ ನಿರಂತರವಾಗಿ ಸಭೆಗಳನ್ನು ಮಾಡಿಕೊಂಡೇ ಬಂದಿದ್ದಾರೆ ಎಂದು ವ್ಯಂಗ್ಯವಾಡಿದರು. ನನ್ನ ಬಳಿ ಯಾವ ಬಣವೂ ಇಲ್ಲ, ನಾನು ಯಾವುದೇ ಬಣದ ನಾಯಕನಲ್ಲ. ನಾನು 140 ಶಾಸಕರ ಅಧ್ಯಕ್ಷ, 140 ಶಾಸಕರೂ ನನಗೆ ಮುಖ್ಯ, ಗುಂಪುಗಾರಿಕೆ ನನ್ನ ರಕ್ತದಲ್ಲೇ ಇಲ್ಲ. ಯಾವ ಗುಂಪನ್ನೂ ದೆಹಲಿಗೆ ಕರೆದುಕೊಂಡು ಹೋಗಲು ನನಗೆ ಇಚ್ಛೆ ಇಲ್ಲ. ನಾನು ಗುಂಪುಗಾರಿಕೆ ಮಾಡುವುದಿಲ್ಲ. ಸಚಿವ ಸಂಪುಟ ಪುನಾರಚನೆ ಮಾಡುವುದಾಗಿ ಮುಖ್ಯಮಂತ್ರಿ ಘೋಷಿಸಿದ್ದಾರೆ. ಹೀಗಾಗಿ ಮಂತ್ರಿ ಸ್ಥಾನದ ಆಕಾಂಕ್ಷೆ ಇರುವವರು ಹೈಕಮಾಂಡ್ ನಾಯಕರನ್ನು ಭೇಟಿ ಮಾಡಲು ದಿಲ್ಲಿಗೆ ಹೋಗುವುದು ಸಹಜ. ಹೈಕಮಾಂಡ್ ನಾಯಕರನ್ನು ಭೇಟಿ ಮಾಡುವ ಹಕ್ಕು ಅವರಿಗೆ ಇದೆ. ನಾನು ಯಾರನ್ನೂ ಕರೆದುಕೊಂಡು ಹೋಗಿಲ್ಲ. ಕೆಲವರು ಮುಖ್ಯಮಂತ್ರಿಗಳ ಜೊತೆ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿದರೆ, ಮತ್ತೆ ಕೆಲವರು ತಾವಾಗಿಯೇ ಹೋಗಿದ್ದಾರೆ. ಇದರಲ್ಲಿ ತಪ್ಪೇನಿದೆ. ನಾವು ಯಾರನ್ನೂ ತಡೆಯಲು ಸಾಧ್ಯವಿಲ್ಲ.

ಒಂದು ಪಕ್ಷದ ಶಾಸಕರು ಮಂತ್ರಿ, ಮುಖ್ಯಮಂತ್ರಿ ಆಗಲು ಅರ್ಹರಿರುತ್ತಾರೆ. ಐದು ವರ್ಷ ತಾವೇ ಸಿಎಂ ಆಗಿರುವುದಾಗಿ ಮುಖ್ಯಮಂತ್ರಿಯೂ ಹೇಳಿದ್ದಾರೆ ಎಂದರು.

ಪರಪ್ಪನ ಅಗ್ರಹಾರ ಜೈಲಿಗೆ ಡಿಕೆಶಿಭೇಟಿ: ರಾಜ್ಯ ರಾಜಕಾರಣದಲ್ಲಿ ಸಿಎಂ–ಡಿಸಿಎಂ ನಡುವೆ ಸಿಎಂ ಕುರ್ಚಿಗಾಗಿ ಕದನ ತಾರಕಕ್ಕೇರುತ್ತಿದ್ದು, ಶಾಸಕರ ಬೆಂಬಲ ಪಡೆಯುವ ಸಂಬಂಧ ಚಟುವಟಿಕೆಗಳು ಚುರುಕುಗೊಂಡಿದೆ ಅತ್ತ ಡಿಸಿಎಂ ಡಿ.ಕೆ.ಶಿವಕುಮಾರ್ ಆಪ್ತ ಸಚಿವರು, ಶಾಸಕರು ದೆಹಲಿಯಲ್ಲಿ ಲಾಬಿ ನಡೆಸಲು ಯತ್ನಿಸುತ್ತಿದ್ದರೆ, ಇತ್ತ ಸಿಎಂ ಆಪ್ತ ಶಾಸಕರು, ಸಚಿವರು ಬೆಂಗಳೂರಿನಲ್ಲಿ ಸಭೆ ನಡೆಸಿದ್ದಾರೆ. ಈ ಮಧ್ಯೆ ಜೈಲಿನಲ್ಲಿರುವ ಶಾಸಕರಾದ ವಿನಯ್ ಕುಲಕರ್ಣಿ ಹಾಗೂ ವೀರೇಂದ್ರ ಪಪ್ಪಿ ಅವರೊಂದಿಗೆ ಚರ್ಚೆ ನಡೆಸಲು ಡಿಸಿಎಂ ಡಿ.ಕೆ.ಶಿವಕುಮಾರ್ ದಿಢೀರ್ ಪರಪ್ಪನ ಅಗ್ರಹಾರ ಜೈಲಿಗೆ ಭೇಟಿ ನೀಡಿದ್ದರು. ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿನಯ್ ಕುಲಕರ್ಣಿ, ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ವೀರೇಂದ್ರ ಪಪ್ಪಿ ಜೈಲು ಸೇರಿದ್ದಾರೆ. ಒಂದು ವೇಳೆ ಬಲಾಬಲ ಪ್ರದರ್ಶನ ವಿಚಾರ ಬಂದಲ್ಲಿ ಶಾಸಕರ ಬೆಂಬಲದ ವಿಚಾರ ಮುಖ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಶಾಸಕರ ಬೆಂಬಲ ಪಡೆಯುವ ನಿಟ್ಟಿನಲ್ಲಿ ಸಕ್ರಿಯರಾಗಿರುವ ಡಿ.ಕೆ.ಶಿವಕುಮಾರ್, ಈ ಇಬ್ಬರು ಶಾಸಕರ ಜೊತೆ ಮಾತನಾಡಲು ತೆರಳಿರಬಹುದು ಎಂಬ ಮಾತು ಕೇಳಿ ಬರುತ್ತಿದೆ.

ಪೊಲೀಸ್ ವಶಕ್ಕೆ

ಅವರು ನೀಡಿದ ಮಾಹಿತಿಯನ್ನಾಧರಿಸಿ ಕಾರ್ಯಾಚರಣೆ ಮುಂದುವರಿಯುತ್ತಿದ್ದಂತೆಯೇ ಹಂತ ಹಂತವಾಗಿ ಮಾಹಿತಿಗಳ ಮಹಾಪೂರವೇ ಹರಿದು ಬಂದಿದ್ದು, ಗುರುವಾರ ಬೆಳಗ್ಗೆ ತಿರುಪತಿ ಯಲ್ಲಿ ಇನ್ನೋವಾ ಕಾರನ್ನು ವಶಪಡಿಸಿಕೊಂಡು ಇಬ್ಬರನ್ನು ಬಂಧಿಸಿದ ಪೊಲೀಸರು, ಸಂಜೆ ವೇಳೆಗೆ ಕಾನ್ಸ್‌ಟೇಬಲ್ ಅಣ್ಣಪ್ಪ ನಾಯಕ ಹಾಗೂ ಜೇವಿಯರ್‌ನನ್ನು ವಶಕ್ಕೆ ಪಡೆದಿದ್ದಾರೆ. ರಾತ್ರಿ ವೇಳೆಗೆ ಚೆನ್ನೈನಲ್ಲಿ 6.30 ಕೋಟಿ ರೂ.ಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಕಾರ್ಯಾಚರಣೆಯಲ್ಲಿ ಕಿಂಗ್‌ಪಿನ್ ರವಿ ಪತ್ನಿ ನೀಡಿದ ಹೇಳಿಕೆ ಮಹತ್ವದ್ದಾಗಿತ್ತು ಎಂದು ಮೂಲಗಳು ತಿಳಿಸಿವೆ.

ಹೇಳಿಕೆ ನೀಡಬೇಡಿ

ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರಿಗೆ ನಿಷ್ಠರಾಗಿರುವ ಸಚಿವರೊಬ್ಬರು ಮತ್ತು ಹಲವಾರು ಶಾಸಕರು ದೆಹಲಿಗೆ ಪ್ರಯಾಣ ಬೆಳೆಸಿದ ಒಂದು ದಿನದ ನಂತರ ಎಐಸಿಸಿ ಈ ಎಚ್ಚರಿಕೆ ನೀಡಿದೆ. ನಿರ್ಣಾಯಕವಾಗಿ ಸೋಲು ಮತ್ತು ಬಣ ರಾಜಕಾರಣದಿಂದ ತುಂಬಿರುವ ಬಿಜೆಪಿ, ಮಾಧ್ಯಮದ ಒಂದು ಭಾಗವು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಉದ್ದೇಶಪೂರ್ವಕವಾಗಿ ಅಪಪ್ರಚಾರ ನಡೆಸುತ್ತಿದೆ. ಈ ಬಗ್ಗೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆ ಶಿವಕುಮಾರ್ ಜೊತೆ ಚರ್ಚೆ ನಡೆಸಲಾಗಿದ್ದು, ಅಪಪ್ರಚಾರದ ಬಗ್ಗೆ ಅವರು ಒಪ್ಪಿಕೊಂಡಿದ್ದಾರೆ ಎಂದು ಸುರ್ಜೇವಾಲಾ ಅವರು ಎಕ್ಸ್ ನಲ್ಲಿ ಪೋಸ್ಟ್ ಮಾಡಿದ್ದಾರೆ.

ಅಭಿವೃದ್ಧಿ, ಸರ್ಕಾರದ ಭರವಸೆ ದುರ್ಬಲಗೊಳಿಸುವುದು ಬಿಜೆಪಿಯ ಉದ್ದೇಶವಾಗಿದೆ. ಕೆಲವು ಕಾಂಗ್ರೆಸ್ ನಾಯಕರು ಮತ್ತು ಶಾಸಕರ ಅನಗತ್ಯ ಹೇಳಿಕೆಗಳು ಸಹ ಊಹಾಪೋಹಗಳಿಗೆ ಕಾರಣವಾಗಿದೆ. ಹೀಗಾಗಿ ನಾಯಕತ್ವ ಬದಲಾವಣೆ ಬಗ್ಗೆ ಅನಗತ್ಯ ಹೇಳಿಕೆಗಳನ್ನು ನೀಡಬೇಡಿ ಎಂದು ಸುರ್ಜೇವಾಲ ಅವರು ಕಾಂಗ್ರೆಸ್ ಶಾಸಕರಿಗೆ ಎಚ್ಚರಿಕೆ ನೀಡಿದ್ದಾರೆ.

ಬಲಾಬಲ ಪ್ರದರ್ಶನ

ಬೆಂಗಳೂರಿನ ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿರುವ ಪಕ್ಷದ ಶಾಸಕರಾದ ವಿನಯ್ ಕುಲಕರ್ಣಿ ಮತ್ತು ವೀರೇಂದ್ರ ಪಪ್ಪಿ ಅವರನ್ನು ಭೇಟಿ ಮಾಡಿ ಮಾತು ಕತೆ ನಡೆಸಿದ್ದಲ್ಲದೆ, ಅವರ ಬೆಂಬಲವನ್ನೂ ಪಡೆದುಕೊಂಡಿದ್ದಾರೆ. ಶಿವಕುಮಾರ್ ಮಾತುಕತೆ ನಡೆಸುವ ಸಂದರ್ಭದಲ್ಲೇ ಅವರ ಬೆಂಬಲಿಗರೊಬ್ಬರು ಇವರಿಬ್ಬರ ಸಹಿ ಪಡೆದುಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ. ಇದುವರೆಗೂ ಮುಚ್ಚು ಮರೆಯಲ್ಲಿ ನಡೆಯುತ್ತಿದ್ದ ಅಧಿಕಾರ ಹಸ್ತಾಂತರ ಸಮರ ಬಹಿರಂಗವಾಗೇ ಸಿದ್ದರಾಮಯ್ಯ ಅಧಿಕಾರ ಹಸ್ತಾಂತರ ಮಾಡಬೇಕೆಂಬ ಒತ್ತಾಯ ತರುತ್ತಿದ್ದಾರೆ. ಆದರೆ, ಶಿವಕುಮಾರ್ ಮಾತ್ರ ಪಕ್ಷದ ನಿಷ್ಠರಂತೆ ಮಾತನಾಡುತ್ತಾ, ತಮಗೂ, ಈ ಬೆಳವಣಿಗೆಗೂ ಯಾವುದೇ ಸಂಬಂಧ ಇಲ್ಲ ಎನ್ನುವಂತೆ ನಡೆದುಕೊಳ್ಳುತ್ತಿದ್ದಾರೆ.

ಎರಡೂ ಬಜೆಟ್ ನಾನೇ ಮಂಡಿಸುತ್ತೇನೆ

ಹಾಗಾದರೆ ಈ ಪ್ರಶ್ನೆ ಏಕೆ ಕೇಳುತ್ತೀರಾ ಎಂದು ಸಿಡಿಮಿಡಿ ಗೊಂಡ ಸಿದ್ದರಾಮಯ್ಯ, ಹೈಕಮಾಂಡ್ ಸೂಚನೆಯನ್ನು ನಾನೂ ಪಾಲಿಸಬೇಕು, ಶಾಸಕರು ಕೇಳಬೇಕು ಎಂದು ಹೇಳಿದರು. ಡಿ.ಕೆ.ಶಿವಕುಮಾರ್ ಬಣದ ಶಾಸಕರು ದೆಹಲಿಯಲ್ಲಿ ವರಿಷ್ಠರನ್ನು ಭೇಟಿ ಮಾಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ಈ ವಿಚಾರದ ಬಗ್ಗೆ ಡಿ.ಕೆ.ಶಿವಕುಮಾರ್ ಅವರೇ ಸ್ಪಷ್ಟನೆ ನೀಡಿದ್ದಾರಲ್ಲ ಎಂದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ನಾಳೆ (ನವೆಂಬರ್ 22) ಬೆಂಗಳೂರಿನಲ್ಲಿ ಭೇಟಿ ಮಾಡುತ್ತೇನೆ ಎಂದು ತಿಳಿಸಿದರು.

ಸಚಿವ ಸಂಪುಟ ಪುನಾರಚನೆಯನ್ನು ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಹೈಕಮಾಂಡ್ ಸೂಚನೆಯನ್ನು ನಾನೂ ಕೇಳಬೇಕು, ಡಿ.ಕೆ.ಶಿವಕುಮಾರ್ ಕೂಡ ಕೇಳಬೇಕು ಎಂದರು.

ಸಿದ್ದರಾಮಯ್ಯ ಅವರು ಕೊಟ್ಟ ಮಾತು ತಪ್ಪುವುದಿಲ್ಲ ಎಂಬ ಡಿ.ಕೆ.ಸುರೇಶ್ ಹೇಳಿಕೆಗೆ ಹಾಸ್ಯ ಧಾಟಿಯಲ್ಲಿ ಗ್ಯಾರಂಟಿ ವಿಚಾರದಲ್ಲಿ ನಾನು ಮಾತು ತಪ್ಪುವುದಿಲ್ಲ ಎಂದು ಹೇಳಿರಬೇಕು ಎಂದು ಪ್ರತಿಕ್ರಿಯಿಸಿದರು.

10 ಲಕ್ಷ ಮೆಟ್ರಿಕ್ ಟನ್ ಮೆಕ್ಕೆಜೋಳ ಖರೀದಿ

ಬೆಲೆ ಕುಸಿತವಾಗಿರುವ ಹಿನ್ನೆಲೆಯಲ್ಲಿ 10 ಲಕ್ಷ ಮೆಟ್ರಿಕ್ ಟನ್ ಮೆಕ್ಕೆ ಜೋಳವನ್ನು ಖರೀದಿ ಮಾಡುವಂತೆ ಮಾರುಕಟ್ಟೆ ಫೆಡರೇಷನ್ ಗೆ ಸೂಚನೆ ನೀಡಿದ್ದೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಮೆಕ್ಕೆಜೋಳಕ್ಕೆ 2,400 ರೂಪಾಯಿ ಎಂಎಸ್‌ಪಿ ಬೆಲೆ ನಿಗದಿ ಮಾಡಲಾಗಿದೆ. ಆದರೆ ಕೇಂದ್ರ ಸರ್ಕಾರ ಮೆಕ್ಕೆ ಜೋಳ ಖರೀದಿ ಕೇಂದ್ರ ಸ್ಥಾಪನೆ ಮಾಡಿಲ್ಲ. ಈ ಬಾರಿ ರೈತರು ಅತೀ ಹೆಚ್ಚು ಮೆಕ್ಕೆಜೋಳ ಖರೀದಿ ಮಾಡಿರುವ ಕಾರಣ 55 ಲಕ್ಷ ಮೆಟ್ರಿಕ್ ಟನ್ ಬೆಳೆ ಬಂದಿದೆ. ಈ ವಿಚಾರ ತಿಳಿದಿದ್ದರೂ ಕೇಂದ್ರ ಸರ್ಕಾರ 70 ಲಕ್ಷ ಮೆಟ್ರಿಕ್ ಟನ್ ಮೆಕ್ಕೆಜೋಳವನ್ನು ವಿದೇಶದಿಂದ ಆಮದು ಮಾಡಿಕೊಂಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ತನಕ ಕೇಂದ್ರ ಸರ್ಕಾರ ಮೆಕ್ಕೆ ಜೋಳ ಖರೀದಿ ಪ್ರಕ್ರಿಯೆ ಆರಂಭಿಸಿಲ್ಲ. ಡಿಸ್ಟಿಲರೀಸ್‌ಗಳು ರೈತರಿಂದ ಕಡಿಮೆ ಬೆಲೆಗೆ ಮೆಕ್ಕೆಜೋಳ ಖರೀದಿ ಮಾಡಿದ್ದು, ಮಾರುಕಟ್ಟೆ ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿದೆ. ರೈತರಿಗೆ ಅನ್ಯಾಯವಾಗದಂತೆ ಖರೀದಿಸಲು ಡಿಸ್ಟಲರೀಸ್‌ನವರ ಜೊತೆ ಮಾತನಾಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದು ಸಿದ್ದರಾಮಯ್ಯ ಸ್ಪಷ್ಟನೆ ನೀಡಿದರು. ಮೆಕ್ಕೆ ಜೋಳ ಆಮದು ಮಾಡಿಕೊಳ್ಳದೆ, ದೇಶೀಯವಾಗಿ ಸಿಗುವುದನ್ನು ಖರೀದಿಸುವಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯುತ್ತೇನೆ. ಹಣಕಾಸು ಕಾರ್ಯದರ್ಶಿ ಈ ಸಂಬಂಧ ಸಭೆ ನಡೆಸಲು ಹೇಳಿದ್ದೇನೆ ಎಂದರು. ಅತಿವೃಷ್ಟಿಯಿಂದ ಆಗಿರುವ ಆಸ್ತಿ ಪಾಸ್ತಿ ಹಾನಿಗೆ ಪರಿಹಾರ, ಬೆಳೆ ನಷ್ಟಕ್ಕೆ ಪರಿಹಾರ ನೀಡುವಂತೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ಮನವಿ ಮಾಡಿದ್ದೇನೆ. ನರೇಂದ್ರ ಮೋದಿ ಅವರು ನನ್ನ ಮನವಿಗೆ ಸಕರಾತ್ಮಕವಾಗಿ ಸ್ಪಂದಿಸಲಿದ್ದಾರೆ ಎಂದು ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

12ನೇ ವರ್ಷದ ಸವಿನೆನಪು



ಜಿ. ಕೆಂಡಗಣ್ಣಾರಾಧ್ಯ

ನೀವು ನಮ್ಮನ್ನಗಲಿ ಇಂದಿಗೆ 12 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ: ಕುಟುಂಬವರ್ಗದವರು ಹಾಗೂ ಶ್ರೀ ಪಾರ್ವತಿ ಟ್ರಾನ್ಸ್‌ಪೋರ್ಟ್, ಮೈಸೂರು

Central Sericultural Research & Training Institute

(Central Silk Board, Ministry of Textiles - Govt. of India)

Manandavadi Road, Srirampura, Mysore-08

Phone No. 0821-2361937 Fax No. 0821- 2362845

No.CSB/RTI/SSC/2025-26 Date : 20.11.2025

WALK-IN-INTERVIEW FOR THE POST OF PROJECT ASSISTANT

A Walk-in-Interview will be held on **09.12.2025 at CSB - Central Sericultural Research and Training Institute, Srirampura, Mysuru-570 008 as shown below 'A'** 01 (One) **Project Assistant (P.A)** purely on contract basis under CSB approved project **"Development of Microbial consortium for improving phosphorus, potassium & Zinc Nutrition in Mulberry" (PIN 01053 SIC)** for a period up to **October 2025 to September 2028** or completion of project whichever is earlier under CSB Terms and Conditions.

Qualifications for Project Assistant (PA) :

1. B.Sc. in Agriculture / Life Science with minimum 55% Marks (50% for SC/ST Candidates).

Desirable Qualifications : (i) Preferance will be given to the candidates having higher Qualifications and / or work experience in Soil Microbiology / Soil Science / Agronomy / Sericulture.

Walk-in-interview time 10.30am (Candidates should reach the venue by 9.30am for verification of documents, other recruitment procedures).

Interested can also visit our website **: www.csrtimys.res.in, http//csb.gov.in/** for details.

Sd/- Director, CSR&TI , Mysuru

Central Sericultural Research & Training Institute

(Central Silk Board, Ministry of Textiles - Govt. of India)

Manandavadi Road, Srirampura, Mysore-08

Phone No. 0821-2361937 Fax No. 0821- 2362845

No.CSB/RTI/MBG/2025-26 Date : 20.11.2025

WALK-IN-INTERVIEW FOR THE POST OF PROJECT ASSISTANT

A Walk-in-Interview will be held on **06.12.2025 at CSB - Central Sericultural Research and Training Institute, Srirampura, Mysuru-570 008 as shown below 'A'** 01 (One) **Project Assistant (P.A)** purely on contract basis under CSB approved project **"Evaluation of promising mulberry genotypes for higher leaf yield and resistance to root rot and root knot diseases in Primary Yield Trial (PIE 01022 SI)** for a period up to **May 2026** or completion of project whichever is earlier under CSB Terms and Conditions.

Qualifications for Project Assistant (PA) :

B.Sc in Sericulture / Agriculture / Botany / Microbiology / Biotechnology / Chemistry / Zoology / any other Biological sciences with minimum 60% marks (55% for SC/ST Candidates).

Desirable Qualifications : (i) M.Sc., in Sericulture / Botony / Agriculture,

(ii) Basic Computer working knowledge.

Walk-in-interview time 10.30am (Candidates should reach the venue by 9.30am for verification of documents, other recruitment procedures).

Interested can also visit our website **: www.csrtimys.res.in, http//csb.gov.in/** for details.

Sd/- Director, CSR&TI , Mysuru

Central Sericultural Research & Training Institute

(Central Silk Board, Ministry of Textiles - Govt. of India)

Manandavadi Road, Srirampura, Mysore-08

Phone No. 0821-2361937 Fax No. 0821- 2362845

No.CSB/RTI/MPL/2025-26 Date : 20.11.2025

WALK-IN-INTERVIEW FOR THE POST OF PROJECT ASSISTANT

A Walk-in-Interview will be held on **08.12.2025 at CSB - Central Sericultural Research and Training Institute, Srirampura, Mysuru-570 008 as shown below 'A'** 01 (One) **Project Assistant (P.A)** purely on contract basis under CSB approved project **"Assessment of yield performance and genotype fitness of mulberry under changing climatic conditions" (PIP 01054 SIC)** for a period up to **September 2028** or completion of project whichever is earlier under CSB Terms and Conditions.

Qualifications for Project Assistant (PA) :

1. Three/Four years fulltime B.Sc in relevant subject (Sericulture/ Agriculture / Botany / Biochemistry/ Chemistry / Biotechnology/ Life Science). with minimum 55% Marks (50% for SC/ST Candidates).

Desirable Qualifications : (i) M.Sc., in Sericulture / Botany / Agriculture / Life Sciences, (ii) Basic Computer working knowledge & Wet lab experiments in plant physiology. Walk-in-interview time 10.30am (Candidates should reach the venue by 9.30am for verification of documents, other recruitment procedures).

Interested can also visit our website **: www.csrtimys.res.in, http//csb.gov.in/** for details.

Sd/- Director, CSR&TI , Mysuru

Central Sericultural Research & Training Institute

(Central Silk Board, Ministry of Textiles - Govt. of India)

Manandavadi Road, Srirampura, Mysore-08

Phone No. 0821-2361937 Fax No. 0821- 2362845

WALK-IN-INTERVIEW FOR THE POST OF JUNIOR RESEARCH FELLOW Date: 21/11/2025

A Walk-in-Interview will be held on 10/12/2025 at CSB-Central Sericultural Research and Training Institute, Srirampura, Mysuru-570 008 as shown below:

A 01 (One) Junior Research Fellow **(JRF)** purely on contract basis under CSB approved Project **"Exploration of Mulberry Forage as a Potential Alternative Feed Resources for Sustainable Small Ruminant Production" BPP01052MNC** for a period Up to **July 2025-June 2028** or completion of project whichever is earlier under CSB Terms and Conditions.

Qualifications for Junior Research Fellow (JRF): M.Sc in Food Science/ Biochemistry/Microbiology Biotechnology /Sericulture /Life Sciences with minimum 60% marks (55% for SC/ST candidates)

Desirable qualifications: i. Preference will be given to candidates with knowledge/ practical experience in nutrient analysis, microbial culturing.

Walk-in-Interview time 10:30 AM (candidates should reach the venue by 9:30 AM for verification of documents, other recruitment procedures).

www.csrtimys.res.in, https://csb.gov.in/ Interested can also visit our website www.csrtimys.res.in, https://csb.gov.in/ for details.

Sd/- Director

CSR & TI, Mysore

ಚಿರಸ್ಮರಣೆ



ಡಿ. ರಾಜಮ್ಮ

W/O. ಡಿ.ದೊಡ್ಡಯ್ಯ (ಎಲೆಕ್ಟ್ರಿಕಲ್)

ಅಮ್ಮ ನೀವು ನಮ್ಮನ್ನಗಲಿ ಇಂದಿಗೆ 21 ವರ್ಷಗಳಾದರೂ, ನಮ್ಮ ಮನದಂಗಳದಲ್ಲಿ ನಿಮ್ಮ ನೆನಪು ಸದಾ ಹಸಿರು, ನಿಮ್ಮ ಆಶೀರ್ವಾದ ನಮ್ಮನ್ನು ಎಂದೆಂದಿಗೂ ಕಾಯಲೆಂದು ಶ್ರದ್ಧೆ ಭಕ್ತಿಯಿಂದ ಬೇಡುವೆವು.

ಕುನ್ನೇಗೌಡ, ಸುಂದರಮ್ಮ, ಗೋವಿಂದರಾಜು, ಸರೋಜ, ಜೈಕುಮಾರ್, ಲತಾ, ಕೃಷ್ಣಮೂರ್ತಿ, ಆಶಾಧರ್ಮಪ್ಪ, ಮೀನಾ, ಮಂಜುನಾಥ್, ಭಾರತಿ, ಸೋಮಶೇಖರ್, ಮೊಮ್ಮಕ್ಕಳಾದ ರೂಪ. ರವಿ, ದೀಪಿಕಮಾಲಾ, ಬೆನಕಾ, ಪ್ರಿಯ, ಅನಿಲ್, ಅಂಬಿಕೆ, ದಿನೇಶ್, ಸುಕನ್ಯ, ಮಾಲವಿಕ, ಮನೀಷ್, ಕೌಶಿಕ್, ಪ್ರಜ್ಞಾ, ವಿಜಯ್‌ಕಿರಣ್, ತನೀಷ್, ಅಪೂರ್ವ, ಮುಮ್ಮೊಕ್ಕಳಾದ ರವೀಂದ್ರ, ಪೂರ್ವಿಕ, ಕ್ಷಿತಿಜ್, ತನೀಷಾ, ಪೂರ್ವಿ.

ಮೊದಲನೇ ವರ್ಷದ ಪುಣ್ಯಸ್ಮರಣೆ



ಶ್ರೀ ಸಿ.ಎನ್.ಗುರುಸ್ವಾಮಿ

ನಿಧನ : 22.11.2024

ಸದಾ ನಿಮ್ಮ ನೆನಪಿನಲ್ಲಿ:

ವಿಜಯಶ್ರೀಪುರ ಸರ್ಕಲ್ ಸ್ನೇಹಿತರು, ಪಡುವಾರಹಳ್ಳಿ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಎಕ್ಸ್‌ಟ್ರಾ ಇನ್ನಿಂಗ್ಸ್

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ನವೆಂಬರ್ 22 ಶನಿವಾರ 2025

ಪುಟಗಳು: IV

ಭಾರತದ ಹೊಸ 4 ಕಾರ್ಮಿಕ ಸಂಹಿತೆ ಜಾರಿ

ಕನಿಷ್ಠ ವೇತನ, 1 ವರ್ಷದಲ್ಲಿ ಗ್ರಾಚ್ಯುಟಿ, 40 ಕೋಟಿ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ

ನವದೆಹಲಿ, ನ.21– ಭಾರತದ ಕಾರ್ಮಿಕ ಕಾನೂನು ವ್ಯವಸ್ಥೆಯನ್ನು ಸಂಪೂರ್ಣವಾಗಿ ಪರಿಷ್ಕರಿಸುವ ಮಹತ್ವದ ಹೆಜ್ಜೆಯಾಗಿ ಕೇಂದ್ರ ಸರ್ಕಾರವು ಶುಕ್ರವಾರ ನಾಲ್ಕು ಏಕೀಕೃತ ಕಾರ್ಮಿಕ ಸಂಹಿತೆಗಳನ್ನು ಘೋಷಿಸಿದೆ.

ವೇತನ ಸಂಹಿತೆ (2019), ಕೈಗಾರಿಕಾ ಸಂಬಂಧ ಸಂಹಿತೆ (2020), ಸಾಮಾಜಿಕ ಭದ್ರತೆ ಸಂಹಿತೆ (2020), ಮತ್ತು ಔದ್ಯೋಗಿಕ ಸುರಕ್ಷತೆ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿಗಳು ಸಂಹಿತೆ (2020)ಗಳನ್ನು ನವೆಂಬರ್ 21, 2025 ರಿಂದ ದೇಶವ್ಯಾಪಿ ಜಾರಿಗೆ ತರಲಾಗುತ್ತಿದೆ.

ಈ ನೀತಿ ಪರಿವರ್ತನೆ ಮೂಲಕ ಒಟ್ಟು 29 ಅಸ್ತಿತ್ವದಲ್ಲಿರುವ ಕಾರ್ಮಿಕ ಕಾನೂನುಗಳನ್ನು ತರ್ಕಬದ್ಧಗೊಳಿಸಿ ಒಂದೇ ಚೌಕಟ್ಟಿನಲ್ಲಿ ಏಕೀಕರಿಸಲಾಗುತ್ತಿದೆ. ಕಾರ್ಮಿಕರಿಗೆ ಬಲವಾದ ರಕ್ಷಣೆ, ಉದ್ಯಮಗಳಿಗೆ ಅನುಸರಣೆ ಸುಗಮಗೊಳಿಸುವುದು ಮತ್ತು ಹೊಸ ಮಾದರಿಯ ಉದ್ಯೋಗ ವಾತಾವರಣಕ್ಕೆ ಕಾನೂನು ಹೊಂದಿಸುವ ಗುರಿ ಈ ಸುಧಾರಣೆಯಲ್ಲಿದೆ.

ಸರ್ಕಾರದ ಪ್ರಕಾರ ಹೊಸ ಕಾರ್ಮಿಕ ಸಂಹಿತೆಗಳು ದೇಶದ ಕಾರ್ಮಿಕರಿಗೆ ಉತ್ತಮ ವೇತನ, ಸಾಮಾಜಿಕ ಭದ್ರತೆ, ಸುರಕ್ಷತೆ ಮತ್ತು ಕಲ್ಯಾಣ ಒದಗಿಸುವ ಮಹತ್ವದ ಸಾಧನವಾಗಲಿದೆ. ಅವೆಂದರೆ ಸಕಾಲಿಕ ವೇತನ ಪಾವತಿ ಕಡ್ಡಾಯ, ಸಾರ್ವತ್ರಿಕ ಕನಿಷ್ಠ ವೇತನ ವ್ಯವಸ್ಥೆ, ಕಡ್ಡಾಯ ನೇಮಕಾತಿ ಪತ್ರಗಳು, 40 ವರ್ಷ ಮೇಲ್ಪಟ್ಟವರಿಗೆ ಉಚಿತ ವಾರ್ಷಿಕ ಆರೋಗ್ಯ ತಪಾಸಣೆ, ಸ್ಥಿರ ಅವಧಿಯ ಉದ್ಯೋಗಿಗಳಿಗೆ ಶಾಶ್ವತ ಉದ್ಯೋಗಿಗಳ ಸಮಾನ ವೇತನ ಮತ್ತು ಸೌಲಭ್ಯ, ಒಂದು ವರ್ಷದ ಬಳಿಕ ಗ್ರಾಚ್ಯುಟಿ ಹಕ್ಕು, ಗುತ್ತಿಗೆ, ವಲಸೆ, ಡಾಕ್ ಮತ್ತು ತೋಟ ಕಾರ್ಮಿಕರಿಗೆ ಸಮಾನ ರಕ್ಷಣೆ, ಅಪಾಯಕಾರಿ ವಲಯಗಳಲ್ಲಿ ಕಡ್ಡಾಯ ಸುರಕ್ಷತಾ ಕ್ರಮಗಳು, ಅಧಿಕಾರಾವಧಿ ಕೆಲಸಕ್ಕೆ 2 ಪಟ್ಟು ವೇತನ, ಮಹಿಳೆಯರಿಗೆ ಹೆಚ್ಚು ಅವಕಾಶ,



ಹೊಸ ನೀತಿಗಳಡಿ ಮಹಿಳಾ ಕಾರ್ಮಿಕರ ಹಕ್ಕುಗಳ ವಿಸ್ತರಣೆ: ಒಪ್ಪಿಗೆ ಮತ್ತು ಸುರಕ್ಷತಾ ಕ್ರಮಗಳೊಂದಿಗೆ ಎಲ್ಲಾ ವಲಯಗಳಲ್ಲಿ ರಾತ್ರಿ ಪಾಳಿ ಕೆಲಸಕ್ಕೆ ಅವಕಾಶ, ಸಮಾನ ವೇತನ ಕಡ್ಡಾಯ, ಕುಟುಂಬ ವ್ಯಾಖ್ಯಾನದ ವಿಸ್ತರಣೆ, ತಾರತಮ್ಯ ವಿರೋಧಿ ನಿಯಮಗಳು ಸಮಿತಿಗಳಲ್ಲಿ ಕಡ್ಡಾಯ ಮಹಿಳಾ ಪ್ರತಿನಿಧಿತ್ವ

ಗಿಗ್ ಮತ್ತು ಪ್ಲಾಟ್‌ಫಾರ್ಮ್ ಕೆಲಸಗಾರರಿಗೆ ಸಾಮಾಜಿಕ ಭದ್ರತೆ: ಮೊದಲ ಬಾರಿಗೆ ಸರ್ಕಾರವು ಕ್ಯಾಬ್ ಚಾಲಕರು, ಡೆಲಿವರಿ ಪಾರ್ಟ್ನರ್‌ಗಳು, ಆ್ಯಪ್ ಆಧಾರಿತ ಕೆಲಸಗಾರರು, ಫ್ರೀಲಾನ್ಸರ್‌ಗಳು ಮತ್ತು ಗಿಗ್ ವರ್ಕರ್‌ಗಳು ಸೇರಿದಂತೆ ಅಸಂಘಟಿತ ವಲಯವನ್ನು ಕಾನೂನು ಚೌಕಟ್ಟಿನೊಳಕ್ಕೆ ತಂದಿದೆ. ಆಧಾರ್ ಆಧಾರಿತ ಪೋರ್ಟಬಿಲಿಟಿ ಮೂಲಕ ದೇಶದ ಯಾವುದೇ ರಾಜ್ಯದಲ್ಲಿ ಸಾಮಾಜಿಕ ಭದ್ರತಾ ಸೌಲಭ್ಯ ಪಡೆಯುವ ಅವಕಾಶ ನೀಡಲಾಗಿದೆ.

ಉದ್ಯಮ ಸ್ನೇಹಿ ಸುಧಾರಣೆಗಳು: ಒಂದೇ ನೋಂದಣಿ ಮತ್ತು ಒಂದೇ ಪರವಾನಗಿ ವ್ಯವಸ್ಥೆ, ಬಹು ದಾಖಲೆಗಳ ಅವಶ್ಯಕತೆಯಿಂದ ಮುಕ್ತಿ, ಇನ್‌ಸ್ಪೆಕ್ಟರ್–ಕಮ್–ಫೆಸಿಲಿಟೇಟರ್ ವ್ಯವಸ್ಥೆ–ಸಲಹಾ ಆಧಾರಿತ ಪರಿಶೀಲನೆ, ಕೈಗಾರಿಕಾ ವಿವಾದಗಳ ವೇಗವಾದ ಪರಿಹಾರಕ್ಕೆ ಇಬ್ಬರು ಸದಸ್ಯರ ಕೈಗಾರಿಕಾ ನ್ಯಾಯಮಂಡಳಿ, 500ಕ್ಕೂ ಹೆಚ್ಚು ಕಾರ್ಮಿಕರಿರುವ ಘಟಕಗಳಲ್ಲಿ ಕಡ್ಡಾಯ ಸುರಕ್ಷತಾ ಸಮಿತಿ, ರಾಷ್ಟ್ರೀಯ ಸುರಕ್ಷತಾ ಮಾನದಂಡಗಳ ಜಾರಿ.

ಸಾಮಾಜಿಕ ಭದ್ರತಾ ವ್ಯಾಪ್ತಿ ದೊಡ್ಡ ಮಟ್ಟದಲ್ಲಿ ವಿಸ್ತರಣೆ: ಸರ್ಕಾರದ ಪ್ರಕಾರ 2015ರಲ್ಲಿ ಕೇವಲ ಶೇ.19 ರಷ್ಟು ಇದ್ದ ಕೆಲಸಗಾರರ ಸಾಮಾಜಿಕ ಭದ್ರತಾ ವ್ಯಾಪ್ತಿ 2025 ರ ವೇಳೆಗೆ ಶೇ.64ಕ್ಕಿಂತ ಹೆಚ್ಚಾಗಿದೆ. ಹೊಸ ಸಂಹಿತೆಗಳು ರಾಜ್ಯ ಮತ್ತು ವಲಯಗಳಾದ್ಯಂತ ಪೋರ್ಟಬಿಲಿಟಿ ಮತ್ತು ಸುಲಭ ಪ್ರವೇಶ ಒದಗಿಸುತ್ತವೆ. ಪರಿವರ್ತನಾ ಅವಧಿಯಲ್ಲಿ ಎಲ್ಲಾ ಅಧೀನ ನಿಯಮಗಳು ಪ್ರಕಟವಾಗುವವರೆಗೆ ಅಸ್ತಿತ್ವದಲ್ಲಿರುವ ಕಾನೂನುಗಳು ಜಾರಿಯಲ್ಲೇ ಇರುತ್ತವೆ.

ಉದ್ಯೋಗ ಮತ್ತು ಕೈಗಾರಿಕಾ ಬೆಳವಣಿಗೆಗೆ ಉತ್ತೇಜನ: ಮಹಿಳೆಯರು, ಯುವಕರು, ಅಸಂಘಟಿತ ವಲಯ ಮತ್ತು ಗಿಗ್ ವರ್ಕರ್‌ಗಳಿಗೆ ಬಲವಾದ ರಕ್ಷಣೆಗಳನ್ನು ನೀಡುವ ಮೂಲಕ ಹಾಗೂ ಸಂಸ್ಥೆಗಳ ಅನುಸರಣೆ ಹೊರೆಯನ್ನು ಕಡಿಮೆ ಮಾಡುವ ಮೂಲಕ ಈ ಸುಧಾರಣೆಗಳು ಉದ್ಯೋಗ ಸೃಷ್ಟಿಯನ್ನು ಹೆಚ್ಚಿಸುವುದು, ಕೌಶಲ್ಯ ವಿಕಾಸ ಮತ್ತು ಕೈಗಾರಿಕಾ ಉತ್ಪಾದಕತೆಯ ಸುಧಾರಣೆ ಗುರಿಯನ್ನು ಹೊಂದಿವೆ. ಸರ್ಕಾರದ ಹೇಳಿಕೆಯಂತೆ, ಹೊಸ ಕಾರ್ಮಿಕ ಸಂಹಿತೆಗಳು ಆತ್ಮನಿರ್ಭರ ಭಾರತ ಗುರಿಯನ್ನು ಬೆಂಬಲಿಸುವ ದಿಟ್ಟ ನಿರ್ಧಾರವಾಗಿದೆ.

ಜನಪದ ನೃತ್ಯೋತ್ಸವದಲ್ಲಿ ಗಮನ ಸೆಳೆದ ವಿಶೇಷ ಮಕ್ಕಳ ನೃತ್ಯ ಪ್ರದರ್ಶನ



ಸಮರ್ಥನಂ ಸಂಸ್ಥೆ ಬುದ್ಧಿಮಾಂದ್ಯ ಮಕ್ಕಳಿಗಾಗಿ ಆಯೋಜಿಸಿದ್ದ ಜನಪದ ನೃತ್ಯೋತ್ಸವ ಕಾರ್ಯಕ್ರಮದಲ್ಲಿ ವಿಶೇಷ ಮಕ್ಕಳು ಜನಪದ ನೃತ್ಯ ಪ್ರದರ್ಶಿಸಿದರು.

ಮೈಸೂರು, ನ.21(ಎಂಟಿವೈ)– ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಶುಕ್ರವಾರ ಜರುಗಿದ ಜನಪದ ನೃತ್ಯೋತ್ಸವದಲ್ಲಿ ವಿವಿಧ ಶಾಲೆಗಳ ವಿಶೇಷ ಮಕ್ಕಳು ವಿವಿಧ ಪ್ರಕಾರಗಳ ಜನಪದ ನೃತ್ಯ ಪ್ರದರ್ಶಿಸಿ ಅತೀವ ಮೆಚ್ಚುಗೆಗೆ ಪಾತ್ರರಾದರು.

ಮೈಸೂರಿನ ಸಮರ್ಥನಂ ಅಂಗವಿಕಲರ ಸಂಸ್ಥೆ ಮತ್ತು ಕರ್ನಾಟಕ ರಾಜ್ಯ ಅಂಗವಿಕಲರ ಒಕ್ಕೂಟದ ಮೈಸೂರು ಘಟಕದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಮೈಸೂರು ವಿಭಾಗ ಮಟ್ಟದ ಬುದ್ಧಿ ವಿಕಲಚೇತನ ಮಕ್ಕಳ ಜನಪದ ನೃತ್ಯ ಸ್ಪರ್ಧೆ ಮತ್ತು ಜನಪದ ನೃತ್ಯೋತ್ಸವ ಕಾರ್ಯಕ್ರಮದಲ್ಲಿ ಬುದ್ಧಿಮಾಂದ್ಯತೆಯನ್ನು ಬದಿಗೊತ್ತಿ, ವಿವಿಧ ಪ್ರಕಾರಗಳ ಜಾನಪದ ಕಲೆಗಳನ್ನು ಪ್ರದರ್ಶಿಸಿ ಗಮನ ಸೆಳೆದರು.

ಮೈಸೂರು ವಿಭಾಗದ 10ಕ್ಕೂ ಹೆಚ್ಚು ವಿಶೇಷ ಶಾಲೆಗಳ ಸುಮಾರು 250ಕ್ಕೂ ಹೆಚ್ಚು ವಿಶೇಷ ವಿದ್ಯಾರ್ಥಿಗಳು ಪಾಲ್ಗೊಂಡು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗಿಯಾದರು. ಕರಾವಳಿ ಜನಪದ, ಮಲೆಮಹದೇಶ್ವರ ಭಕ್ತಿ ಗೀತೆ, ಕನ್ನಡ ನುಡಿಗಳು, ರೈತ ಜೀವನದ ಹಬ್ಬ–ಹರಿದಿನಗಳ ಗೀತೆಗಳು ಸೇರಿದಂತೆ ಕರ್ನಾಟಕ ಸಂಸ್ಕೃತಿಯನ್ನು ಬಿಂಬಿಸುವ ನೃತ್ಯ ಪ್ರದರ್ಶನ ನೀಡಿದರು.

ಇದಕ್ಕೂ ಮುನ್ನ ಕಾರ್ಯಕ್ರಮವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಬಸವರಾಜು ಡೊಳ್ಳು ಬಾರಿಸುವ ಮೂಲಕ ಉದ್ಘಾಟಿಸಿ ಮಾತನಾಡಿ, ಮಕ್ಕಳಲ್ಲಿ ಜಾನಪದ ಸಂಸ್ಕೃತಿ ಬೆಳೆಸಲು ಇಂತಹ ಕಾರ್ಯಕ್ರಮಗಳು ಅಗತ್ಯ. ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ನಮ್ಮ ಮೂಲ ಕಲೆಗಳು ಕಣ್ಮರೆಯಾಗುತ್ತಿರುವ ಸಂದರ್ಭದಲ್ಲಿ ಈ ಮಕ್ಕಳಲ್ಲಿ ಇರುವ ಪ್ರತಿಭೆಯನ್ನು ಗುರುತಿಸಿ ಉತ್ತೇಜಿಸುವುದು ನಮ್ಮ ಹೊಣೆ ಎಂದು ಹೇಳಿದರು.

ಜಿಲ್ಲಾ ಅಂಗವಿಕಲರ ಕಲ್ಯಾಣ ಅಧಿಕಾರಿ ರಾಘವೇಂದ್ರ ಮಾತನಾಡಿ, ಇಂದಿನ ಮಕ್ಕಳಿಗೆ ನೈತಿಕ ಮೌಲ್ಯ, ಸಂಸ್ಕಾರ ಮತ್ತು ಸಂಸ್ಕೃತಿಯ ಅರಿವು ತುಂಬಾ ಅವಶ್ಯ. ವಿಶೇಷ ಮಕ್ಕಳಿಗೂ ಇದಕ್ಕೆ ಸಮಾನ ಅವಕಾಶ ದೊರಕಬೇಕು ಎಂದು ಅಭಿಪ್ರಾಯಪಟ್ಟರು.


ಪ್ರಶಸ್ತಿ ವಿಜೇತ ತಂಡಗಳು: ಸ್ಪರ್ಧೆಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ತಂಡಗಳಿಗೆ ಬಹುಮಾನ ವಿತರಿಸಲಾಯಿತು. ಮೈಸೂರಿನ ಅರುಣೋದಯ ವಿಶೇಷ ಶಾಲೆಗೆ ಪ್ರಥಮ ಬಹುಮಾನ, ಮಂಡ್ಯದ ಪ್ರೇರಣಾ ವಿಶೇಷ ಶಾಲೆಗೆ ದ್ವಿತೀಯ ಬಹುಮಾನ, ಮೈಸೂರಿನ ಆಶಿಯಾನ ವಿಶೇಷ ಶಾಲೆಗೆ ತೃತೀಯ ಬಹುಮಾನ ವಿತರಿಸಲಾಯಿತು. ವಿಜೇತರಿಗೆ ವಿಶೇಷವಾಗಿ ವಿನ್ಯಾಸಗೊಳಿಸಿದ ಆಕರ್ಷಕ ಟ್ರೋಫಿ ಮತ್ತು ನಗದು ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಸಮರ್ಥನಂ ಸಂಸ್ಥೆಯ ಕಾರ್ಯಕ್ರಮ ವ್ಯವಸ್ಥಾಪಕಿ ಡಾ. ಗೀತಾ, ಕರ್ನಾಟಕ ರಾಜ್ಯ ಅಂಗವಿಕಲರ ಒಕ್ಕೂಟದ ಮೈಸೂರು ಘಟಕದ ಅಧ್ಯಕ್ಷ ಶ್ರೀಧರ್ ದೀಕ್ಷಿತ್, ಸಮರ್ಥನಂ ಸಂಸ್ಥೆಯ ಶ್ರೀನಿವಾಸ ರೆಡ್ಡಿ, ಸಂಸ್ಥೆಯ ಮೈಸೂರು ವಿಭಾಗದ ಮುಖ್ಯಸ್ಥ ಶಿವರಾಜು, ಡಾ.ಸೋಮಶೇಖರ್, ಕೃಷ್ಣಮೂರ್ತಿ ತಲಕಾಡು, ಭ್ರಮಾರಂಭ, ಪದ್ಮ, ಬೃಂದಾ ಬಾಯಿ, ಸುಬ್ರಮಣಿ, ಚೈತ್ರಕುಮಾರಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೆಕ್ಕೆ ಜೋಳ ಬೆಲೆ ಕುಸಿತ

ರೈತರಿಗೆ ಎಲ್ಲಾ ನೆರವು: ಮುಖ್ಯಮಂತ್ರಿ ಭರವಸೆ





ಬೆಂಗಳೂರು, ನ.21(ಕೆಎಂಶಿ)– ಬೆಲೆ ಕುಸಿತದಿಂದ ಸಂಕಷ್ಟ ಎದುರಿಸುತ್ತಿರುವ ರಾಜ್ಯದ ಮೆಕ್ಕೆಜೋಳ ರೈತರಿಗೆ ಸರ್ಕಾರ ಎಲ್ಲಾ ನೆರವು ಒದಗಿಸಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.

ದೇಶದಲ್ಲೇ ಮೆಕ್ಕೆಜೋಳ ಉತ್ಪಾದನೆ ಹೆಚ್ಚಾಗಿದ್ದು, ವಿದೇಶಗಳಿಂದ 70 ಲಕ್ಷ ಮೆಟ್ರಿಕ್ ಟನ್ ಮೆಕ್ಕೆಜೋಳ ಆಮದು ಮೇಲೆ ನಿರ್ಬಂಧ ವಿಧಿಸಲು ಒತ್ತಾಯಿಸಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗುವುದು.

ರಾಜ್ಯದಲ್ಲಿ ಮೆಕ್ಕೆಜೋಳ ಬೆಲೆ ದಿಢೀರನೆ ಕುಸಿತಕ್ಕೆ ಕಾರಣ ಕುರಿತ ಸಭೆಯಲ್ಲಿ ಮಾತನಾಡಿದ ಅವರು, ಎಥೆನಾಲ್ ಉತ್ಪಾದನೆಯಲ್ಲಿ ಬಳಕೆಗೆ ಸಂಬಂಧಿಸಿದಂತೆ ರಾಜ್ಯದ ಪ್ರಮುಖ ಡಿಸ್ಟಿಲರಿಗಳು ತಕ್ಷಣ ಮೆಕ್ಕೆಜೋಳ ಖರೀದಿಸುವಂತೆ ಸೂಚಿಸಲು ತಿಳಿಸಿದರು.

ಕುಕ್ಕುಟೋದ್ಯಮದಲ್ಲೂ ಮೆಕ್ಕೆಜೋಳಕ್ಕೆ ಬೇಡಿಕೆಯಿದ್ದು, ಅವರೊಂದಿಗೂ ಮಾತುಕತೆ ನಡೆಸುವಂತೆ ಸಲಹೆ ನೀಡಿದರು. ಸಭೆಗೆ ಮಾಹಿತಿ ನೀಡಿದ ಕೃಷಿ ಸಚಿವ ಚಲುವರಾಯಸ್ವಾಮಿ, ಕೇಂದ್ರ ಕೃಷಿ ಸಚಿವರನ್ನು ಭೇಟಿ ಮಾಡಿ ನೆರವು ಕೋರಲಾಗಿದೆ. ವಿದೇಶಗಳಿಂದ ಮೆಕ್ಕೆಜೋಳ ಆಮದು ರಾಜ್ಯದಲ್ಲಿ ದಿಢೀರ್ ದರ ಕುಸಿತಕ್ಕೆ ಕಾರಣವಾಗಿದೆ ಎಂದರು.

ಕೇಂದ್ರ ಸರ್ಕಾರ ರಾಜ್ಯಕ್ಕೆ ನಿಗದಿಪಡಿಸಿರುವ ಮೆಕ್ಕೆಜೋಳದಿಂದ ಎಥೆನಾಲ್ ಉತ್ಪಾದನಾ ಕೋಟಾ ಪ್ರಮಾಣ ಅತ್ಯಂತ ಕಡಿಮೆ ಇರುವುದರಿಂದ ಡಿಸ್ಟಿಲರಿಗಳು ಖರೀದಿಸುವ ಪ್ರಮಾಣವೂ ಕಡಿಮೆಯಾಗಿದೆ.

ಕೇಂದ್ರದ ನೋಡಲ್ ಏಜೆನ್ಸಿಗಳಾದ ನಾಫೆಡ್ ಮತ್ತು ಎನ್ಸಿಸಿಎಫ್ ಮೂಲಕ ಬೆಂಬಲ ಬೆಲೆ ಯೋಜನೆಯಡಿ ಮೆಕ್ಕೆಜೋಳ ಖರೀದಿ, ಸಂಗ್ರಹಣೆ ಮತ್ತು ಎಥೆನಾಲ್ ಉತ್ಪಾದನೆಗೆ ಬಳಕೆ ಮಾರ್ಗಸೂಚಿಯಂತೆ ಪ್ರಕ್ರಿಯೆ ಆರಂಭವಾಗದಿರುವುದು ಸಮಸ್ಯೆ ಬಿಗಡಾಯಿಸಲು ಮುಖ್ಯ ಕಾರಣವಾಗಿದೆ.

ತಕ್ಷಣ 8 ಲಕ್ಷ ಟನ್ ಮೆಕ್ಕೆಜೋಳ ಖರೀದಿಗೆ ಏಜೆನ್ಸಿಗಳು ಕ್ರಮ ಕೈಗೊಳ್ಳಬೇಕು. ಇದರಿಂದ ಮಾರುಕಟ್ಟೆಯಲ್ಲಿ ಧಾರಣೆ ಸ್ಥಿರಗೊಳಿಸಲು ಸಾಧ್ಯ. ಮೆಕ್ಕೆಜೋಳ ಬೆಲೆ ಕಡಿಮೆ ಇದ್ದಾಗ ಡಿಸ್ಟಿಲರಿಗಳು ಖರೀದಿಸಿ ಶೇಖರಣೆ ಮಾಡಿಕೊಂಡಿದ್ದು, ಈಗ ಖರೀದಿಗೆ ಮುಂದೆ ಬರುತ್ತಿಲ್ಲ. ಇದು ನಿಯಮದ ಸ್ಪಷ್ಟ ಉಲ್ಲಂಘನೆಯಾಗಿದೆ ಎಂಬುದನ್ನು ಸಭೆ ಗಮನಕ್ಕೆ ತರಲಾಯಿತು.

ಡಿಸ್ಟಿಲರಿಗಳು ನಿಯಮಾನುಸಾರ ಮೆಕ್ಕೆಜೋಳ ಖರೀದಿಸುವಂತೆ ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂಬ ಸಲಹೆ ವ್ಯಕ್ತವಾಯಿತು. ಮೆಕ್ಕೆಜೋಳ ಆಮದು ನಿಯಂತ್ರಣ ಮೂಲಕ ಬೆಲೆಯಲ್ಲಿ ಸ್ಥಿರತೆ ಸಾಧಿಸಲು ಸಾಧ್ಯವಿದ್ದು, ಈ ಕುರಿತು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕು ಎಂದರು.

ನ.26ರಂದು 'ವಚನ ಕಥನ' ಕೃತಿ ಬಿಡುಗಡೆ

ಮೈಸೂರು, ನ.21(ಜಿಎ)–ಸಂವಹನ : ಪ್ರಕಾಶಕರು, ಮೈಸೂರು ಜಿಲ್ಲಾ ಹಾಗೂ ತಾಲೂಕು ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ ವತಿಯಿಂದ ನ.26 ರಂದು ಸಂಜೆ 5 ಗಂಟೆಗೆ ಎಂ.ಎ.ನೀಲಾಂಬಿಕಾ ಅವರು ಜ್ಞಾನ ಯೋಗಾಶ್ರಮದ ಶ್ರೀ ಸಿದ್ದೇಶ್ವರ ಸ್ವಾಮೀಜಿ ಅವರ ಪ್ರವಚನಗಳಿಂದ ಆಯ್ದ ವಚನ ವ್ಯಾಖ್ಯಾನ ಕಥೆಗಳ ಸಂಕಲನ ರಾಜೇಂದ್ರ ಶಿಶು 'ವಚನ ಕಥನ' ಕೃತಿ ಬಿಡುಗಡೆ ಕಾರ್ಯಕ್ರಮವನ್ನು ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಏರ್ಪಡಿಸಲಾಗಿದೆ.

ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಶ್ರೀ ಕುಂದೂರು ಮಠಾಧ್ಯಕ್ಷರಾದ ಡಾ. ಶ್ರೀ ಶರತ್ ಚಂದ್ರ ಸ್ವಾಮಿ ಕೃತಿ ಲೋಕಾರ್ಪಣೆ ಮಾಡುವರು. ಕೃತಿ ಕುರಿತು ಜೆಎಸ್‌ಎಸ್ ಮಹಾವಿದ್ಯಾ ಪೀಠದ ಪ್ರಕಟಣ ವಿಭಾಗದ ನಿರ್ದೇಶಕ ಪ್ರೊ ಮೊರಬದ ಮಲ್ಲಿಕಾರ್ಜುನ ಅವರು ಮಾತನಾಡುವರು. ಮುಖ್ಯ ಅತಿಥಿಗಳಾಗಿ ನಗರ ಕೇಂದ್ರ ಗ್ರಂಥಾಲಯದ ಉಪ ನಿರ್ದೇಶಕ ಬಿ. ಮಂಜುನಾಥ್ ಆಗಮಿಸುವರು. ಲೇಖಕರಾದ ರಾಜೇಂದ್ರ ಶಿಶು (ಎಂ.ಎ. ನೀಲಾಂಬಿಕಾ), ಡಾ. ಹೆಳವರ ಹುಂಡಿ ಸಿದ್ದಪ್ಪ, ಶ್ರೀಮತಿ ಎಂ.ಎಸ್.ಶೋಭಾ ರಾಣಿ ಜೈಪ್ರಕಾಶ್, ಡಿ.ಎನ್.ಲೋಕಪ್ಪ, ಶರಣ ದೇವರಾಜ್ ಪಿ.ಚಿಕ್ಕಹಳ್ಳಿ ಉಪಸ್ಥಿತರಿರುವರು.

ಸಂಜೆ 4.30 ಗಂಟೆಗೆ ಉಮಾ ಮಹದೇವ ಸ್ವಾಮಿ ಮತ್ತು ತಂಡದವರಿಂದ ವಚನ ಗಾಯನವನ್ನು ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಸೇವಾ ಜೇಷ್ಠತೆ, ಬೋಧನಾ ಅನುಭವ ಆಧರಿಸಿ ಅತಿಥಿ ಉಪನ್ಯಾಸಕರ ನೇಮಕಾತಿಗೆ ಆಗ್ರಹಿಸಿ ಧರಣಿ



ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲಿ ಕಾನೂನು ತೊಡಕು ನಿವಾರಿಸಿ ಸೇವಾ ಜೇಷ್ಠತೆ, ಬೋಧನಾ ಅನುಭವದ ಮಾನದಂಡ ಅನುಸರಿಸುವಂತೆ ಆಗ್ರಹಿಸಿ ಮೈಸೂರು ವಿಶ್ವವಿದ್ಯಾನಿಲಯ ಓವೆಲ್ ಮೈದಾನದ ಬಳಿ ಅತಿಥಿ ಉಪನ್ಯಾಸಕರು ಪ್ರತಿಭಟನೆ ನಡೆಸಿದರು.

ಮೈಸೂರು, ನ.21(ಎಂಟಿವೈ)– ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲಿ ಉಂಟಾಗಿರುವ ಕಾನೂನು ಬಿಕ್ಕಟ್ಟು ನಿವಾರಿಸಿ, ಸೇವಾ ಜೇಷ್ಠತೆ ಮತ್ತು ಬೋಧನಾ ಅನುಭವವನ್ನು ಪರಿಗಣಿಸುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಅತಿಥಿ ಉಪನ್ಯಾಸಕರು ಪ್ರತಿಭಟನೆ ನಡೆಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಓವೆಲ್ ಮೈದಾನದ ಬಳಿ ನಡೆಸುತ್ತಿರುವ ಪ್ರತಿಭಟನೆ ಮೂರನೇ ದಿನಕ್ಕೆ ಕಾಲಿಟ್ಟಿದ್ದು, ಸರ್ಕಾರಿ ಪದವಿ ಕಾಲೇಜುಗಳಲ್ಲಿ ಹಲವು ವರ್ಷಗಳಿಂದ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವವರನ್ನು ನೇಮಕಾತಿ ಮಾಡಿಕೊಳ್ಳಲು ಕ್ರಮ ಕೈಗೊಳ್ಳಬೇಕು. ಅತಿಥಿ ಉಪನ್ಯಾಸಕರ ರಾಜ್ಯ ಸಮನ್ವಯ ಸಮಿತಿಯು, ಎಲಿಜಿಬಲ್ – ನಾನ್ ಎಲಿಜಿಬಲ್ ಎನ್ನುವ ತಾರತಮ್ಯ ನೀತಿಯನ್ನು ಕೈ ಬಿಡಬೇಕು. ದ್ವಂದ್ವ ನೀತಿಯುಳ್ಳ ಕಾಲೇಜು ಶಿಕ್ಷಣ ಇಲಾಖೆ ಹೊರಡಿಸಿರುವ ಸುತ್ತೋಲೆಯನ್ನು ಹಿಂಪಡೆಯಬೇಕು. ಅತಿಥಿ ಉಪನ್ಯಾಸಕರ ವಿಚಾರದಲ್ಲಿ ಶಾಸನಬದ್ಧ ತೀರ್ಮಾನವನ್ನು ಕೈಗೊಳ್ಳುವಂತೆ ಮನವಿ ಮಾಡಿದರು.

ಸೇವಾ ಜೇಷ್ಠತೆ, ಬೋಧನಾ ಅನುಭವವನ್ನು ಮಾನದಂಡವಾಗಿ ಪರಿಗಣಿಸಬೇಕು. ನೇಮಕಾತಿ ಪ್ರಕ್ರಿಯೆಯಲ್ಲಿ ಉದ್ಭವಿಸಿರುವ ಕಾನೂನಾತ್ಮಕ ಬಿಕ್ಕಟ್ಟನ್ನು ಸರ್ಕಾರದ ಹಂತದಲ್ಲೇ ಬಗೆಹರಿಸಬೇಕು. ಅತಿಥಿ ಉಪನ್ಯಾಸಕರ ಶಾಶ್ವತ ನೇಮಕಾತಿ ನಿಯಮವನ್ನು ರೂಪಿಸಲು ತಜ್ಞರ ಸಮಿತಿ ರಚಿಸಬೇಕು. ಇಡುಗಂಟನ್ನು 5 ಲಕ್ಷದಿಂದ 25 ಲಕ್ಷಕ್ಕೆ ಹೆಚ್ಚಳ ಮಾಡುವಂತೆ ಪ್ರತಿಭಟನಾ ನಿರತ ಅತಿಥಿ ಉಪನ್ಯಾಸಕರು ಒತ್ತಾಯಿಸಿದರು.

ರಾಜ್ಯದ 432 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 11 ಸಾವಿರಕ್ಕೂ ಹೆಚ್ಚು ಉಪನ್ಯಾಸಕರು ಕನಿಷ್ಠ ಗೌರವಧನ ಪಡೆದು ಕೆಲಸ ನಿರ್ವಹಿಸುತ್ತಿದ್ದಾರೆ. ರಾಜ್ಯ ಉಚ್ಚ ನ್ಯಾಯಾಲಯ ರಿಟ್ ಅರ್ಜಿಗೆ ಸಂಬಂಧಿಸಿದಂತೆ 2024ರ ಸೆ5ರಂದು ನೀಡಿರುವ ತೀರ್ಪು ಅತಿಥಿ ಉಪನ್ಯಾಸಕರ ಪಾಲಿಗೆ ಮರಣ ಶಾಸನವಾಗಿದೆ. ಈ ಹಿನ್ನೆಲೆಯಲ್ಲಿ 5353 ಮಂದಿ ಅತಿಥಿ ಉಪನ್ಯಾಸಕರು ತಾತ್ಕಾಲಿಕ ಉದ್ಯೋಗದಿಂದ ವಂಚಿತರಾಗುತ್ತಾರೆ. ಈ ಹಿನ್ನೆಲೆಯಲ್ಲಿ ಸರ್ಕಾರ ಅತಿಥಿ ಉಪನ್ಯಾಸಕರ ಆಯ್ಕೆ ಪ್ರಕ್ರಿಯೆಯಲ್ಲಿ ಯುಜಿಸಿ ನಿಯಮ 2018ಕ್ಕಿಂತ ಹಿಂದಿನಿಂದ ಕಾರ್ಯನಿರ್ವಹಿಸಿದವರಿಗೆ ಅನ್ವಯವಾಗಬಾರದು ಎಂದು ಕೋರಿದರು.

ಪ್ರತಿಭಟನೆಯಲ್ಲಿ ಅತಿಥಿ ಉಪನ್ಯಾಸಕರ ಸಂಘದ ಮುಖಂಡರಾದ ಡಾ.ಸೋಮಶೇಖರ್ ಶಿವೊಗ್ಗಿ, ನಾಗರಾಜು, ರಾಜೇಶ್, ರಾಜೇಂದ್ರ, ಪೂರ್ಣಿಮಾ, ಹರ್ಷಿತಾ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಸರ್ಕಾರಿ ಶಾಲೆಗಳ ಒಂದೆಡೆ ಮುಚ್ಚುತ್ತಿದ್ದರೆ; ಮತ್ತೊಂದೆಡೆ ಮಠ–ಮಾನ್ಯಗಳು ಶಿಕ್ಷಣ ನೀಡುತ್ತಿವೆ

ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಶ್ಲಾಘನೆ



ಬೆಂಗಳೂರು, ನ.21(ಕೆಎಂಶಿ)–ಒಂದೆಡೆ ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿದ್ದರೆ, ಇನ್ನೊಂದೆಡೆ ಮಠ–ಮಾನ್ಯಗಳು ಬಡವರು, ದುರ್ಬಲರ ಮಕ್ಕಳಿಗೆ ಶಿಕ್ಷಣ ನೀಡುವ ಕೆಲಸ ಮಾಡುತ್ತಿವೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಇಂದಿಲ್ಲಿ ಮೆಚ್ಚುಗೆ ವ್ಯಕ್ತಪಡಿಸಿದರು.

ಬಿಜಿಎಸ್‌ನ 17ನೇ ಸಂಸ್ಥಾಪನಾ ದಿನ ಹಾಗೂ ಬಿಜಿಎಸ್ ಉತ್ಸವ ಉದ್ಘಾಟನಾ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಶಾಲೆಗಳನ್ನು ರಾಜ್ಯ ಸರ್ಕಾರ ಮುಚ್ಚುವ ಕೆಲಸ ಮಾಡುತ್ತಿದೆ. ರೈತರು, ಬಡವರು, ಆರ್ಥಿಕ ದುರ್ಬಲರ ಮಕ್ಕಳು ವ್ಯಾಸಂಗ ಮಾಡುವ ಶಾಲೆಗಳಿಗೆ ಬೀಗ ಹಾಕುತ್ತಿದೆ. ಇಂತಹ ಸಂದರ್ಭದಲ್ಲಿ ಮಠಗಳು ನಾಡಿನ ಮಕ್ಕಳಿಗೆ ಅನ್ನ, ಅಕ್ಷರ, ಆಶ್ರಯ ನೀಡುವ ಕೆಲಸ ಮಾಡುತ್ತಿವೆ ಎಂದರು.

ಶಿಕ್ಷಣ ಸಂಸ್ಥೆ ಆರಂಭಿಸುವುದು ಸುಲಭ, ಆದರೆ, ನಿರ್ವಹಣೆ ಸುಲಭವಲ್ಲ. ದಕ್ಷತೆ, ಕ್ಷಮತೆಯಿಂದ ಮಠಗಳು ಅನಾಯಾಸವಾಗಿ ನಡೆಸಿಕೊಂಡು ಹೋಗುತ್ತಿವೆ. ದೂರದೃಷ್ಟಿ, ಸಮಾಜ ಕುರಿತ ಕಾಳಜಿಯಿಂದ ಇದು ಸಾಧ್ಯವಾಗಿದೆ.

ಕೇವಲ ಶಿಕ್ಷಣ ಸಂಸ್ಥೆಗಳನ್ನಷ್ಟೇ ಮಠಗಳು ನಡೆಸುತ್ತಿಲ್ಲ. ಗುಣಮಟ್ಟದ ಶಿಕ್ಷಣ, ಸಮಾಜ ಸೇವೆ ಜೊತೆ ಆಧ್ಯಾತ್ಮ ಕ್ಷೇತ್ರದಲ್ಲಿಯೂ ನಿಸ್ವಾರ್ಥವಾಗಿ ತೊಡಗಿಸಿಕೊಂಡಿವೆ. ಮುಂದಿನ ತಲೆಮಾರಿಗೆ ಉತ್ತಮ ಮೌಲ್ಯ ಕಲಿಸುವ ಶಿಕ್ಷಣದ ಅಗತ್ಯವಿದೆ. ಆದಿಚುಂಚನಗಿರಿ ಮಠ ಈ ದಿಕ್ಕಿನಲ್ಲಿ ಮುಂಚೂಣಿಯಲ್ಲಿ ನಿಂತು ಸಮಾಜದಲ್ಲಿ ಅರಿವು ಮೂಡಿಸುತ್ತಿದೆ ಎಂದರು. ಆದಿಚುಂಚನಗಿರಿ ಮಠದ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಸುತ್ತೂರು ಕ್ಷೇತ್ರದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ದಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿದ್ದರು.

ಸಂಚಾರ ನಿಯಮ ಉಲ್ಲಂಘಿಸುವವರ ಮನಃಪರಿವರ್ತಿಸಿದ ವಿದ್ಯಾರ್ಥಿಗಳು

ಗುಲಾಬಿ ನೀಡಿ, ಮತ್ತೆಂದೂ ಈ ರೀತಿ ಮಾಡಬೇಡಿ; ನಿಮ್ಮ ಅಚಾತುರ್ಯದಿಂದ ನಿಮ್ಮವರು ಮಾತ್ರವಲ್ಲ ಇತರರಿಗೂ ಸಂಕಷ್ಟ...!

ಮೈಸೂರು, ನ. 21 (ಆರ್‌ಕೆ)– ಸಂಚಾರ ನಿಯಮ ಉಲ್ಲಂಘನೆ ದಂಡ ಪಾವತಿಸಲು ಶೇಕಡಾ 50 ರಿಯಾಯಿತಿ ನೀಡಿರುವ ಬೆನ್ನಲ್ಲೇ ನಿಯಮ ಪಾಲಿಸುವಂತೆ ಶಾಲಾ–ಕಾಲೇಜು ವಿದ್ಯಾರ್ಥಿಗಳು ಗುಲಾಬಿ ನೀಡುವ ಮೂಲಕ ಮನಃಪರಿವರ್ತನೆ ಮಾಡಲು ಯತ್ನಿಸಿದ ಬೆಳವಣಿಗೆ ಜನರ ಅತೀವ ಮೆಚ್ಚುಗೆಗೆ ಪಾತ್ರವಾಯಿತು.

ಅತಿ ವೇಗ, ಮದ್ಯಪಾನ ಮಾಡಿ ವಾಹನ ಚಾಲನೆ, ತ್ರಿಬಲ್ ರೈಡಿಂಗ್, ಹೆಲ್ಮೆಟ್–ಸೀಟ್ ಬೆಲ್ಟ್ ಧರಿಸದೇ ಡ್ರೈವಿಂಗ್, ಸಿಗ್ನಲ್ ಜಂಪ್, ನೋ ಪಾರ್ಕಿಂಗ್ ಸ್ಥಳದಲ್ಲಿ ವಾಹನಗಳನ್ನು ನಿಲ್ಲಿಸುವುದು ಸೇರಿದಂತೆ ವಿವಿಧ ಸಂಚಾರ ನಿಯಮಗಳನ್ನು ಉಲ್ಲಂಘನೆ ಮಾಡುವವರ ವಿರುದ್ಧ ಪ್ರಕರಣ ದಾಖಲಿಸಿ ದಂಡ ವಸೂಲಿ ಮಾಡುವುದರಿಂದ ಸಂಚಾರ ನಿಯಮ ಉಲ್ಲಂಘನೆ ಮಾಡುವುದನ್ನು ನಿಯಂತ್ರಿಸಲು ಸಾಧ್ಯವಿಲ್ಲವೆಂಬ ನಿಲುವಿಗೆ ಬಂದಿರುವ ಸಂಚಾರ ಪೊಲೀಸರು, ಭಾವನಾತ್ಮಕವಾಗಿ ಅವರ ಮನಃ ಸೆಳೆದು ಜಾಗೃತಿ ಮೂಡಿಸುವ ದಿಕ್ಕಿನಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ.

ನಗರ ಪೊಲೀಸ್ ಕಮೀಷನರ್ ಸೀಮಾ ಲಾಟ್ಕರ್ ಅವರ ನಿರ್ದೇಶನದಂತೆ, ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಕೆ.ಎಸ್. ಸುಂದರ್ ರಾಜ್ ಮಾರ್ಗದರ್ಶನದಲ್ಲಿ ನಗರ ಸಂಚಾರ ವಿಭಾಗದ ಎಸಿಪಿ ಎಂ. ಶಿವಶಂಕರ್ ಸಲಹೆ ಮೇರೆಗೆ ಮೈಸೂರಿನ ಎಲ್ಲಾ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಮತ್ತು ಸಬ್‌ಇನ್ಸ್‌ಪೆಕ್ಟರ್‌ಗಳ ನೇತೃತ್ವದಲ್ಲಿ ವ್ಯಾಪ್ತಿಯ ಪ್ರೌಢಶಾಲೆ ಮತ್ತು ಕಾಲೇಜುಗಳಲ್ಲಿ ಪೋಷಕರು ಮತ್ತು ವಿದ್ಯಾರ್ಥಿಗಳ ಸಭೆ ನಡೆಸಿ ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಮನವರಿಕೆ ಮಾಡಿಕೊಡುತ್ತಿದ್ದಾರೆ.



ಹೆಲ್ಮೆಟ್ ಧರಿಸದ ದ್ವಿಚಕ್ರ ವಾಹನ ಸವಾರರಿಗೆ ಗುಲಾಬಿ ಹೂ ನೀಡಿದ ವಿದ್ಯಾರ್ಥಿನಿಯರು, ಇನ್ನು ಮುಂದೆ ಹೆಲ್ಮೆಟ್ ಧರಿಸಿ, ಸಂಚಾರ ನಿಯಮ ಪಾಲಿಸಿ ಎಂದು ಮನವಿ ಮಾಡಿದರು.

ತಮ್ಮ ಅಪ್ರಾಪ್ತ ಮಕ್ಕಳಿಗೆ ದ್ವಿಚಕ್ರ ವಾಹನ ಅಥವಾ ಕಾರುಗಳನ್ನು ಕೊಟ್ಟಲ್ಲಿ ವಾಹನ ಚಾಲನಾ ಪರವಾನಗಿ ಇಲ್ಲದೇ ಚಾಲನೆ ಮಾಡಿ ಅಪಘಾತವೆಸಗಿದ್ದಲ್ಲಿ ನಿಮ್ಮ ಮಕ್ಕಳು ಹಾಗೂ ಇತರ ವಾಹನ ಚಾಲಕರಿಗೂ ತೊಂದರೆಯಾಗಲಿದೆ. ಅಲ್ಲದೇ, ಅಮಾಯಕರು ಸಾವನ್ನಪ್ಪುವ ಸಾಧ್ಯತೆ ಇದೆ. ಹಲವರಿಗೆ ಗಂಭೀರ ಗಾಯಗಳಾಗಿ ಶಾಶ್ವತ ಅಂಗವಿಕಲರಾಗುತ್ತಾರೆ. ಆದ್ದರಿಂದ ತಮ್ಮ ಅಪ್ರಾಪ್ತ ಮಕ್ಕಳು ಅಪಘಾತ ಮಾಡಿದಲ್ಲಿ ಅಥವಾ ಸಂಚಾರ ನಿಯಮ ಉಲ್ಲಂಘಿಸಿದಲ್ಲಿ ಆರ್‌ಸಿ ಮಾಲೀಕರಾದ ಪೋಷಕರ ಹೆಸರಿನಲ್ಲಿ ಪ್ರಕರಣ ದಾಖಲಾಗುತ್ತದೆ ಎಂದು ಪೊಲೀಸರು ಎಚ್ಚರಿಕೆ ನೀಡುತ್ತಿದ್ದಾರೆ.

ಮತ್ತೊಂದೆಡೆ ಶಾಲಾ–ಕಾಲೇಜು ವಿದ್ಯಾರ್ಥಿಗಳೊಂದಿಗೆ ಸಿಗ್ನಲ್ ಲೈಟ್, ಪ್ರಮುಖ ರಸ್ತೆಗಳು, ಜಂಕ್ಷನ್‌ಗಳಲ್ಲಿ ನಿಂತು ಸಂಚಾರ ನಿಯಮ ಉಲ್ಲಂಘನೆ ಮಾಡುವವರಿಗೆ ಗುಲಾಬಿ ಹೂ ನೀಡಿ ಮತ್ತೆ ಈ ಬಗೆಯ ತಪ್ಪು ಮಾಡಬೇಡಿ ಎಂದು ಮನಸ್ಸಿಗೆ ನಾಟುವಂತೆ ಪರಿವರ್ತನೆ ಮಾಡುವ ಮೂಲಕ ಜಾಗೃತಿ ಮೂಡಿಸುತ್ತಿದ್ದಾರೆ. ಆ ವೇಳೆ ತಪ್ಪು ಮಾಡಿದವರಿಗೆ ವಿದ್ಯಾರ್ಥಿಗಳು ಗುಲಾಬಿ ನೀಡಿದಾಗ ಒಂದು ರೀತಿಯ ಮುಜುಗರದಿಂದ ಸಾರಿ, ಮತ್ತೆಂದೂ ಈ ರೀತಿ ಸಂಚಾರ ನಿಯಮ ಉಲ್ಲಂಘಿಸುವುದಿಲ್ಲ ಎಂದು ತಪ್ಪೊಪ್ಪಿಕೊಳ್ಳುತ್ತಿರುವುದು ಕಂಡು ಬಂದಿತು.

ಜೊತೆಗೆ ಸಂಚಾರ ಠಾಣೆ ಪೊಲೀಸರು, ತಮ್ಮ ವ್ಯಾಪ್ತಿಯಲ್ಲಿರುವ ಪಿಯು ಕಾಲೇಜುಗಳಿಗೆ ಹೋಗಿ ವಾಹನ ಚಾಲನೆ ಮಾಡಿಕೊಂಡು ಬರುವ ವಿದ್ಯಾರ್ಥಿಗಳಿಗೆ ತಿಳುವಳಿಕೆ ಹೇಳಿ ಡಿಎಲ್ ಇಲ್ಲದೇ ವಾಹನ ಚಾಲನೆ ಮಾಡುವಂತಿಲ್ಲ. ಮತ್ತೆ ನೀವು ವಾಹನ ತಂದಲ್ಲಿ ಸೀಜ್ ಮಾಡಿ ನಿಮ್ಮ ಪೋಷಕರಿಗೆ ನೋಟೀಸ್ ಜಾರಿ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡುವುದರ ಜೊತೆಗೆ ಪ್ರಾಂಶುಪಾಲರು ಹಾಗೂ ಆಡಳಿತ ಮಂಡಳಿ ಸದಸ್ಯರೊಂದಿಗೆ ಸಮಾಲೋಚಿಸಿ, ವಿದ್ಯಾರ್ಥಿಗಳು ಅವರ ವಾಹನಗಳಲ್ಲಿ ಬಾರದಂತೆ ನಿಯಂತ್ರಿಸಬೇಕು ಎಂದು ತಿಳಿಸುತ್ತಿದ್ದಾರೆ.

ಸರ್ಕಾರಿ ಶಾಲೆಗಳ ಮುಚ್ಚುವ ನಿರ್ಧಾರ ಕೈಬಿಡಲು ಆಗ್ರಹಿಸಿ ಎಐಡಿಎಸ್‌ಓ ಪ್ರತಿಭಟನೆ



ರಾಜ್ಯದಲ್ಲಿ ಸರ್ಕಾರಿ ಶಾಲೆಗಳ ಮುಚ್ಚದಂತೆ ಆಗ್ರಹಿಸಿ ಎಐಡಿಎಸ್‌ಓ ನೇತೃತ್ವದಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಮೈಸೂರು, ನ21(ಎಂಟಿವೈ)– ರಾಜ್ಯದಲ್ಲಿ ಸರ್ಕಾರಿ ಶಾಲೆಗಳ ಮುಚ್ಚುವ ನಿರ್ಧಾರದಿಂದ ಹಿಂದೆ ಸರಿಯುವಂತೆ ಆಗ್ರಹಿಸಿ ಎಐಡಿಎಸ್‌ಓ ನೇತೃತ್ವದಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಶುಕ್ರವಾರ ಬೆಳಗ್ಗೆ ಪ್ರತಿಭಟನೆ ನಡೆಸಿದ ಎಐಡಿಎಸ್‌ಓ ಕಾರ್ಯಕರ್ತರು, ರಾಜ್ಯದಲ್ಲಿ ಸರ್ಕಾರಿ ಶಾಲೆಗಳನ್ನು ಉಳಿಸಿ, ಸುಧಾರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು. ಸರ್ಕಾರಿ ಶಾಲೆಗಳನ್ನು ಬಲವರ್ಧನೆ ಮಾಡುವ ಮೂಲಕ ಬಡ ಹಾಗೂ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸಲು ಮುಂದಾಗಬೇಕು ಎಂದು ಆಗ್ರಹಿಸಿದರು.

ರಾಜ್ಯದಲ್ಲಿ ಕರ್ನಾಟಕ ಪಬ್ಲಿಕ್ ಸ್ಕೂಲ್(ಕೆಪಿಎಸ್)– ಮ್ಯಾಗ್ನೆಟ್ ಹೆಸರಿನಲ್ಲಿ 40 ಸಾವಿರಕ್ಕೂ ಅಧಿಕ ಸರ್ಕಾರಿ ಶಾಲೆಗಳನ್ನು ಮುಚ್ಚಲು ಸರ್ಕಾರ ಮುಂದಾಗಿದೆ. ರಾಜ್ಯದಲ್ಲಿ ಕೆಪಿಎಸ್ ಶಾಲೆ ತೆರೆಯುವುದರಿಂದ ಯಾವುದೇ ಸಮಸ್ಯೆ ಇಲ್ಲ. ಆದರೆ, ಕೇವಲ ಗ್ರಾ.ಪಂ. ಮಟ್ಟದಲ್ಲಿ ತೆರೆಯುವ ಕೆಪಿಎಸ್– ಮ್ಯಾಗ್ನೆಟ್ ಶಾಲೆ ಅತ್ಯಂತ ಅಪಾಯಕಾರಿಯಾಗಿದೆ. ಈ ಕ್ರಮದಿಂದ ಗ್ರಾಮೀಣ ಪ್ರದೇಶದಲ್ಲಿರುವ ಸರ್ಕಾರಿ ಶಾಲೆಗಳಿಗೆ ಅಪಾಯ ಒದಗಲಿದೆ ಎಂದು ದೂರಿದರು.

ಇದೇ ಸಂದರ್ಭದಲ್ಲಿ ಎಐಡಿಎಸ್‌ಓ ರಾಜ್ಯ ಖಜಾಂಚಿ ಸುಭಾಷ್ ಬೆಟ್ಟದ ಕೊಪ್ಪ ಮಾತನಾಡಿ, ಕರ್ನಾಟಕ ಪಬ್ಲಿಕ್ ಶಾಲೆ(KPS) – ಮ್ಯಾಗ್ನೆಟ್ ಶಾಲೆಗಳ ಯೋಜನೆಯಡಿ, ಸರ್ಕಾರ ರಾಜ್ಯದಾದ್ಯಂತ 40 ಸಾವಿರಕ್ಕೂ ಹೆಚ್ಚು ಶಾಲೆಗಳನ್ನು ವಿಲೀನಗೊಳಿಸಿ, ಸರ್ಕಾರಿ ಶಾಲೆಗಳ ಮುಚ್ಚಲು ಸಿದ್ಧತೆ ನಡೆಸುತ್ತಿದೆ. ಗುಣಮಟ್ಟ ಮತ್ತು ಮಾದರಿ ಶಾಲೆಗಳ ಹೆಸರಿನಲ್ಲಿ ಉಚಿತ ಮತ್ತು ಸಾರ್ವತ್ರಿಕ ಶಿಕ್ಷಣದ ಆಶಯ ಬದಿಗೊತ್ತುವ ಸಂಚು ನಡೆಸಲಾಗುತ್ತಿದೆ. ರಾಜ್ಯದಲ್ಲಿ 49,600 ಸರ್ಕಾರಿ ಶಾಲೆಗಳಿದ್ದು, ಅವುಗಳಲ್ಲಿ 30 ಸಾವಿರ ಶಾಲೆ ಗ್ರಾಮೀಣ ಪ್ರದೇಶದಲ್ಲಿವೆ. ಸರ್ಕಾರದ ಯೋಜನೆಯ ಪ್ರಕಾರ ರಾಜ್ಯದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ಸೇರಿದಂತೆ 5,900 ಶಾಲೆಗಳು ಮಾತ್ರವೇ ಉಳಿಯುತ್ತವೆ. ಇದರಲ್ಲಿ ಮೈಸೂರಿನ ಕನಕಗಿರಿಯಲ್ಲಿರುವ ಪ್ರೌಢಶಾಲೆ, ಮಹಾರಾಜ ಪ್ರೌಢಶಾಲೆ, ಪೀಪಲ್ಸ್ ಪಾರ್ಕ್ ಪ್ರೌಢಶಾಲೆ, ಗೌಸಿಯನಗರ ಪ್ರೌಢಶಾಲೆ ಹಾಗೂ ಮೈಸೂರು ಗ್ರಾಮಾಂತರದಲ್ಲಿ ಉದ್ಬೂರು ಪ್ರೌಢಶಾಲೆ, ಹೂಟಗಳ್ಳಿ ಪ್ರೌಢಶಾಲೆಗಳನ್ನು ಮ್ಯಾಗ್ನೆಟ್ ಶಾಲೆಯನ್ನಾಗಿ ಪರಿವರ್ತಿಸಲು ಉದ್ದೇಶಿಸಲಾಗಿದೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಎಐಡಿಎಸ್‌ಓ ಜಿಲ್ಲಾ ಕಾರ್ಯದರ್ಶಿ ನಿತಿನ್, ಸಂಘಟನೆಯ ಜಿಲ್ಲಾ ಉಪಾಧ್ಯಕ್ಷೆ ಸ್ವಾತಿ, ಪದಾಧಿಕಾರಿಗಳಾದ ಚಂದ್ರಾ, ಚಂದನ, ಹೇಮಾ, ಅಂಜಲಿ, ಸುದೀಶ್, ಅಭಿಷೇಕ್ ಹಾಗೂ ವಿವಿಧ ಕಾಲೇಜಿನ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಎಂಸಿಎ ವಿಭಾಗ ಆರಂಭ



ಮೈಸೂರು, ನ.21– ವಿದ್ಯಾರ್ಥಿಗಳು ತಮ್ಮನ್ನು ತಾವು ಅರ್ಥೈಸಿಕೊಂಡು ಜೀವನದಲ್ಲಿ ಯಶಸ್ಸನ್ನು ಗಳಿಸುವಂತಾಗಬೇಕು ಅಂತಹ ಯಶಸ್ಸಿಗಿಂತ ಆತ್ಮತೃಪ್ತಿ ಬಹಳ ಮುಖ್ಯ ಎಂದು ಮೈಸೂರು ವಿಶ್ವವಿದ್ಯಾನಿಲಯದ ಗಣಕ ವಿಜ್ಞಾನ ವಿಭಾಗದ ಹಿರಿಯ ಪ್ರಾಧ್ಯಾಪಕ ಡಾ.ಡಿ.ಎಸ್.ಗುರು ಅಭಿಪ್ರಾಯಪಟ್ಟರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಸ್ನಾತಕೋತ್ತರ ಕೇಂದ್ರದಲ್ಲಿ ಎಂಸಿಎ ವಿಭಾಗದ ಉದ್ಘಾಟನೆ ಹಾಗೂ ಅಭಿವಿನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಜಾಗತೀಕರಣದ ಈ ಕಾಲಘಟ್ಟದಲ್ಲಿ ಎಂಸಿಎ ವಿಭಾಗದ ಪ್ರಸ್ತುತತೆ ಏನು ಎಂಬುದರ ಕುರಿತು ಮಾತನಾಡುತ್ತಾ, ಇಂಜಿನಿಯರಿಂಗ್ ಹಲವು ಶಾಖೆಗಳು ಶಾಸ್ತ್ರೀಯ ವಿಭಾಗಗಳಾದರೆ ಕಂಪ್ಯೂಟರ್ ಇಂಜಿನಿಯರಿಂಗ್ ರಾಣಿ ಇದ್ದಂತೆ ಇಂದು ಜೀವನದ ಎಲ್ಲಾ ಕ್ಷೇತ್ರಗಳಲ್ಲಿಯೂ ವಿಜ್ಞಾನ ಹಿಡಿತವನ್ನು ಸಾಧಿಸಿದೆ. ಆದರೆ ಈಗ ತಂತ್ರಜ್ಞಾನ ವಿಜ್ಞಾನಕ್ಕಿಂತಲೂ ಬಹಳ ಮುಂದುವರೆದಿದ್ದು ಎಲ್ಲವನ್ನು ನಿಯಂತ್ರಿಸುತ್ತಿದೆ. ವಿದ್ಯಾರ್ಥಿಗಳು ಶಿಸ್ತುಬದ್ಧ ಜೀವನವನ್ನು ರೂಢಿಸಿಕೊಳ್ಳುವ ಮೂಲಕ ತಮಗೆ ಬೇಕೆನಿಸಿದ್ದನ್ನು ಮಾತ್ರ ಕಲಿತು ಅದನ್ನು ತಮ್ಮದನ್ನಾಗಿಸಿಕೊಳ್ಳಬೇಕು. ಯಾವುದನ್ನು ಪ್ರಶ್ನಿಸಿದೆ ಒಪ್ಪಿಕೊಳ್ಳಬೇಡಿ, ಪ್ರಶ್ನಿಸುವ ಮೂಲಕ ಅರ್ಥೈಸಿಕೊಂಡು ಜೀವನದಲ್ಲಿ ಯಶಸ್ಸನ್ನು ಗಳಿಸಿಕೊಳ್ಳಿ ಎಂದು ತಿಳಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಮರೀಗೌಡ, ಇಂದು ಜಗತ್ತಿನ ಎಲ್ಲಾ ಕ್ಷೇತ್ರಗಳಲ್ಲಿಯೂ ತಂತ್ರಜ್ಞಾನ ಪ್ರಮುಖ ಪಾತ್ರ ವಹಿಸುತ್ತಿದೆ. ಎಂಸಿಎ ವಿಭಾಗವು ತಾಂತ್ರಿಕ ವಿಭಾಗ ವಿಶ್ಲೇಷಣಾತ್ಮಕ, ಆಲೋಚನಾಕ್ರಮ, ವೃತ್ತಿ ವಿಭಾಗ ಇವುಗಳಿಗೆ ಅಗತ್ಯವಾದ ವಿಶೇಷ ಕೌಶಲ್ಯವನ್ನು ಮತ್ತು ಉದ್ಯೋಗಕ್ಕೆ ಬೇಕಾದ ತರಬೇತಿಯನ್ನು ನೀಡುತ್ತದೆ ಎಂದರು.

ವಿದ್ಯಾವರ್ಧಕ ಸಂಘದ ಗೌರವಾಧ್ಯಕ್ಷ ಗುಂಡಪ್ಪಗೌಡ ಅಧ್ಯಕ್ಷತೆ ವಹಿಸಿದ್ದು, ಮುಖ್ಯ ಅತಿಥಿಗಳಾಗಿ ಸಂಸ್ಥೆಯ ಗೌರವ ಕಾರ್ಯದರ್ಶಿ ಪಿ.ವಿಶ್ವನಾಥ್, ಗೌರವ ಕೋಶಾಧ್ಯಕ್ಷರಾದ ಶ್ರೀಶೈಲ ರಾಮಣ್ಣವರ್ ಉಪಸ್ಥಿತರಿದ್ದರು.

ಅಂತರ ಶಾಲಾ ಚರ್ಚಾ ಸ್ಪರ್ಧೆ ವಿಜೇತರು



ಮೈಸೂರು, ನ. 21– ಮೈಸೂರಿನ ಶ್ರೀ ಶಾರದಾ ಪಬ್ಲಿಕ್ ಶಾಲೆಯ ವತಿಯಿಂದ ಸಂಸ್ಥಾಪಕರ ದಿನ ಹಾಗೂ ದಿವಂಗತ ಎಸ್. ರಾಮನಾಥನ್ ಸ್ಮರಣಾರ್ಥವಾಗಿ ಆಯೋಜಿಸಲಾಗಿದ್ದ ಅಂತರ ಪ್ರೌಢಶಾಲಾ ಮಟ್ಟದ ಕನ್ನಡ ಮತ್ತು ಇಂಗ್ಲೀಷ್ ಚರ್ಚಾ ಸ್ಪರ್ಧೆಗಳು ಯಶಸ್ವಿಯಾಗಿ ಸಂಪನ್ನಗೊಂಡವು. ಸ್ಪರ್ಧೆಗಳಲ್ಲಿ ನಗರದ ಸುಮಾರು 21 ಶಾಲೆಗಳ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿದ್ದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಎಸಿ ಇ ಟೆಕ್ನಾಲಜೀಸ್‌ನ ಮುಖ್ಯ ಸಲಹೆಗಾರ ಎನ್. ಆರ್. ಅಶೋಕ್, ಸ್ಪರ್ಧೆಗಳು ಆತ್ಮವಿಶ್ವಾಸವನ್ನು ಹೆಚ್ಚಿಸಲು ಇರುವ ವೇದಿಕೆಗಳಾಗಿವೆ. ಇಲ್ಲಿ ಸೋಲು–ಗೆಲುವು ಮುಖ್ಯವಲ್ಲ. ಭಾಗವಹಿಸುವಿಕೆಯ ಮನೋಭಾವ ಮುಖ್ಯ. ವಿದ್ಯಾರ್ಥಿಗಳು ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚು ಸಮಯ ಕಳೆಯುವುದಕ್ಕಿಂತ ಹೆಚ್ಚಾಗಿ, ತಮ್ಮ ಜ್ಞಾನ ಮತ್ತು ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಹೆಚ್ಚಿನ ಗಮನ ನೀಡಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಕನ್ನಡ ಚರ್ಚಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ಪೂರ್ಣಚೇತನ ಪಬ್ಲಿಕ್ ಶಾಲೆ, ದ್ವಿತೀಯ ಬಹುಮಾನವನ್ನು ಮಾನಸ ಸರೋವರ ಪುಷ್ಕರಿಣಿ ಶಾಲೆ, ತೃತೀಯ ಬಹುಮಾನವನ್ನು ಮಹಾಜನ ಪಬ್ಲಿಕ್ ಶಾಲೆಗಳು ಕ್ರಮವಾಗಿ ಪಡೆದವು. ಕನ್ನಡ ಚರ್ಚಾ ಸ್ಪರ್ಧೆಯಲ್ಲಿ ಪೂರ್ಣಚೇತನ ಪಬ್ಲಿಕ್ ಶಾಲೆಯು ರೋಲಿಂಗ್ ಟ್ರೋಫಿಯನ್ನು ತನ್ನದಾಗಿಸಿಕೊಂಡಿತು.

ಇಂಗ್ಲೀಷ್ ಚರ್ಚಾಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ವಿಜಯ ವಿಠಲ ವಿದ್ಯಾಶಾಲೆ, ದ್ವಿತೀಯ ಬಹುಮಾನವನ್ನು ಮಾನಸ ಸರೋವರ ಪುಷ್ಕರಿಣಿ ಶಾಲೆ, ತೃತೀಯ ಬಹುಮಾನವನ್ನು ಮೈಸೂರು ಇಂಟರ್‌ನ್ಯಾಷನಲ್ ಶಾಲೆಗಳು ಕ್ರಮವಾಗಿ ಬಹುಮಾನಗಳನ್ನು ಪಡೆದವು. ಇಂಗ್ಲಿಷ್ ಚರ್ಚಾ ಸ್ಪರ್ಧೆಯಲ್ಲಿ ವಿಜಯ ವಿಠಲ ವಿದ್ಯಾಶಾಲೆಯು ರೋಲಿಂಗ್ ಟ್ರೋಫಿಯನ್ನು ಪಡೆಯಿತು.

ಭಾರತ ಆರ್‌ಎಸ್‌ಎಸ್ ಪ್ರಭುತ್ವವಾದಿಗಳಿಂದ ವಿಶ್ವಗುರುವಾಗುವ ಬದಲು ವಿಷದ ಗುರುವಾಗುತ್ತಿದೆ

● ಸಾಮಾಜಿಕ ಕಾರ್ಯಕರ್ತ ಭನ್ವರ್ ಮೇಘವಂಶಿ ಆತಂಕ ● ಪ.ಮಲ್ಲೇಶ್ ನೆನಪಿನಂಗಳ ಕಾರ್ಯಕ್ರಮ ● ಶೋಷಿತರು, ಅವಕಾಶ ವಂಚಿತರಿಗೆ ಸಂವಿಧಾನವೇ ರಕ್ಷಣೆ

ಮೈಸೂರು,21(ಎಂಕೆ)– ಆರ್‌ಎಸ್‌ಎಸ್ ಮತ್ತು ಪ್ರಭುತ್ವವಾದಿಗಳಿಂದ ಭಾರತ ವಿಶ್ವಗುರು ಆಗುವ ಬದಲು ವಿಷದ ಗುರುವಾಗುತ್ತಿದೆ. ಮೂಲಭೂತ ಹಕ್ಕುಗಳ ಕುರಿತು ಪ್ರತಿಪಾದಿಸುವವರನ್ನು ರಾಕ್ಷಸರಂತೆ ಬಿಂಬಿಸಲಾಗುತ್ತಿದೆ ಎಂದು ಸಾಮಾಜಿಕ ಕಾರ್ಯಕರ್ತ ಹಾಗೂ ರಾಜಸ್ಥಾನ್ ಲೇಖಕ ಭನ್ವರ್ ಮೇಘವಂಶಿ ಆತಂಕ ವ್ಯಕ್ತಪಡಿಸಿದರು.

ಮೈಸೂರು ವಿವಿ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಪ್ರಗತಿಪರ ಸಂಘಟನೆಗಳ ಒಕ್ಕೂಟ ಮೈಸೂರು, ಗಾಂಧಿ ವಿಚಾರ ಪರಿಷತ್ತು ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಮತ್ತು ಸಂಶೋಧಕರ ವತಿಯಿಂದ ಆಯೋಜಿಸಿದ್ದ ರಾಷ್ಟ್ರೀಯ ವಿಚಾರ ಸಂಕಿರಣ ಮತ್ತು ಪುಸ್ತಕ ಬಿಡುಗಡೆಯ 'ಪ.ಮಲ್ಲೇಶ್ ನೆನಪಿನ ಅಂಗಳ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶೋಷಿತರು, ಅವಕಾಶ ವಂಚಿತರು ಭಾರತ ಸಂವಿಧಾನವನ್ನು ಅರಿತು–ಅಪ್ಪಿಕೊಳ್ಳುತ್ತಿರುವುದರಿಂದಲೇ ಪ್ರಭುತ್ವವಾದಿಗಳಲ್ಲಿ ಭಯ ಶುರುವಾಗಿದೆ ಎಂದರು.



ಮೈಸೂರು ವಿವಿ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಶುಕ್ರವಾರ ನಡೆದ ರಾಷ್ಟ್ರೀಯ ವಿಚಾರ ಸಂಕಿರಣ ಮತ್ತು ಪುಸ್ತಕ ಬಿಡುಗಡೆಯ 'ಪ.ಮಲ್ಲೇಶ್ ನೆನಪಿನ ಅಂಗಳ' ಕಾರ್ಯಕ್ರಮದಲ್ಲಿ ಸಾಮಾಜಿಕ ಕಾರ್ಯಕರ್ತ ಹಾಗೂ ರಾಜಸ್ಥಾನ್ ಲೇಖಕ ಭನ್ವರ್ ಮೇಘವಂಶಿ, ಗಾಂಧಿವಾದಿ ಪ.ಮಲ್ಲೇಶ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ದೇಶದಲ್ಲಿಂದು ಅಘೋಷಿತ ತುರ್ತು ಪರಿಸ್ಥಿತಿ ಜಾರಿಯಲ್ಲಿದೆ. ಹಕ್ಕುಗಳ ಬಗ್ಗೆ ಮಾತನಾಡುವವರನ್ನು ರಾಕ್ಷಸರಂತೆ ಬಿಂಬಿಸಲಾಗುತ್ತಿದೆ. ಸಂವಿಧಾನದ ಬಗ್ಗೆ ಮಾತನಾಡುತ್ತಲೇ ಸಂವಿಧಾನದ ಪ್ರತಿಯನ್ನು ಸುಟ್ಟವರಿಗೆ, ನ್ಯಾಯಾಧೀಶರ ಮೇಲೆ ಶೂ ಎಸೆಯಲೆತ್ನಿಸಿದವರಿಗೆ ಶಿಕ್ಷೆ ವಿಧಿಸಲಾಗದ ಪರಿಸ್ಥಿತಿ ದೇಶದಲ್ಲಿದೆ. ಆರ್‌ಎಸ್‌ಎಸ್ ಮತ್ತು ಪ್ರಭುತ್ವವಾದಿಗಳು ಸಂವಿಧಾನವನ್ನು ಟಾರ್ಗೆಟ್ ಮಾಡಿ, ತಳ ಸಮುದಾಯದ ಜನರ ಹಕ್ಕುಗಳನ್ನು ಕಸಿದುಕೊಳ್ಳುವ ಪ್ರಯತ್ನಗಳು ನಡೆಯುತ್ತಿದ್ದು, ಮತ್ತೆ ವರ್ಣಾಶ್ರಮ ಪದ್ಧತಿಯನ್ನು ಜಾರಿಗೊಳಿಸುವ ಆತಂಕ ಗೋಚರವಾಗುತ್ತಿದೆ ಎಂದು ಹೇಳಿದರು.

ಸರಿ–ತಪ್ಪುಗಳ ಪರಾಮರ್ಶನ ಮಾಡದೆ, ನ್ಯಾಯಾಂಗ ಪ್ರಕ್ರಿಯೆಗಳನ್ನು ಉಲ್ಲಂಘಿಸಿ ಬುಲ್ಡೋಜರ್ ಸಂಸ್ಕೃತಿ ಬೆಳೆಸಲಾಗುತ್ತಿದೆ. ಇವತ್ತಿನ ವಾಟ್ಸ್‌ಆಪ್ ಯುನಿವರ್ಸಿಟಿಯಂತೆಯೇ ಅಂದು ಕೂಡ ತಾಜ್ ಮಹಲ್‌ನ ತೇಜೋಮಹಲ್ ಎನ್ನುವುದು, ಮಸೀದಿಗಳಲ್ಲಿ ಬಾಂಬ್ ಮತ್ತು ಮಾರಕಾಸ್ತ್ರಗಳನ್ನು ಇಟ್ಟಿದ್ದಾರೆ ಎಂದು ಸುದ್ದಿ ಹಬ್ಬಿಸಲಾಗುತ್ತಿತ್ತು. ಆದ್ದರಿಂದ ನಾವುಗಳು ಗಾಂಧಿವಾದಿ, ಅಂಬೇಡ್ಕರ್‌ವಾದಿ, ಕಮ್ಯೂನಿಸ್ಟ್‌ವಾದಿಗಳೆಂದು ಸಣ್ಣ ಸಣ್ಣ ವ್ಯತ್ಯಾಸಗಳಿಂದ ದೂರವಾಗಿರುವ ಬದಲು ಒಗ್ಗಟ್ಟಾಗಿ ದೇಶದ ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ಉಳಿಸಬೇಕಿದೆ ಎಂದು ತಿಳಿಸಿದರು.

ಮಕ್ಕಳೇ ಆರ್‌ಎಸ್‌ಎಸ್ ಟಾರ್ಗೆಟ್: ನಾನು ಚಿಕ್ಕವಯಸ್ಸಿನಲ್ಲೇ ಆರ್‌ಎಸ್‌ಎಸ್ ಪ್ರಭಾವಕ್ಕೆ ಒಳಗಾಗಿ ಆರ್‌ಎಸ್‌ಎಸ್ ಸೇರಿದ್ದೆ. ದಲಿತ ಎಂಬ ಕಾರಣಕ್ಕೆ ನಮ್ಮ ಮನೆಯಲ್ಲಿ ಮಾಡಿದ ಊಟವನ್ನು ರಸ್ತೆಯಲ್ಲಿ ಬಿಸಾಡಿದ್ದರು. ಅಂದಿನಿಂದ ಆರ್‌ಎಸ್‌ಎಸ್ ಬಿಟ್ಟು ಅಂಬೇಡ್ಕರ್, ಪೆರಿಯಾರ್, ಫುಲೆ ಅವರ ವಿಚಾರಗಳ ಮೂಲಕ ಸಾಮಾಜಿಕ ಸಮಾನತೆ ಹೋರಾಟದಲ್ಲಿ ತೊಡಗಿದ್ದೇನೆ. ಆರ್‌ಎಸ್‌ಎಸ್ ಮಕ್ಕಳು ಮತ್ತು ಸಾರ್ವಜನಿಕ ಸ್ಥಳಗಳನ್ನೇ ಟಾರ್ಗೆಟ್ ಮಾಡಲಿದೆ. ಮಕ್ಕಳ ಬ್ರೈನ್‌ವಾಷ್ ಮಾಡುವ ಬದಲು ಬ್ರೈನ್‌ನಲ್ಲಿನ ಆಲೋಚನೆಗಳನ್ನೇ ಬದಲಿಸುತ್ತಾರೆ ಎಂದು ಅಭಿಪ್ರಾಯಪಟ್ಟರು.

ಹಕ್ಕುಗಳಿಗೆ ಹೋರಾಟ ಅನಿವಾರ್ಯ: ಪ್ರಗತಿಪರ ಚಿಂತಕಿ ಸವಿತಾ ಪ.ಮಲ್ಲೇಶ್ ಮಾತನಾಡಿ, ದೇಶದಲ್ಲಿ ಎಲ್ಲವನ್ನೂ ಒಳಗೊಂಡ ಸುಂದರ, ಸಮಾನತೆಯನ್ನು ಒಳಗೊಂಡ ಸಂವಿಧಾನವಿದೆ. ಸಂವಿಧಾನದಡಿಯಲ್ಲಿ ನಮ್ಮ ಹಕ್ಕುಗಳಿಗೆ ಚ್ಯುತಿ ಬಂದಾಗ ಪ್ರಶ್ನಿಸಬೇಕಿದೆ. ಹಕ್ಕುಗಳಿಗಾಗಿ ಹೋರಾಟ ಮುಂದುವರೆಸಬೇಕು. ಹೋರಾಟದ ಮೂಲಕವೇ ನ್ಯಾಯ ಪಡೆಯಬೇಕು ಎಂದರು.

ರಂಗಾಯಣ ಮಾಜಿ ನಿರ್ದೇಶಕ ಜನಾರ್ದನ್(ಜನ್ನಿ) ಪ್ರಾಸ್ತಾವಿಕ ನುಡಿಗಳನ್ನಾಡಿದರು. ಎಐಸಿಸಿ ವಕ್ತಾರ ಅನ್ಸುಲ ಅವಿಜಿತ್, ಪ್ರಗತಿಪರ ಚಿಂತಕರಾದ ಶಿವಸುಂದರ್, ಡಾ.ಮೀನಾಕ್ಷಿ ಬಾಳಿ, ಸುಶೀಲ, ಚಲನಚಿತ್ರ ನಿರ್ದೇಶಕ ಎಂ.ಡಿ.ಸಿದ್ದಿಕ್, ಸಂಶೋಧಕರಾದ ನವೀನ್ ಅಳಗಂಚಿ, ಮಹೇಶ್ ಪಿ.ಮರಳ್ಳಿ ಮತ್ತಿತರರಿದ್ದರು.

ಕನ್ನಡ ರಾಜ್ಯೋತ್ಸವ



ಮೈಸೂರಿನ ಬೋಗಾದಿ ಪಟ್ಟಣ ಪಂಚಾಯಿತಿ ಕಾರ್ಯಾಲಯದ ಖಾಯಂ ಮತ್ತು ಹೊರಗುತ್ತಿಗೆ ನೌಕರರು ಕನ್ನಡ ರಾಜ್ಯೋತ್ಸವವನ್ನು ಆಚರಿಸಿದರು. ಈ ವೇಳೆ ಮುಖ್ಯಾಧಿಕಾರಿ ಸುಜಯ್ ಕುಮಾರ್, ಆರೋಗ್ಯಾಧಿಕಾರಿ ಪುನಿತ್ ಕುಮಾರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

22.11.2025 ಶನಿವಾರ, ಮಳೆ ನಕ್ಷತ್ರ: ಅನೂರಾಧ, 20.11.2025 ರಿಂದ 02.12.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ

- **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ :** ಬ್ರೈಡಲ್ ಜ್ಯೂವೆಲ್ಲರಿ ಶೋ, ಸ್ಥಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್, ಬಿ.ಎನ್. ರಸ್ತೆ, ಬೆಳಗ್ಗೆ 10 ರಿಂದ.
- **ಸ್ವರಾಂಜಲಿ :** ಹಿರಿಯ ನಾಗರಿಕರಿಗೆ ಗಾಯನ ಸ್ಪರ್ಧೆ, ಸ್ಥಳ: ಜೆ.ಕೆ. ಮೈದಾನದ ಪ್ಲಾಟಿನಂ ಜ್ಯೂಬಿಲಿ ಸಭಾಂಗಣ, ಬೆಳಗ್ಗೆ 9 ರಿಂದ.
- **ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ :** ಗ್ರೀನ್ ಎಜುಕೇಷನ್ ಗ್ಯಾಲರಿ ವಾಕ್, ಕೃಷಿ ನೈಪುಣ್ಯ ಕಾರ್ಯಕ್ರಮ, ಮುಖ್ಯ ಅತಿಥಿಗಳು : ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಮಂಜುನಾಥ್ ಅಂಗಡಿ, ಕೇಶವಮೂರ್ತಿ, ಡಾ. ಸಿ.ಎ. ದೀಪಕ್, ಪ್ರಿನ್ಸಿಪಾಲ್ ಆರ್. ಕೌಟಿಲ್ಯ ಅಧ್ಯಕ್ಷತೆ : ಶಾಲೆ ಅಧ್ಯಕ್ಷ ಆರ್. ರಘು, ಸ್ಥಳ: ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್, ದಟ್ಟಗಳ್ಳಿ ಕ್ಯಾಂಪಸ್, ಬೆಳಗ್ಗೆ 9 ರಿಂದ.
- **ರಾಮ್‌ಸನ್ಸ್ ಬೊಂಬೆ ಮನೆ :** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಪಿಸಿಓಡಿ ಮತ್ತು ಮಕ್ಕಳಲ್ಲಿ ಕಂಡು ಬರುವ ಚರ್ಮರೋಗಕ್ಕೆ ಉಚಿತ ತಪಾಸಣೆ ಮತ್ತು ಚಿಕಿತ್ಸೆ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್. ಬೆಳಗ್ಗೆ 10ರಿಂದ.
- **ಮೈಸೂರು ಕಾಲೇಜ್ ಆಫ್ ಇಂಜಿನಿಯರಿಂಗ್ ಅಂಡ್ ಮ್ಯಾನೇಜ್‌ಮೆಂಟ್ :** ವಿ.ಟಿ.ಯು ಮೈಸೂರು ವಲಯ ಅಂತರ ಕಾಲೇಜು 2025–26 ಸಾಲಿನ ಪುರುಷರ ಹಗ್ಗಜಗ್ಗಾಟ, ಮುಖ್ಯ ಅತಿಥಿಗಳು: ಜ್ಞಾನವಾಹಿನಿ ಸಂಸ್ಥೆಯ ಟ್ರಸ್ಟಿ ಹಾಗೂ ಮೈಸೂರು ಜಿಲ್ಲಾ ಪರಿಷತ್ ಮಾಜಿ ಅಧ್ಯಕ್ಷ ಕೆ.ಎನ್. ಪುಟ್ಟಬುದ್ಧಿ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.
- **ಡಿ. ಬನುಮಯ್ಯ ಬಾಲಕಿಯರ ಪ್ರೌಢಶಾಲೆ, ಹಿರಣ್ಮಯಿ ಪ್ರತಿಷ್ಠಾನ, ಕಾವೇರಿ ಬಳಗ :** ಹಚ್ಚೇವು ಕನ್ನಡದ ದೀಪ ಕಾರ್ಯಕ್ರಮ, ಅಧ್ಯಕ್ಷತೆ : ಡಿ. ಬನುಮಯ್ಯ ಪ್ರೌಢಶಾಲೆ ಮುಖ್ಯ ಶಿಕ್ಷಕ ಹೆಚ್.ಎಸ್. ತಿಪ್ಪೇಸ್ವಾಮಿ, ಮುಖ್ಯ ಅತಿಥಿಗಳು : ಪತ್ರಕರ್ತ ದೊಡ್ಡಹುಂಡಿ ರಾಜಣ್ಣ, ಬಹುಮಾನ ವಿತರಣೆ : ಕಲಾವಿದೆ ಡಾ. ಜಮುನಾರಾಣಿ ಮಿರ್ಲೆ, ವಿಶೇಷ ಆಹ್ವಾನಿತರು : ಮುಖ್ಯ ಶಿಕ್ಷಕರಾದ ಶ್ರೀಮತಿ ಟಿ. ಶಿವಮ್ಮ, ವಕೀಲ ಕೆ.ವಿ. ವಾಸು, ಶ್ರೀಮತಿ ಎನ್.ಕೆ. ಕಾವೇರಿಯಮ್ಮ ಅವರಿಂದ ಗೀತ ಗಾಯನ, ಪ್ರಾಸ್ತಾವಿಕ ನುಡಿ : ಹಿರಣ್ಮಯಿ ಪ್ರತಿಷ್ಠಾನ ಅಧ್ಯಕ್ಷ ಎ. ಸಂಗಪ್ಪ, ಸ್ಥಳ: ಡಿ. ಬನುಮಯ್ಯ ಬಾಲಕಿಯರ ಪ್ರೌಢಶಾಲೆ, ಬೆಳಗ್ಗೆ 11ಕ್ಕೆ.
- **ಶ್ರೀ ನಾದಬ್ರಹ್ಮ ಸಂಗೀತ ಸಭಾ :** ಸಂಜೆ 6 ರಿಂದ ವಿದುಷಿ ತನುಶ್ರೀ ಅವರಿಂದ ಭಕ್ತಿಗೀತೆಗಳು, ಸಂಜೆ 6.30 ರಿಂದ ವಿದುಷಿ ತನುಶ್ರೀ ಅವರಿಂದ ಗಮಕ ವಾಚನ, ವಿದ್ವಾನ್ ಜಿ.ಎಸ್. ಮಂಜುನಾಥ್ ಅವರಿಂದ ವ್ಯಾಖ್ಯಾನ, ಸ್ಥಳ : ಶ್ರೀ ನಾದಬ್ರಹ್ಮ ಸಂಗೀತ ಸಭಾ ಸಭಾಂಗಣ, ಜೆಎಲ್‌ಬಿ ರಸ್ತೆ.
- **ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ (ಇಂಡಿಯಾ), ಮೈಸೂರು ಸೆಂಟರ್, ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಸಿವಿಲ್ ಇಂಜಿನಿಯರಿಂಗ್ ವಿಭಾಗ, ಎಸ್‌ಕೆ ಸೂಪರ್ ಟಿಎಂಟಿ ಸ್ಟೀಲ್ :** ಕ್ಯಾಟಲಿಸ್ಟ್ 2025– ಸಿವಿಲ್ ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳಿಗೆ ಕ್ವಿಜ್ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಸೂಪರಿಂಟೆಂಡಿಂಗ್ ಇಂಜಿನಿಯರ್ ಜಿ. ಹರೀಶ್, ಗೌರವ ಅತಿಥಿಗಳು : ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ನಾಗೇಶ್ ಮಟ್ಟಸ್ವಾಮಿ, ಪ್ರಿನ್ಸಿಪಾಲ್ ಡಾ. ಬಿ. ಸದಾಶಿವೇಗೌಡ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಸ್ಥಳ: ಹೆಚ್. ಕೆಂಪೇಗೌಡ ಸ್ಪೋರ್ಟ್ಸ್ ಕಾಂಪ್ಲೆಕ್ಸ್, ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.
- **ಜೆಎಸ್‌ಎಸ್ ಮಹಿಳಾ ವಸತಿ ನಿಲಯಗಳ ಸಮುಚ್ಚಯ :** ಕನ್ನಡ ರಾಜ್ಯೋತ್ಸವ ಆಚರಣೆ, ಉದ್ಘಾಟನೆ : ನಾಟ್ಯಚಾರ್ಯ ಪ್ರೊ. ಕೆ. ರಾಮಮೂರ್ತಿರಾವ್, ಅಧ್ಯಕ್ಷತೆ : ಮುಖ್ಯ ನಿಲಯ ಪಾಲಕರಾದ ಶ್ರೀಮತಿ ಮಮತಾ ಸುರೇಶ್, ಮುಖ್ಯ ಅತಿಥಿಗಳು : ಪ್ರಿನ್ಸಿಪಾಲ್ ಡಾ. ರೇಚಣ್ಣ, ಪ್ರಾಚಾರ್ಯ ಟಿ. ಗುರುಪಾದಸ್ವಾಮಿ, ಸ್ಥಳ: ಮಂತ್ರ ಮಹರ್ಷಿ ಸಭಾಂಗಣ, ಮಧ್ಯಾಹ್ನ 3ಕ್ಕೆ.
- **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 907, ಕಥೆ ಹೇಳುವವರು: ಡಾ. ಸುಧಾ ಫಣೀಶ್, ಸಮಾಜ ಸೇವಕರು ಹಾಗೂ ಕಾರ್ಯದರ್ಶಿಗಳು, ಸಮರ್ಪಣ ಟ್ರಸ್ಟ್, ಮೈಸೂರು, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.
- **ರಾಗವೈಭವ :** ಪಂಡಿತ್ ಸಮೀರ್ ರಾವ್ ಮತ್ತು ವಿದ್ವಾನ್ ಮೈಸೂರು ಎ. ಚಂದನ್ ಕುಮಾರ್ ಅವರಿಂದ ಶಾಸ್ತ್ರೀಯ ಜುಗಲ್‌ಬಂದಿ ಸಂಗೀತ ಕಾರ್ಯಕ್ರಮ, ಪಂಡಿತ್ ಆದರ್ಶ್–ತಬಲ, ವಿದ್ವಾನ್ ಎ. ರಾಧೇಶ್–ಮೃದಂಗ, ಸ್ಥಳ: ಶ್ರೀ ರಮಾ ಗೋವಿಂದ ರಂಗ ಮಂದಿರ, ನೃಪತುಂಗ ಶಾಲೆ ಆವರಣ, ರಾಮಕೃಷ್ಣನಗರ, ಸಂಜೆ 6ಕ್ಕೆ.
- **ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರ :** ವಸುಂಧರೋತ್ಸವ, ಸಂಜೆ 6 ರಿಂದ ವಿದ್ವಾನ್ ವಿಘ್ನೇಶ್ ಈಶ್ವರ್ ಅವರಿಂದ ಕರ್ನಾಟಕ ಗಾಯನ, ವಿದ್ವಾನ್ ಹೆಚ್.ಎನ್. ಭಾಸ್ಕರ್ (ಪಿಟೀಲು), ವಿದ್ವಾನ್ ಪ್ರವೀಣ್ ಸ್ಪರ್ಶ್ (ಮೃದಂಗ), ವಿದ್ವಾನ್ ಶಮಿತ್‌ಗೌಡ, ಗೌರವ ಸಮರ್ಪಣೆ : ಡಾ. ವಿದುಷಿ ಶ್ರೀಮತಿ ಸುಕನ್ಯಾ ಪ್ರಭಾಕರ್, ಸ್ಥಳ: ವಸುಂಧರ ಭವನ, ಸರಸ್ವತಿಪುರಂ.
- **ಶ್ರೀ ರಾಮಕೃಷ್ಣ ಆಶ್ರಮ :** ಶತಮಾನೋತ್ಸವ, ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಸುವರ್ಣ ಮಹೋತ್ಸವ, ಬೆಳಗ್ಗೆ 6.15 ರಿಂದ ಅಧಿವೇಶನ–1 : ಸ್ವಾಮಿ ತದ್ಯುಕ್ತಾನಂದಜಿ ಮತ್ತು ಸ್ವಾಮಿ ಗಿರಿಜಾತ್ಮಾನಂದಜಿ ಅವರಿಂದ ಉಷಾಕೀರ್ತನೆ, ಸ್ಥಳ: ವಿವೇಕಾನಂದ ಸಭಾಂಗಣ, ಬೆಳಗ್ಗೆ 8.45 ರಿಂದ ಅಧಿವೇಶನ–2: ವಿವೇಕ ಯಾತ್ರೆ, ಸಾನ್ನಿಧ್ಯ : ರಾಮಕೃಷ್ಣ ಮಠ, ಲಖ್ನೌ ಅಧ್ಯಕ್ಷ ಸ್ವಾಮಿ ಮುಕ್ತಿನಾಥಾನಂದಜಿ, ರಾಮಕೃಷ್ಣ ಮಠ, ಕಾಮಾರಪುಕುರ ಟ್ರಸ್ಟಿ, ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ ಅಧ್ಯಕ್ಷ ಸ್ವಾಮಿ ಲೋಕೋತ್ತರಾನಂದಜಿ, ಅತಿಥಿಗಳು : ಶಾಸಕರಾದ ಕೆ. ಹರೀಶ್‌ಗೌಡ, ಟಿ.ಎಸ್. ಶ್ರೀವತ್ಸ, ವಿಧಾನ ಪರಿಷತ್ ಮಾಜಿ ಸದಸ್ಯ ಗೋ. ಮಧುಸೂದನ್, ವಿಶೇಷ ಆಹ್ವಾನಿತರು : ಶ್ರೀಮತಿ ಎಂ.ಪಿ. ನಾಗಮ್ಮ, ರೇವಣ್ಣ, ಕೃಷ್ಣ, ನಾಗಭೂಷಣ್, ಎಂ.ಎಸ್.ಕೆ.ನರಹರಿ ಬಾಬು, ಎಂ.ಡಿ. ಗೋಪಿನಾಥ್, ಎಸ್. ಬಾಲಾಜಿ; ಮಧ್ಯಾಹ್ನ 2.45 ರಿಂದ ಅಧಿವೇಶನ–3 : ಸಾನ್ನಿಧ್ಯ : ರಾಮಕೃಷ್ಣ ಮಠ, ಲಖ್ನೌ ಅಧ್ಯಕ್ಷ ಸ್ವಾಮಿ ಮುಕ್ತಿನಾಥಾನಂದಜಿ, ಮುಖ್ಯ ಅತಿಥಿಗಳು : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಅತಿಥಿಗಳು : ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್, ಬೇಲೂರು ಮಠದ ಸಹಾಯಕ ಪ್ರಧಾನ ಕಾರ್ಯದರ್ಶಿ ಸ್ವಾಮಿ ಸತ್ಯೇಶಾನಂದಜಿ, ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಭಾಷಣಕಾರರು : ರಾಮಕೃಷ್ಣ ಮಠ, ಮಂಗಳೂರು ಅಧ್ಯಕ್ಷ ಸ್ವಾಮಿ ಜಿತಕಾಮಾನಂದಜಿ, ರಾಮಕೃಷ್ಣ ಆಶ್ರಮ, ಮೈಸೂರು ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜಿ, ರಿಂಸೆ ನಿವೃತ್ತ ಪ್ರಿನ್ಸಿಪಾಲ್ ಡಾ. ವೈ.ಎನ್. ಶ್ರೀಧರ್, ರಿಂಸೆ ಹಿರಿಯ ವಿದ್ಯಾರ್ಥಿ ಎಸ್.ಬಿ. ನಿತ್ಯಾನಂದ; ಸಂಜೆ 6.30 ರಿಂದ ಅಧಿವೇಶನ–4 : ಹೊನಲು ಬೆಳಕಿನ ಪ್ರದರ್ಶನ, ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ವಿದ್ಯಾರ್ಥಿಗಳಿಂದ, ಮುಖ್ಯ ಅತಿಥಿಗಳು : ವಿತ್ತ ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್, ಅತಿಥಿಗಳು : ನೀತಿ ಆಯೋಗ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಬಿ.ವಿ.ಆರ್. ಸುಬ್ರಹ್ಮಣ್ಯಂ, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಆರ್ಥಿಕ ವಿಭಾಗದ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್, ಸ್ಥಳ: ರಾಮಕೃಷ್ಣ ಆಶ್ರಮ, ಯಾದವಗಿರಿ.
- **ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಜಾನಪದ ವಿಭಾಗ, ಕರ್ನಾಟಕ ಜಾನಪದ ಸಂಶೋಧಕರ ಸಂಘ :** ಜಾನಪದದ ನಡಿಗೆ ಶಾಲಾ ಕಾಲೇಜುಗಳ ವಿದ್ಯಾರ್ಥಿ ನಿಲಯಗಳ ಕಡೆಗೆ ಸರಣಿ ಉಪನ್ಯಾಸ ಕಾರ್ಯಕ್ರಮ, ಉದ್ಘಾಟನೆ : ಪ್ರಸಾರಾಂಗ ನಿರ್ದೇಶಕ ಪ್ರೊ. ಎಂ. ನಂಜಯ್ಯ ಹೊಂಗನೂರು, ಮುಖ್ಯ ಅತಿಥಿಗಳು: ಸಮಾಜ ಸೇವಕ ಅಹಿಂದ ಜವರಪ್ಪ, ಅಧ್ಯಕ್ಷತೆ : ನಿಲಯ ಮೇಲ್ವಿಚಾರಕ ಎ.ಎನ್. ಮಹೇಶ್, ಪ್ರಾಸ್ತಾವಿಕ ನುಡಿ : ಸಂಘದ ಅಧ್ಯಕ್ಷ ಕಲ್ಲಹಳ್ಳಿ ಕುಮಾರ್, ಸ್ಥಳ: ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ನಜರ್‌ಬಾದ್, ಸಂಜೆ 5ಕ್ಕೆ.
- **ನೃತ್ಯ ಧಾರಾ ಸಂಸ್ಥೆ :** ಸಬ್ ಜೂನಿಯರ್, ಜೂನಿಯರ್ ಹಾಗೂ ಸೀನಿಯರ್ ಹಂತ ವಿದ್ಯಾರ್ಥಿನಿಯರಿಂದ ಭರತನಾಟ್ಯ ಪ್ರದರ್ಶನ, ಅಧ್ಯಕ್ಷತೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ. ವಿ.ಎನ್., ಮುಖ್ಯ ಅತಿಥಿಗಳು : ಮೈಸೂರಿನ ಆಯಾಮ ಅಕಾಡೆಮಿ ಆಫ್ ಫೈನ್ ಆರ್ಟ್ಸ್ ನಿರ್ದೇಶಕ ಡಾ. ಶಾಂಭವಿ ಸ್ವಾಮಿ. ಎಸ್.ವಿ, ಮೈಸೂರಿನ ನೃತ್ಯ ವಿದ್ಯಾಪೀಠದ ಸಂಸ್ಥಾಪಕ–ನಿರ್ದೇಶಕ ವಿದುಷಿ ಸಿ.ಎನ್. ಅನಿತಾ, ನೃತ್ಯ ಧಾರಾ ಸಂಸ್ಥೆಯ ಕಾರ್ಯದರ್ಶಿ ಸುರೇಶ್. ಎಂ.ಬಿ ಮತ್ತು ನೃತ್ಯ ಧಾರಾ ಸಂಸ್ಥೆಯ ನಿರ್ದೇಶಕ ಕುಮಾರಿ ವಿದುಷಿ ಅಮೃತ. ಎಂ.ಎಸ್., ಸ್ಥಳ: ಕಿರು ರಂಗ ಮಂದಿರ, ಕಲಾಮಂದಿರ ಆವರಣ, ಸಂಜೆ 5.30ಕ್ಕೆ.
- **ಶ್ರೀ ಕೃಷ್ಣ ಗಾನಸಭಾ :** ಕೊಳಲು ಮಾಂತ್ರಿಕ ಟಿ.ಆರ್. ಮಹಾಲಿಂಗಂ ಅವರ ಜನ್ಮ ದಿನೋತ್ಸವ ಮತ್ತು ಕೊಳಲು ವಾದನ, ಮುಖ್ಯ ಅತಿಥಿಗಳು : ಶೃಂಗೇರಿ ಮಠದ ಆಡಳಿತಾಧಿಕಾರಿ ಹೆಚ್. ರಾಮಚಂದ್ರ, ಕಲಾವಿದರಾದ ಶ್ರೀಮತಿ ಪ್ರೊ. ರಾಮೇಶ್ವರಿ ವರ್ಮ, ವಿದ್ವಾನ್ ವಿ. ವಂಶಿಧರ್ ಅವರಿಂದ ಕೊಳಲು, ವಿದ್ವಾನ್ ಅದಿತಿ ಕೃಷ್ಣಪ್ರಕಾಶ್–ವಯೋಲಿನ್, ವಿದ್ವಾನ್ ಜಿ.ಎಸ್. ರಾಮಾನುಜಂ–ಮೃದಂಗ, ವಿದ್ವಾನ್ ಎಸ್. ಮಂಜುನಾಥ–ಘಟಂ, ಸ್ಥಳ: ಆಳ್ವಾರ್ ಕಲಾಭವನ, ಸಂಜೆ 6ಕ್ಕೆ.
- **ನರಸಿಂಹರಾಜ ಮೊಹಲ್ಲಾ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್:** ಕನ್ನಡ ರಾಜ್ಯೋತ್ಸವದ ಅಂಗವಾಗಿ ಗಾನ ಗಂಧರ್ವ ಶಶಿಧರ ಕೋಟೆ ಬೆಂಗಳೂರು ಮತ್ತು ತಂಡದವರಿಂದ ಸಂಗೀತ ಕಾರ್ಯಕ್ರಮ, ಸ್ಥಳ: ಶ್ರೀ ಪ್ರಸನ್ನ ಮಹಾಗಣಪತಿ ದೇವಸ್ಥಾನ, ಎನ್.ಆರ್. ಮೊಹಲ್ಲಾ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಪತ್ರಿಕಾ ಧ್ವನಿ– ಮೈಸೂರು ಸೀಮೆಯ ಪತ್ರಕರ್ತರ ಪರಿಚಯಾತ್ಮಕ ಕಾರ್ಯಕ್ರಮ, ಪ್ರಸ್ತುತಿ : ಹಿರಿಯ ಪತ್ರಕರ್ತರಾದ ಡಾ.ಕೂಡ್ಲಿ ಗುರುರಾಜು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಡಾ. ಪಿ.ಎಸ್. ಮುರಳೀಧರ್ ಹಾಗೂ ಟಿ.ಎನ್. ಅಶ್ವಿನಿ, ವ್ಯಾಖ್ಯಾನ–ಪ್ರೊ. ಸಿ. ನಾಗಣ್ಣ, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ಪಂಪನ ಪೆಂಪು–ಪಂಪ ಭಾರತದಿಂದಾಯ್ದ ನಾಟಕೀಯ ಪ್ರಸಂಗಗಳ ಬಾನುಲಿ ಸರಣಿ, ರಚನೆ ಹಾಗೂ ಪ್ರಸ್ತುತಿ–ಜಿ. ಶಾಂತಕುಮಾರ್, 9.30 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಂ.ಆರ್. ಸುಧಾ – ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ, ನಾಗಮಂಗಲದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಮಕ್ಕಳಿಂದ ಮೂಡಲಪಾಯ ಯಕ್ಷಗಾನದಲ್ಲಿ ಕರಿರಾಜನ ಕಥೆ, 4.00 ನಾಟಕ–ಅಂತರಾತ್ಮ ನೀಡಿದ ಕಣ್ ಬೆಳಕು, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 6.50 ಕೃಷಿರಂಗ :ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಭತ್ತದ ಬೇಸಾಯ ಕುರಿತು ಸಂವಾದ ಭಾಗವಹಿಸುತ್ತಾರೆ ಕೆ.ಆರ್. ನಗರ ತಾಲೂಕು ಮನುಗನಹಳ್ಳಿಯ ಕೃಷಿಕ ದಂಪತಿ ಜೆ.ಎಂ. ಕುಮಾರ ಮತ್ತು ತಾರಾ ಕೆ. ಎಸ್., ಪ್ರಸ್ತುತಿ–ಎನ್. ಕೇಶವಮೂರ್ತಿ, 8.00 ಸವಿನೆನಪು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಶ್ರೀಮತಿ ಆರ್. ಹರಿಣಿ – ಹಾಡುಗಾರಿಕೆ

ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಶತಮಾನೋತ್ಸವದಲ್ಲಿ 300 ಪೌರಕಾರ್ಮಿಕರಿಗೆ ನಾರಾಯಣ ಸೇವೆ

ಸಾಂಪ್ರದಾಯಿಕ ಗೌರವಪೂರ್ವಕವಾಗಿ ಹೊದಿಕೆ, ಶರ್ಟ್, ಸೀರೆ, ಟಾರ್ಚ್‌ಲೈಟ್, ಪುಸ್ತಕ, ಟವೆಲ್‌ವುಳ್ಳ ಕಿಟ್ ನೀಡಿ ಗೌರವ ಸಮರ್ಪಣೆ



ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಪೌರಕಾರ್ಮಿಕರಿಗೆ ನಾರಾಯಣ ಸೇವೆ ಕಲ್ಪಿಸಲಾಯಿತು.

ಮೈಸೂರು,ನ.21(ಜಿಎ)–ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಶತಮಾನೋತ್ಸವ'ದ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ 300 ಪೌರಕಾರ್ಮಿಕರಿಗೆ ನಾರಾಯಣ ಸೇವೆ ಮಾಡಲಾಯಿತು.

ಆಶ್ರಮದಲ್ಲಿ ನಡೆದ ನಾರಾಯಣ ಸೇವೆ ಕಾರ್ಯಕ್ರಮದಲ್ಲಿ ಪೌರಕಾರ್ಮಿಕರ ಹಣೆ ಮೇಲೆ ತಿಲಕವಿಟ್ಟು, ತಲೆ ಮೇಲೆ ಹೂ ಇರಿಸಿ ಹೊದಿಕೆ, ಶರ್ಟ್, ಸೀರೆ, ಟಾರ್ಚ್ ಲೈಟ್, ಪುಸ್ತಕ, ಟವಲ್ ಇರುವ ಕಿಟ್ ಕೊಟ್ಟು ಅಭಿನಂದಿಲಾಯಿತು.

ಈ ವೇಳೆ ಪೇಜಾವರ ಅಧೋಕ್ಷಜ ಮಠದ ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಮಾತನಾಡಿ, ದುರ್ಗುಣ ದೂರ ಮಾಡಿಕೊಂಡು ಒಳ್ಳೆ ಗುಣಗಳನ್ನು ಅಳವಡಿಸಿಕೊಂಡು ನಾರಾಯಣನ ಸೇವೆ ಮಾಡೋಣ ಎಂದರು.

ವಿವೇಕಾನಂದರು 'ವಸುದೈವ ಕುಟುಂಬಕಂ' ಎಂಬ ಭಾರತದ ಚಿಂತನೆಯನ್ನು ವಿದೇಶದಲ್ಲಿ ಬಿತ್ತಿ ಮೊಳಗಿಸಿದರು. ಆ ಚಿಂತನೆ ನಮ್ಮಲ್ಲಿ ಸದಾ ಜಾಗೃತವಾಗಿದೆ ಎಂಬುದನ್ನು ಪ್ರತಿಬಿಂಬಿಸುತ್ತ ರಾಮಕೃಷ್ಣ ಆಶ್ರಮದ ಮೈಸೂರು ಶಾಖೆಯಲ್ಲಿ ಯಾರನ್ನು ಸಮಾಜದಲ್ಲಿ ಕೊನೆ ವರ್ಗ ಎಂದು ಹೇಳುತ್ತಾರೆ. ಅವರಿಗೆ ಶತಮಾನೋತ್ಸವದ ಉತ್ಸವದ ಮೊದಲ ದಿನವೇ ನೀವೇ ಮೊದಲಿಗರು ಎಂದು ನಾರಾಯಣ ಸೇವೆ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ನಾವೆಲ್ಲರೂ ಆಸ್ತಿಕರು. ಭಗವಂತನ ಆರಾಧನೆ ಮಾಡುವವರು. ನಮ್ಮ ಕಾರ್ಯಗಳ ಹಿಂದೆ ಭಗವಂತನ ಕೃಪೆ ಇರಬೇಕಿದೆ. ಜೀವನದಲ್ಲಿ ಕೃಷ್ಣ, ಪಾರ್ಥ ಇಬ್ಬರ ಅಂಶ ಇರಬೇಕು. ಆದರೆ, ಗುಡಿ, ಗೋಪುರದಲ್ಲಿ ಭಗವಂತನನ್ನು ಆರಾಧಿಸುವುದು ನಿಜವಾದ ಪೂಜೆ ಅಲ್ಲ. ದೇವರು, ಸಮಾಜದಲ್ಲಿರುವ ಎಲ್ಲರ ಹೃದಯದಲ್ಲಿ ನೆಲೆಸಿದ್ದೇನೆ. ಎಲ್ಲರನ್ನು ಸ್ನೇಹ ಭಾವದಿಂದ ನೋಡಿದರೆ ಅದು ನಿಜವಾದ ಸೇವೆ ಎಂದರು.

ಉತ್ತಮ ಗುಣಗಳನ್ನು ಅಳವಡಿಸಿಕೊಂಡು ಕೆಟ್ಟ ಗುಣಗಳನ್ನು ದೂರ ಮಾಡಿಕೊಳ್ಳುವುದೇ ನಾರಾಯಣ ಪದದ ಅರ್ಥ. ದುರ್ಗುಣಗಳನ್ನು ನಾವು ಮನಸಿನಲ್ಲಿ ಸ್ವಚ್ಛತೆ ಮಾಡಿಕೊಳ್ಳಬೇಕು. ಅದಕ್ಕೆ ಪೌರಕಾರ್ಮಿಕರು ಉದಾಹರಣೆಯಾಗಿದ್ದು, ಪ್ರತಿ ದಿನ ಬೆಳಗ್ಗೆ ನಗರವನ್ನು ಸ್ವಚ್ಛಗೊಳಿಸುವ ಮೂಲಕ ಪಾಠ ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ದುರ್ಗುಣ ದೂರ ಮಾಡಿಕೊಡು ಒಳ್ಳೆ ಗುಣಗಳನ್ನು ಇಟ್ಟುಕೊಂಡು ನಾರಾಯಣನ ಸೇವೆ ಮಾಡೋಣ ಎಂದು ತಿಳಿಸಿದರು.

ಕಡಪದ ರಾಮಕೃಷ್ಣ ಮಿಷನ್ ಆಶ್ರಮದ ಕಾರ್ಯದರ್ಶಿ ಅನುಪಮಾನಂದಜಿ ಮಾತನಾಡಿ, ಭಾರತ ಉದ್ಧಾರ ಆಗಬೇಕಾದರೆ ಜನ ಸಾಮಾನ್ಯರು ಉದ್ಧಾರ ಆಗಬೇಕು ಎಂದು ವಿವೇಕಾನಂದರು ಹೇಳುತ್ತಿದ್ದರು. ಅಂತ ಕಾರ್ಯದಲ್ಲಿ ರಾಮಕೃಷ್ಣ ಮಿಷನ್ ತೊಡಗಿಸಿಕೊಂಡಿದೆ. ವಿದ್ಯೆಯ ಜತೆಗೆ ನಾನಾ ಸೇವಾ ಕಾರ್ಯ ಮಾಡುತ್ತಿದೆ. ನಾನು 40 ವರ್ಷದಿಂದ ಮೈಸೂರು ಆಶ್ರಮ ನೋಡುತ್ತಿದ್ದೇನೆ. ಇಲ್ಲೂ ಅಪಾರ ಸೇವಾ ಕಾರ್ಯ ನಡೆಯುತ್ತಿದೆ. ಜ್ಞಾನದಾನ ಮತ್ತು ಆಧ್ಯಾತ್ಮ ದಾನವನ್ನು ಪ್ರವಚನ ಮೂಲಕ ಮಾಡಲಾಗುತ್ತಿದೆ. ಇಲ್ಲಿನ ಸ್ವಾಮೀಜಿಗಳು ಶಾರೀರಿಕ, ಮಾನಸಿಕ, ಬೌದ್ಧಿಕವಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅನೇಕ ಸ್ವಾಮೀಗಳ ಸಮ್ಮುಖದಲ್ಲಿ ನಾರಾಯಣ ಸೇವೆ ಕಾರ್ಯಕ್ರಮ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಒಳ್ಳೆಯ ಕೆಲಸ ಮಾಡುವಾಗ ಹೇಗೆ ಅಡಚಣೆ ಬರುತ್ತದೆ ಎನ್ನುವುದಕ್ಕೆ ವಿವೇಕ ಸ್ಮಾರಕ ಉದಾರಣೆ. ಮೈಸೂರಿನಲ್ಲಿ ವಿವೇಕ ಸ್ಮಾರಕ ಆಗುತ್ತಿರುವುದೇ ನಮ್ಮ ಪುಣ್ಯ. ಧರ್ಮದ ಹಾದಿಯಲ್ಲಿ ನಡೆಯುವಾಗ ಎಷ್ಟೇ ಅಡೆತಡೆ ಇದ್ದರೂ ಒಳ್ಳೆಯದಾಗುತ್ತದೆ. ಈ ವಿಚಾರದಲ್ಲಿ ವಿರೋಧಿಸಿದವರಿಗೆ ಮುಕ್ತಿದಾನಂದಜೀ ಅವರು ಕಣ್ತೆರಿಸಿದ್ದಾರೆ. ಪೌರ ಕಾರ್ಮಿಕರ ಮೂಲಕ ದೇವರ ಸೇವೆ ಮಾಡುತ್ತಿದ್ದಾರೆ. ವಿವೇಕ ಸ್ಮಾರಕಕ್ಕೆ ನಿಮ್ಮ ಜೊತೆ ಎಲ್ಲರೂ ಒಟ್ಟಾಗಿ ನಿಲ್ಲುತ್ತೇವೆ ಎಂದು ಭರವಸೆ ನೀಡಿದರಲ್ಲದೆ, ಕರ್ತವ್ಯವೇ ದೇವರು. ಒಳ್ಳೆ ಕೆಲಸಗಳೇ ದೇವರ ಸೇವೆ ಎಂಬುದನ್ನು ಅರಿತುಕೊಂಡು ಜೀವನ ಸಾಗಿಸಿ ಎಂದು ಸಲಹೆ ನೀಡಿದರು.

ಮೈಸೂರು ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜಿ ಮಾತನಾಡಿ, ರಾಮಕೃಷ್ಣ ಆಶ್ರಮದ ಮುಖ್ಯ ಧ್ಯೇಯ ಆದರ್ಶ ಸಮಾಜ ನಿರ್ಮಾಣ. ವಿವೇಕಾನಂದರು ಭಾರತ ಪರಿವರ್ತನೆಗೆ ದುಡಿದರು. ದೇಶ ಮುಂದುವರೆಲು ಎಲ್ಲರೂ ಜಾತಿ ಸಂಕೋಲೆ ಬಿಟ್ಟು ಒಂದಾಗಬೇಕು ಎಂಬುದನ್ನು ಸ್ವಾಮಿ ವಿವೇಕಾನಂದ ತಿಳಿಸಿಕೊಟ್ಟರು. ಮೈಸೂರು ಸ್ವಚ್ಛತೆ ಕಾಪಾಡುವಲ್ಲಿ ಪೌರಕಾರ್ಮಿಕರ ಪಾತ್ರ ದೊಡ್ಡದು. ಪೌರಕಾರ್ಮಿಕರ ಕೆಲಸದ ಮೂಲಕ ಭಗವಂತನಿಗೆ ಪುಷ್ಪ ಸಮರ್ಪಿಸುತ್ತಿದ್ದಾರೆ. ಅದೇ ನಿಜವಾದ ಪೂಜೆ ಎಂದರು.

ಕಾರ್ಯಕ್ರಮದಲ್ಲಿ 100ಕ್ಕೂ ಹೆಚ್ಚು ಪೌರಕಾರ್ಮಿಕರಿಗೆ ತಿಲಕ ಇಟ್ಟು, ತಲೆ ಮೇಲೆ ಹೂ ಇರಿಸಿ ಹೊದಿಕೆ, ಶರ್ಟ್ ಪೀಸ್, ಸೀರೆ, ಟಾರ್ಚ್ ಲೈಟ್, ಪುಸ್ತಕ ಹಾಗೂ ಟವಲ್ ಒಳಗೊಂಡ ವಿಶೇಷ ಕಿಟ್ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಹಲಸೂರು ರಾಮಕೃಷ್ಣ ಮಠದ ಅಧ್ಯಕ್ಷ ಸ್ವಾಮಿ ಬೋಧಸ್ವರೂಪನಂದಜಿ, ನಗರ ಪಾಲಿಕೆ ಮಾಜಿ ಸದಸ್ಯ ಡಿ.ನಾಗಭೂಷಣ್, ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರದ ಗೌರವ ಕಾರ್ಯದರ್ಶಿ ಡಾ.ಹೆಚ್.ಸುದರ್ಶನ್, ಕನ್ನಡ ಪರಿಚಾರಕ ಅರವಿಂದ ಶರ್ಮ ಉಪಸ್ಥಿತರಿದ್ದರು.

ಶಾಲಾ ಮಕ್ಕಳ ಸಂತೆ



ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಪ್ರಾಯೋಗಿಕ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ಸಂತೆ ಕಾರ್ಯಕ್ರಮ ಆಯೋಜಿಸಲಾಗಿತ್ತು. ಸಂಸ್ಥೆಯ ಮುಖ್ಯಸ್ಥರಾದ ಗುರುಸ್ವಾಮಿ ಎಂ, ಶಿವಮೂರ್ತಿ, ಶ್ರೀಮತಿ ಕವಿತಾ ಡಿ. ಆರ್. ಮತ್ತು ಶ್ರೀಮತಿ ಸರ್ವಮಂಗಳ ಅವರು ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಈ ಕಾರ್ಯಕ್ರಮವನ್ನು ಮಕ್ಕಳಲ್ಲಿ ವ್ಯವಹಾರಿಕ ಜ್ಞಾನ, ವ್ಯಾಪಾರ ಕೌಶಲ್ಯತೆ ಮತ್ತು ಪಠ್ಯ ಚಟುವಟಿಕೆಗಳ ಜೊತೆಗೆ ಮಕ್ಕಳು ಸಂತೋಷದಾಯಕವಾಗಿ ಕಲಿಯುವಂತೆ ಪ್ರೇರೇಪಿಸಲು ಈ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ನಾಳೆ 'ಅಕ್ಷರೋ ರಕ್ಷತಿ ರಕ್ಷಿತಃ' ಚಲನಚಿತ್ರದ ಮುಹೂರ್ತ

ಮೈಸೂರು,ನ.21(ಜಿಎ)– 'ಅಕ್ಷರೋ ರಕ್ಷತಿ ರಕ್ಷಿತಃ' ಚಲನಚಿತ್ರದ ಮುಹೂರ್ತ ಕಾರ್ಯಕ್ರಮವನ್ನು ನ.23ರಂದು 10.30ಕ್ಕೆ ಜಯನಗರ 5ನೇ ಕ್ರಾಸ್‌ನ ಶ್ರೀನಿವಾಸ ದೇವಾಲಯದಲ್ಲಿ ಜರುಗಲಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಚಿತ್ರದ ನಿರ್ದೇಶಕ ರಕ್ಷಿತ್ ಮಹಾದೇವ ಈ ವಿಷಯ ತಿಳಿಸಿ, ರಾಡಿಯೂ ಪ್ರೊಡಕ್ಷನ್ ವತಿಯಿಂದ ನಿರ್ಮಾಣಗೊಳ್ಳುತ್ತಿರುವ ಅಕ್ಷರೋ ರಕ್ಷತಿ ರಕ್ಷಿತಃ ಚಿತ್ರವನ್ನು ಅತಿ ಕಡಿಮೆ ಅವಧಿಯಲ್ಲಿ ನಿರ್ಮಿಸುತ್ತಿರುವುದು ಇದರ ವಿಶೇಷ. ನಾಯಕ, ನಾಯಕಿ ನಟ ನಟಿಯರು ಯಾರೆಂಬುದರ ಬಗ್ಗೆ ಕುತೂಹಲ ಕಾಯ್ದುಕೊಂಡಿದ್ದು, ಅಂದು ಪ್ರಕಟಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಚಿತ್ರತಂಡದ ಪಂಟ ಸತೀಶ್, ವೈಭವ್, ಸೆಲ್ವಂ, ತೇಜಸ್ವಿ ತರುಣ್, ದೀಪಕ್ ಮತ್ತಿತರರು ಉಪಸ್ಥಿತರಿದ್ದರು.

ಅಗಸ್ತ್ಯ ಕ್ರೆಡಿಟ್ ಕೋಆಪರೇಟಿವ್ ಸೊಸೈಟಿಯಲ್ಲಿ 72ನೇ ಸಹಕಾರ ಸಪ್ತಾಹ, ಕನ್ನಡ ರಾಜ್ಯೋತ್ಸವ ಆಚರಣೆ

ಮೈಸೂರು, ನ. 21– ಮೈಸೂರಿನ ಕೃಷ್ಣಮೂರ್ತಿ ಪುರಂನಲ್ಲಿರುವ ಅಗಸ್ತ್ಯ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ಆವರಣದಲ್ಲಿ 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಹಾಗೂ 70ನೇ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಕನ್ನಡ ರಾಜ್ಯೋತ್ಸವದ ಜಿಲ್ಲಾ ಮಟ್ಟದ ರಾಜ್ಯೋತ್ಸವ ಪ್ರಶಸ್ತಿ ಪಡೆದ ಸದ್ವಿದ್ಯಾ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಗಳು ಹಾಗೂ ಸಂಘದ ಅಧ್ಯಕ್ಷರಾದ ಎಂ ಡಿ ಗೋಪಿನಾಥ್ ಹಾಗೂ ಬ್ರಾಹ್ಮಣ ಧರ್ಮ ಸಹಾಯ ಸಭೆಯ ಚುನಾವಣೆಯಲ್ಲಿ ಆಯ್ಕೆಯಾದ ಸಂಘದ ನಿರ್ದೇಶಕರಾದ ಎಚ್.ಎಸ್. ಪ್ರಶಾಂತ್ ತಾತಾಚಾರ್ (ಕಣ್ಣ), ಡಿಪ್ಲೋಮಾ ಇನ್ ಕೋ ಆಪರೇಟಿವ್ ಮ್ಯಾನೇಜ್‌ಮೆಂಟ್‌ನಲ್ಲಿ ಉತ್ತೀರ್ಣರಾದ ಎಸ್. ಪ್ರಿಯಾ, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿಯ ಮಾರಾಟ ಅಧಿಕಾರಿ ಮನು ಮಂಜುಳಾ ಆಗಮಿಸಿದ್ದರು.



ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಎಂ.ಎನ್.ಸೌಮ್ಯ, ಖಜಾಂಚಿ ಕೆ ನಾಗರಾಜ, ನಿರ್ದೇಶಕ ಮಂಡಲಿ ಸದಸ್ಯರಾದ ಸಿ.ವಿ.ಪಾರ್ಥಸಾರಥಿ, ಹೆಚ್.ಪಿ.ಚೇತನ್, ವಿಕ್ರಂ ಅಯ್ಯಂಗಾರ್, ಎನ್. ನಾಗಶ್ರೀ, ಕೆ.ಎನ್.ಅರುಣ್, ಶಿವರುದ್ರಪ್ಪ, ಎಸ್ ರಾಜಮ್ಮ, ಪ್ರಭಾರ ಕಾರ್ಯದರ್ಶಿ ಎನ್.ವೀಣಾ ಹಾಗೂ ಸೊಸೈಟಿ ಸದಸ್ಯರು, ಸಿಬ್ಬಂದಿ ಇನ್ನಿತರರು ಹಾಜರಿದ್ದರು.

ಇಂದು ನೈಪುಣ್ಯದಲ್ಲಿ ಕೃಷಿ ಕಾರ್ಯಕ್ರಮ

ಮೈಸೂರು,ನ.21(ಎಂಕೆ)– ಮೈಸೂರಿನ ಕನಕದಾಸ ನಗರದಲ್ಲಿರುವ ನೈಪುಣ್ಯ ಶಾಲೆಯಲ್ಲಿ ನಾಳೆ(ನ.22) ಬೆಳಗ್ಗೆ 9 ಗಂಟೆಗೆ 'ಕೃಷಿ ನೈಪುಣ್ಯ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ವಿದ್ಯಾರ್ಥಿಗಳೇ ಬೆಳೆದ ಹೂ ಮತ್ತು ತರಕಾರಿ ಮಾರಾಟ ಮತ್ತು ಪ್ರದರ್ಶನವನ್ನು ಮೈಸೂರು ಆಕಾಶವಾಣಿ ಕೃಷಿ ವಿಭಾಗದ ಸಂಯೋಜಕ ಮತ್ತು ನಿರೂಪಕ ಎನ್.ಕೇಶವ ಮೂರ್ತಿ ಉದ್ಘಾಟಿಸಲಿದ್ದಾರೆ. ತೋಟಗಾರಿಕಾ ಇಲಾಖೆ ಜಂಟಿ ನಿರ್ದೇಶಕ ಮಂಜುನಾಥ ಅಂಗಡಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮೈಸೂರಿನ ಕಾಮಟಗೇರಿಯಲ್ಲಿ ವಿಜೃಂಭಣೆಯ ಕನ್ನಡ ರಾಜ್ಯೋತ್ಸವ

ಬೆಳ್ಳಿ ರಥದಲ್ಲಿ ಭುವನೇಶ್ವರಿ ಪ್ರತಿಮೆ ಮೆರವಣಿಗೆ



ಜೈ ಭುವನೇಶ್ವರಿ ಕನ್ನಡ ಯುವಕರ ಬಳಗ ಮತ್ತು ಅಭಿವೃದ್ಧಿ ಯಶಸ್ವಿ ಮಿಲನದ ವತಿಯಿಂದ ಕನ್ನಡ ರಾಜ್ಯೋತ್ಸವ ಸಮಾರಂಭ ನಜರಾಬಾದ್‌ನ ಕಾಮಟಗೇರಿಯಲ್ಲಿ ವಿಜೃಂಭಣೆಯಿಂದ ನಡೆಯಿತು.

ಮೈಸೂರು,ನ.21(ಜಿಎ)–ಜೈ ಭುವನೇಶ್ವರಿ ಕನ್ನಡ ಯುವಕರ ಬಳಗ ಮತ್ತು ಅಭಿವೃದ್ಧಿ ಯಶಸ್ವಿ ಮಿಲನದ ವತಿಯಿಂದ 15ನೇ ವರ್ಷದ ಕನ್ನಡ ರಾಜ್ಯೋತ್ಸವ ಸಮಾರಂಭ ನಜರಾಬಾದ್ ನ ಕಾಮಟಗೇರಿಯಲ್ಲಿ ವಿಜೃಂಭಣೆಯಿಂದ ನಡೆಯಿತು.

ಭುವನೇಶ್ವರಿ ಪ್ರತಿಮೆಯುಳ್ಳ ಬೆಳ್ಳಿ ರಥದ ಮೆರವಣಿಗೆಗೆ ಪುಷ್ಪಾರ್ಚನೆಯ ಮೂಲಕ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಚಾಲನೆ ನೀಡಿದರು. ಕನ್ನಡಾಂಬೆಯ ಭವ್ಯ ಮೆರವಣಿಗೆಯೂ ನಜರಾಬಾದ್ ಪೊಲೀಸ್ ಠಾಣೆಯಿಂದ ಪ್ರಾರಂಭವಾಗಿ ನಜರಾಬಾದ್‌ನ ವಿವಿಧ ರಸ್ತೆಗಳಲ್ಲಿ ಡೊಳ್ಳು, ನಗಾರಿ ವಾದ್ಯದೊಂದಿಗೆ ಯಶಸ್ವಿಯಾಗಿ ನಡೆಯಿತು.ಕನ್ನಡ ಮಾತೆಗೆ ಜೈಕಾರ ಮೊಳಗಿತು.

ಈ ವೇಳೆ ಎಂ.ಕೆ.ಸೋಮಶೇಖರ್ ಮಾತನಾಡಿ, ಕನ್ನಡ ರಾಜ್ಯೋತ್ಸವ ಕರ್ನಾಟಕ ಮಾತ್ರವಲ್ಲದೆ ದೇಶದ ವಿವಿಧೆಡೆ, ವಿದೇಶದ ನೆಲದಲ್ಲಿಯೂ ಸಹ ಕನ್ನಡಿಗರ ಒಗ್ಗಟ್ಟು ಮತ್ತು ಸಂಘಟನೆಯಿಂದ ಅತ್ಯಂತ ಸಂಭ್ರಮ ಸಡಗರದಿಂದ ಎಲ್ಲೆಡೆ ನೆಡೆಯುತ್ತಿದೆ. ನವೆಂಬರ್ ಮಾಸ ಕನ್ನಡಿಗರ ಭಾಷಾಭಿಮಾನ ವ್ಯಕ್ತಪಡಿಸುವ, ಆರಾಧಿಸುವ ಭವ್ಯ ಕಾಲ. ಬಹುಶಃ ಒಂದು ನಾಡಿನ ಒಂದು ಭಾಷೆಯ ಹಬ್ಬವನ್ನು ಕನ್ನಡಿಗರಷ್ಟು ಉತ್ಸಾಹ,ಅಭಿಮಾನದಿಂದ ಆಚರಿಸುವವರು ಯಾರು ಇಲ್ಲ ಅನಿಸುತ್ತದೆ. ಅಷ್ಟು ಭಾವೈಕ್ಯತೆ, ಭಾಂದವ್ಯದಿಂದ ಕನ್ನಡ ರಾಜ್ಯೋತ್ಸವ ಆಚರಿಸುತ್ತಾರೆ.ಕನ್ನಡ ಭಾಷೆಗೆ ಒಂದು ಐತಿಹಾಸಿಕ ಹಿನ್ನೆಲೆ ಮತ್ತು ಮಹತ್ವವಿದೆ.ಕನ್ನಡ ಭಾಷೆಯ ಬೆಳವಣಿಗೆ, ಸಂರಕ್ಷಣೆ ಕನ್ನಡ ರಾಜ್ಯೋತ್ಸವದ ಮೂಲ ಧ್ಯೇಯವಾಗಬೇಕು. ಕನ್ನಡ ಭಾಷೆ, ಸಂಸ್ಕೃತಿ, ಪರಂಪರೆಯನ್ನು ಬೆಳೆಸುವುದು, ನಾಡಿನ ಸಾಧಕರನ್ನು ಗುರುತಿಸಿ ಅವರನ್ನು ಗೌರವಿಸಿ ಪ್ರೋತ್ಸಾಹಿಸುವುದು, ಇತಿಹಾಸ, ಸಾಂಸ್ಕೃತಿಕ ಪರಂಪರೆಯನ್ನು ಮುಂದಿನ ಪೀಳಿಗೆಗೆ ಉಳಿಸಿ ಬೆಳೆಸುವ ಸಂಕಲ್ಪವನ್ನು ಮಾಡಬೇಕಿದೆ ಎಂದರು.

ಕನ್ನಡಿಗರ ಒಗ್ಗಟ್ಟು ಮತ್ತು ನಾಡಿನ ಬಗ್ಗೆ ಹೆಮ್ಮೆಯ ಭಾವನೆಯನ್ನು ಮೂಡಿಸುವುದು ಕನ್ನಡ ಹಬ್ಬದ ಉದ್ದೇಶವಾಗಬೇಕು.ನಮ್ಮ ಕನ್ನಡದ ಶ್ರೀಮಂತ ಪರಂಪರೆಯನ್ನು ಮತ್ತಷ್ಟು ವಿಸ್ತರಿಸುವ ಕೆಲಸ ಪ್ರತಿಯೊಬ್ಬ ಕನ್ನಡಿಗನ ಜವಾಬ್ದಾರಿಯಾಗಿದೆ ಆ ದಿಸೆಯಲ್ಲಿ ಇಂದು ಯುವಕರು ಇಷ್ಟೊಂದು ಉತ್ಸಾಹ ಮತ್ತು ಸಂಭ್ರಮದ ಹಬ್ಬವನ್ನು ಮನೆ ಮನೆಯವರು ಸೇರಿ ಆಚರಿಸುತ್ತಿರುವುದು ನಿಜಕ್ಕೂ ಶ್ಲಾಘನೀಯ ಎಂದರು.


ಈ ವೇಳೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಜೈ ಭುವನೇಶ್ವರಿ ಕನ್ನಡ ಯುವಕರ ಬಳಗದ ಅಧ್ಯಕ್ಷ ರವಿನಾಯಕ್, ಅಭಿವೃದ್ಧಿ ಯಶಸ್ವಿ ಮಿಲನದ ಅಧ್ಯಕ್ಷ ಎಂ.ಪಿ. ದೀಪಕ್ ಪುಟ್ಟಸ್ವಾಮಿ, ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ನಿರ್ದೇಶಕ ಲೋಕೇಶ್ ಕುಮಾರ್ ಎಂ.ಮಾದಾಪುರ, ಕಾಂಗ್ರೆಸ್ ಅಸಂಘಟಿತ ಕಾರ್ಮಿಕರ ಘಟಕದ ಸುನೀಲ್ ನಾರಾಯಣ್, ಸುರೇಶ್ ರಾವ್, ನಿರಂಜನ್ ರಾವ್, ವರದರಾಜ್, ಜಾವೀದ್, ಜಮೀದ್, ವಿಕಾಸ್ ಸಿಂಹ, ಮಾಜಿ ನಗರಪಾಲಿಕೆ ಸದಸ್ಯ ಕುಶಾಲ್ ಕುಮಾರ್,ಮಹದೇವು, ಶ್ರೀಪಾಲ್, ಶರತ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಮಾನಸಗಂಗೋತ್ರಿ ವಿದ್ಯಾರ್ಥಿ ನಿಲಯಗಳ ಮೂಲ ಸೌಕರ್ಯ ಸುಧಾರಣೆಗೆ ಕ್ರಮ

ಖುದ್ದು ಕುಲಸಚಿವೆ ಎಂ.ಕೆ.ಸವಿತಾ ಪರಿಶೀಲನೆ: ತಕ್ಷಣ ಕ್ರಮಕ್ಕೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ



ಕುಲಸಚಿವೆ ಎಂ.ಕೆ.ಸವಿತಾ ಸಭೆ ನಡೆಸುತ್ತಿರುವುದು



ಮರದ ಕೊಂಬೆಗಳಿಗೆ ಕತ್ತರಿ

ಮೈಸೂರು, ನ.21(ವಿವಿಹೆಚ್)– ಮೈಸೂರು ವಿಶ್ವವಿದ್ಯಾನಿಲಯದ ಪದವಿ, ಸ್ನಾತಕ ಪದವಿ ಹಾಗೂ ಮಾನಸ ಗಂಗೋತ್ರಿಯಲ್ಲಿನ ವಿದ್ಯಾರ್ಥಿ ವಸತಿ ನಿಲಯಗಳಲ್ಲಿ ವಿದ್ಯುತ್, ಕುಡಿಯುವ ನೀರು ಹಾಗೂ ಶೌಚಾಲಯಗಳಂತಹ ಮೂಲ ಸೌಕರ್ಯಗಳ ಕೊರತೆಯ ಬಗ್ಗೆ 'ಮೈಸೂರು ಮಿತ್ರ'ದಲ್ಲಿ ವರದಿ ಪ್ರಕಟವಾದ ಬಳಿಕ ಎಚ್ಚೆತ್ತ ಮೈಸೂರು ವಿವಿ ಕುಲಸಚಿವರಾದ ಎಂ.ಕೆ.ಸವಿತಾ ಹಾಸ್ಟೆಲ್‌ಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಪರಿಶೀಲನೆ ವೇಳೆ ಹಲವು ಸಮಸ್ಯೆಗಳು ಬೆಳಕಿಗೆ ಬಂದಿದ್ದು, ಅವುಗಳನ್ನು ತಕ್ಷಣ ಸುಧಾರಣೆ ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳು, ಸಿಬ್ಬಂದಿಗೆ ಸೂಚನೆ ನೀಡಿದರು. ಜೊತೆಗೆ 10 ದಿನಗಳ ಗಡುವು ನೀಡಿ, ಇದರ ಒಳಗಾಗಿ ಎಲ್ಲಾ ದುರಸ್ತಿ ಕಾರ್ಯಗಳು ಪೂರ್ಣಗೊಳ್ಳಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಈ ಬಗ್ಗೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಮೈಸೂರು ವಿವಿ ಹಾಸ್ಟೆಲ್‌ಗಳ ಜತೆಗೆ ಮಹಾರಾಜ, ಯುವರಾಜ ಕಾಲೇಜುಗಳ ವಸತಿನಿಲಯಗಳಿಗೂ ತೆರಳಿ ಸಮಸ್ಯೆಗಳನ್ನು ಆಲಿಸಲಾಗಿದೆ. ತುರ್ತಾಗಿ ಬೇಕಾಗಿರುವ ಸೌಕರ್ಯಗಳನ್ನು ಒದಗಿಸುವಂತೆ ನಿರ್ದೇಶನ ನೀಡಲಾಗಿದೆ ಎಂದರು.

ಯಾವೆಲ್ಲಾ ಹಾಸ್ಟೆಲ್‌ಗಳಲ್ಲಿ ಫ್ಯಾನ್, ಕುಡಿಯುವ ನೀರು, ಶೌಚಾಲಯ, ಗೀಸರ್ ಸೇರಿದಂತೆ ಇತರೆ ರಿಪೇರಿ ಕಾಮಗಾರಿಗಳನ್ನು ತ್ವರಿತವಾಗಿ ಮಾಡುವಂತೆ ಸೂಚನೆ ನೀಡಿದ್ದೇನೆ. ಮೂಲ ಸೌಲಭ್ಯಗಳ ಶಾಶ್ವತ ಸುಧಾರಣೆಗಾಗಿ ನೀರು ಶುದ್ಧೀಕರಣ ಘಟಕಗಳ ನವೀಕರಣ, ಶೌಚಾಲಯಗಳ ದುರಸ್ತಿ ಹಾಗೂ ಭದ್ರತಾ ವ್ಯವಸ್ಥೆ ಬಲಪಡಿಸುವ ಕೆಲಸಗಳಿಗೆ ಆದ್ಯತೆ ನೀಡಲಾಗುತ್ತಿದೆ ಎಂದರು.

ಆರ್ ಓ ಪ್ಲಾಂಟ್, ಬೀದಿ ದೀಪಗಳ ಅಳವಡಿಕೆ: ಕ್ಯಾಂಪಸ್‌ನಲ್ಲಿ ವಿದ್ಯುತ್ ದೀಪದ ಸಮಸ್ಯೆ ಇತ್ಯರ್ಥಕ್ಕೆ ಸಂಬಂಧಿಸಿದಂತೆ ಖಾಸಗಿ ಸಹಭಾಗಿತ್ವದಲ್ಲಿ ಯೋಜನೆ ಸಿದ್ಧಪಡಿಸಿ ಒಡಂಬಡಿಕೆ ಮಾಡಿಕೊಳ್ಳಲು ಮುಂದಾಗಿದ್ದೆವು. ಆದರೆ, ಚಳಿಗಾಲವಾದ್ದರಿಂದ ಸಂಜೆ ವೇಳೆ ಬೇಗನೆ ಕತ್ತಲು ಆವರಿಸುತ್ತಿರುವ ಹಿನ್ನೆಲೆಯಲ್ಲಿ ಸಮಸ್ಯೆ ಅರಿತು ವಿವಿಯೇ ವಿದ್ಯುತ್ ದೀಪಗಳ ದುರಸ್ತಿಗೆ ಮುಂದಾಗಿದೆ. ಗಂಗೋತ್ರಿಯಲ್ಲಿ ತುರ್ತಾಗಿ 90 ಬೀದಿ ದೀಪಗಳನ್ನು ಅಳವಡಿಸಲಾಗುತ್ತಿದೆ. ವಿದ್ಯುತ್ ಕಂಬಗಳ ಮೇಲೆ ಬಾಗಿರುವ ಮರದ ಕೊಂಬೆಗಳನ್ನು ಕಟಾವು ಮಾಡುವ ಕೆಲಸ ನಡೆಯುತ್ತಿದ್ದು, ಕ್ಯಾಂಪಸ್ ಆರ್‌ಓ ಪ್ಲಾಂಟ್‌ಗಳ ನಿರ್ವಹಣೆಗೆ ಟೆಂಡರ್ ಕರೆಯಲಾಗಿದೆ ಎಂದು ತಿಳಿಸಿದರು.

> ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗುವ ಎಲ್ಲಾ ಮೂಲ ಸೌಕರ್ಯಗಳನ್ನು ವಿವಿ ಒದಗಿಸಿಕೊಡುತ್ತದೆ. ವಿದ್ಯಾರ್ಥಿಗಳು, ಸಂಬಂಧಪಟ್ಟ ಅಧಿಕಾರಿಗಳು ಮೇಲುಸ್ತುವಾರಿ ವಹಿಸಿ ಅವುಗಳನ್ನು ಜವಾಬ್ದಾರಿಯಿಂದ ಕಾಪಾಡಿಕೊಂಡು ಹೋಗಬೇಕು. ಸಂಪನ್ಮೂಲ ಸಂರಕ್ಷಣೆ ಪ್ರತಿಯೊಬ್ಬರ ಹೊಣೆ.
> - ಎಂ.ಕೆ.ಸವಿತಾ, ಕುಲಸಚಿವರು (ಆಡಳಿತ), ಮೈಸೂರು ವಿವಿ.

ಹಳೇ ವಿದ್ಯಾರ್ಥಿಗಳ ತೆರವಿಗೆ ಕ್ರಮ: ವಿವಿ ವಿದ್ಯಾರ್ಥಿ ನಿಲಯಗಳಲ್ಲಿ ನಿಯಮ ಉಲ್ಲಂಘಿಸಿ ಹೆಚ್ಚುವರಿ ವಾಸಿಸುವ ಹಳೇ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿದೆ. ಇದರಿಂದ ಶೈಕ್ಷಣಿಕ ವಾತಾವರಣವೇ ಹಾಳಾಗುತ್ತದೆ. ಇಲ್ಲಿಯವರೆಗೆ ಇದ್ದವರೆಲ್ಲಾ ತಕ್ಷಣವೇ ಹಾಸ್ಟೆಲ್ ತೊರೆಯಬೇಕು. ಈ ಸಂಬಂಧ ಎಲ್ಲಾ ನಿಲಯಗಳ ನಿಲಯ ಪಾಲಕರಿಗೆ, ಡೀನ್ ಅವರಿಗೆ ಸೂಚನೆ ನೀಡಲಾಗಿದ್ದು, ಹಳೇ ವಿದ್ಯಾರ್ಥಿಗಳನ್ನು ಗುರುತಿಸಿ, ತಕ್ಷಣ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದು. ವಿದ್ಯಾರ್ಥಿಗಳ ಕಲ್ಯಾಣ ಮುಖ್ಯವಾದರೂ, ಹಾಸ್ಟೆಲ್ ಸಾಮರ್ಥ್ಯಕ್ಕಿಂತ ಮೀರಿದ ವಾಸವನ್ನು ಅನುಮತಿಸಲಾಗುವುದಿಲ್ಲ. ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.



ಗೀಸರ್ ರಿಪೇರಿ ಮಾಡುತ್ತಿರುವುದು


ಸ್ವಚ್ಛತೆಯೆಡೆಗೆ ಗಂಗೋತ್ರಿ ನಡಿಗೆ: ಮೈಸೂರು ವಿವಿ ವ್ಯಾಪ್ತಿಗೆ ಒಳಪಡುವ ಎಲ್ಲಾ ಹಾಸ್ಟೆಲ್ ಸ್ವಚ್ಛತೆ ನಿರ್ವಹಣೆಯಲ್ಲಿ ಪದೇ ಪದೇ ದೂರುಗಳು ದಾಖಲಾಗುತ್ತಿರುವ ಹಿನ್ನೆಲೆಯಲ್ಲಿ ವಿವಿ ಒಳಗೊಂಡಂತೆ ವಿದ್ಯಾರ್ಥಿಗಳು ಸೇರಿ ತಿಂಗಳಿಗೊಮ್ಮೆ ತಮ್ಮ-ತಮ್ಮ ಹಾಸ್ಟೆಲ್ ಹಾಗೂ ಸುತ್ತಮುತ್ತಲ ವಾತಾವರಣವನ್ನು ಸ್ವಚ್ಛಗೊಳಿಸುವ ಕಾರ್ಯಕ್ರಮವನ್ನು ಆಯೋಜಿಸಲಾಗುವುದು. ಈ ಬಗ್ಗೆ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ ನಿರ್ಧರಿಸಲಾಗುವುದು ಎಂದರು.

ವಿವಿಯ ಈ ನೂತನ ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳು ಕೈ ಜೋಡಿಸಬೇಕು. ಸ್ವಚ್ಛತೆಯನ್ನು ನಾವು ಮಾತ್ರವಲ್ಲ ವಿದ್ಯಾರ್ಥಿಗಳು ಕಾಪಾಡಿಕೊಳ್ಳಬೇಕು. ಆ ಮೂಲಕ ನಮ್ಮ ಶತಮಾನಗಳ ಇತಿಹಾಸದ ವಿವಿಯನ್ನು ಕಾಪಾಡಿಕೊಂಡು ಮುಂದಿನ ಪೀಳಿಗೆಗೆ ಬಳುವಳಿಯಾಗಿ ನೀಡಬೇಕು ಎಂದು ಹೇಳಿದರು.

ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಸಿಹಿ ನೀರಿನ ವ್ಯವಸ್ಥೆಗೆ ಕ್ರಮ: ಮೈಸೂರು ವಿವಿ ಶತಮಾನಗಳಿಂದಲೂ ಕೊಳವೆ ಬಾವಿ ನೀರಿನ ನೆರವಿನಿಂದ ವಿವಿ ಹಾಸ್ಟೆಲ್‌ಗಳನ್ನು ನಡೆಸುತ್ತಾ ಬರಲಾಗಿದೆ. ಕೊಳವೆ ಬಾವಿ ನೀರು ಉಪ್ಪಿನಿಂದ ಕೂಡಿದ್ದು, ಆರ್ ಓ ಪ್ಲಾಂಟ್, ಗೀಸರ್, ಪೈಪ್‌ಗಳಲ್ಲಿ ಉಪ್ಪು ಶೇಖರಣೆಯಾಗಿ ನೀರು ಬರದಂತೆ ತಡೆಯುತ್ತಿದೆ. ಇದಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಎಂಸಿಸಿ(ಮೈಸೂರು ಮಹಾನಗರ ಪಾಲಿಕೆ) ಜೊತೆ ಮಾತನಾಡಿ, ಹಾಸ್ಟೆಲ್‌ಗಳಿಗೂ ಸಿಹಿ ನೀರಿನ ವ್ಯವಸ್ಥೆ ಮಾಡುವ ಕೆಲಸ ಮಾಡಲಾಗುವುದು. ಈ ಕೆಲಸ ವಿವಿ ಮಟ್ಟದಲ್ಲಿ ಆಗುವುದಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರು, ಕಾವೇರಿ ನಿಗಮ, ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಚರ್ಚಿಸಿ, ಅನುಮೋದನೆ ಪಡೆದ ಕೂಡಲೇ, ಡಿಪಿಆರ್ ಕರೆದು, ಪಾಲಿಕೆ ನಿರ್ದೇಶನದಂತೆ ಸಿಹಿ ನೀರಿನ ವ್ಯವಸ್ಥೆಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಹೇಳಿದಂತೆ ರಾಜಕೀಯ ಸೇವೆ ಹೊರತು ಉದ್ಯೋಗವಲ್ಲ

2028ಕ್ಕೆ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ; ಕುಮಾರಣ್ಣ 5 ವರ್ಷ ಸಿಎಂ: ಸಾ.ರಾ.ಮಹೇಶ್



ಕೆ.ಆರ್.ನಗರದಲ್ಲಿ ನಡೆದ ಜೆಡಿಎಸ್ ಪಕ್ಷದ ಬೆಳ್ಳಿ ಹಬ್ಬ ಸಂಭ್ರಮಾಚರಣೆಯಲ್ಲಿ ಸಾ.ರಾ.ಮಹೇಶ್ ಅವರನ್ನು ಅಭಿನಂದಿಸಲಾಯಿತು.

> ಹಾಲಿನಿಂದ ಆಲ್ಕೋಹಾಲ್‌ವರೆಗೆ ಬೆಲೆ ಏರಿಕೆ ಮಾಡಿದ್ದಿರಿ. ರಾಜ್ಯದ ಜನರ ಮೇಲೆ ಸಾಲ ಹೊರಿಸಿದ್ದೀರಿ. ಪ್ರಸ್ತುತ ಆರು ಲಕ್ಷ ಕೋಟಿ ಸಾಲ ಇದ್ದು ಇದರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಾಡಿದ ಸಾಲ ನಾಲ್ಕೂವರೆ ಲಕ್ಷ ಕೋಟಿ.
> –ಸಾ.ರಾ ಮಹೇಶ್

ಕೆ.ಆರ್.ನಗರ: ಡಾ.ಬಿ.ಆರ್.ಅಂಬೇಡ್ಕರ್ ಹೇಳಿದಂತೆ ರಾಜಕೀಯ ಸೇವೆ ಹೊರತು ಉದ್ಯೋಗವಲ್ಲ, ಇದನ್ನು ಅರಿತು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ತಮ್ಮ ಜೀವನಪೂರ್ತಿ ದೇಶ ಮತ್ತು ನಾಡಿನ ಹೋರಾಟ ಸೇವೆ ಮಾಡುವ ಮೂಲಕ ಮಾದರಿ ರಾಜಕಾರಣಿಯಾಗಿದ್ದಾರೆ ಎಂದ ಮಾಜಿ ಸಚಿವ ಹಾಗೂ ರಾಜ್ಯ ಜೆಡಿಎಸ್ ಕಾರ್ಯಾಧ್ಯಕ್ಷ ಸಾ.ರಾ.ಮಹೇಶ್ 2028ಕ್ಕೆ ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರಕ್ಕೆ ಅಧಿಕಾರಕ್ಕೆ ಬರಲಿದ್ದು ಹೆಚ್.ಡಿ.ಕುಮಾರಸ್ವಾಮಿ 5ವರ್ಷಗಳ ಕಾಲ ಮುಖ್ಯಮಂತ್ರಿಗಳಾಗಿ ಕಾರ್ಯ ನಿರ್ವಹಿಸಲಿದ್ದಾರೆ ಎಂದರು.

ಪಟ್ಟಣದ ಬಸವೇಶ್ವರ ಬಡಾವಣೆಯ ಜೆಡಿಎಸ್ ಕಚೇರಿಯಲ್ಲಿ ನಡೆದ ಜೆಡಿಎಸ್ ಪಕ್ಷದ 25ನೇ ವರ್ಷ ಬೆಳ್ಳಿ ಹಬ್ಬದ ಸಂಭ್ರಮಾಚರಣೆ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ತಮ್ಮ ಸುದೀರ್ಘ ರಾಜಕೀಯದಲ್ಲಿ ಏಳು ಬೀಳು ಎಲ್ಲವನ್ನೂ ಕಂಡಿದ್ದಾರೆ ಕೆಆರ್.ನಗರ ಪಟ್ಟಣಕ್ಕೆ ರೈಲು ಮಾರ್ಗ ವಿಸ್ತರಿಸಿದರಲ್ಲದೆ ನೀರಾವರಿ ಮಂತ್ರಿಯಾಗಿ ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕಿನಲ್ಲಿ ಹೇಮಾವತಿ ನಾಲೆ ನಿರ್ಮಿಸಿ ನೀರು ಹರಿಸುವ ಮೂಲಕ ಈ ಭಾಗದ ಅನ್ನದಾತರ ಕೈ ಹಿಡಿದಿದ್ದಾರೆ ಎಂದರು.

ಮುಂಬರುವ 2028ರ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬರಲಿದ್ದು, ನಮ್ಮ ನಾಯಕರಾದ ಹೆಚ್.ಡಿ.ಕುಮಾರಸ್ವಾಮಿ ಅವರು ಐದು ವರ್ಷ ಮುಖ್ಯಮಂತ್ರಿಯಾಗುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲವೆಂದು ಭವಿಷ್ಯ ನುಡಿದರು.

ದೇಶದಲ್ಲಿ ನರೇಂದ್ರಮೋದಿ ಮತ್ತು ಮಾಜಿ ಹೆಚ್.ಡಿ.ದೇವೇಗೌಡರ ಅವರ ನಾಯಕತ್ವ ಅದೇ ರೀತಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಹೆಚ್ ಡಿ.ಕುಮಾರಸ್ವಾಮಿ ರಾಜ್ಯದಲ್ಲಿ ಯುವ ನಾಯಕರಾದ ಬಿ.ವೈ.ವಿಜಯೇಂದ್ರ, ನಿಖಿಲ್ ಕುಮಾರ ಸ್ವಾಮಿ ಅವರ ಯುವ ನಾಯಕತ್ವ ಜೊತೆಗೆ ನಮಗೆ ಹೆಚ್.ಡಿ. ಕುಮಾರಸ್ವಾಮಿಯವರ ಮಾರ್ಗದರ್ಶನ ಇದ್ದು ಅದಕ್ಕಿಂತ ಇನ್ನೇನು ಬೇಕೆಂದರು.

ಶಾಸಕ ಡಿ.ರವಿಶಂಕರ್ ವಿರುದ್ಧ ಗುಡುಗು: ಓಟ್, ಊಟ, ಆರತಿ ಎತ್ತಿದ ಪುಣ್ಯಾತ್ಮರು ಕ್ಷೇತ್ರದ ಜನರು, ಅವರಿಗೆ ಮೋಸ ಮಾಡಬೇಡಿ, ಪ್ರಾಮಾಣಿಕತೆ ಬಹಳ ಮುಖ್ಯ ಹಣದಾಸೆಗೆ ಅಧಿಕಾರಿಗಳನ್ನು ವರ್ಗಾವಣೆ ಮಾಡಿಸಿಕೊಂಡು ಅವರಿಂದ ಹಣ ವಸೂಲಿ ಮಾಡಿದರೆ ಅಧಿಕಾರಿಗಳು ಕ್ಷೇತ್ರದ ಜನರ ಬಳಿನೇ ವಸೂಲಿ ಮಾಡೋದು ಇದು ಸರಿಯಲ್ಲ ಎಂದು ಶಾಸಕ.ಡಿ.ರವಿಶಂಕರ್ ವಿರುದ್ಧ ಗುಡುಗಿದರು.

ಇವತ್ತು ನಾಡಿನ ಬಡ ಜನರ ಆರೋಗ್ಯದ ಆಸ್ಪತ್ರೆಯ ಬಿಲ್ ಹಣ ಕೊಡಲು ಮುಖ್ಯಮಂತ್ರಿ ಪರಿಹಾರ ನಿಧಿಯಲ್ಲಿ ಹಣವಿಲ್ಲ, ರಾಜ್ಯದ ಸಿದ್ದರಾಮಯ್ಯನವರ ಸರ್ಕಾರ ಬರ್ಬಾತ್ ಆಗಿದೆ ಎಂದು ರಾಜ್ಯ ಸರ್ಕಾರದ ವಿರುದ್ಧ ಸಾ.ರಾ.ಮಹೇಶ್ ವಾಗ್ದಾಳಿ ನಡೆಸಿದರು.

ಹೃದಯ ಸಂಬಂಧಿ ಕಾಯಿಲೆಗೆ, ಕ್ಯಾನ್ಸರ್ ಪೀಡಿತರಿಗೆ ಹಾಗೂ ಕಿಡ್ನಿ ಅಂತಹ ಮಾರಣಾಂತಿಕ ಕಾಯಿಲೆಗಳ ರೋಗಗಳಿಗೆ ಮುಖ್ಯಮಂತ್ರಿಗಳ ನಿಧಿಯಿಂದ ಪರಿಹಾರದ ಹಣ ಕೊಡಲು ಸಾಧ್ಯವಾಗಿಲ್ಲ, ಈ ನಿಧಿಗೆ ಸರ್ಕಾರದ ಅಧೀನದಲ್ಲಿ ಕಾರ್ಯನಿರ್ವಹಿಸುವ ಅಂಗ ಸಂಸ್ಥೆಗಳ ಮೂಲಕ ಹಣ ಹರಿದು ಬರುತ್ತಿತ್ತು. ಆದರೆ, ಸರ್ಕಾರದ ಬಿಲ್ ಹಣಕ್ಕೆ ಆ ಹಣವನ್ನು ವರ್ಗಾವಣೆ ಮಾಡಿಕೊಂಡು ಬಡ ಜನರ ಆರೋಗ್ಯದ ಪರಿಹಾರ ಹಣಕ್ಕೂ ಕನ್ನಹಾಕಿದರಲ್ಲ ಎಷ್ಟರ ಮಟ್ಟಿಗೆ ಸರಿ ಎಂದು ಪ್ರಶ್ನೆ ಮಾಡಿದರು.

ರಾಜ್ಯ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ತಾಲೂಕು ಮಾಜಿ ಪ್ರಧಾನ ಕಾರ್ಯದರ್ಶಿ ಅರ್ಜುನಹಳ್ಳಿ ಗಣೇಶ್, ತಾಲೂಕು ಅಧ್ಯಕ್ಷ ಎಚ್.ಸಿ.ಕುಮಾರ್, ತಾಲೂಕು ಜಾದಳ ವಕ್ತಾರ ಕೆಎಲ್.ರಮೇಶ್, ಯುವ ಜೆಡಿಎಸ್ ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ಕಗ್ಗರೆ ಕುಚೇಲ, ಯುವ ಘಟಕದ ಅಧ್ಯಕ್ಷ ಡಿ.ವಿ.ಗುಡಿ ಯೋಗೇಶ್, ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ದಾಕ್ಷಾ ಯಿಣಿ, ತಾಲೂಕು ಘಟಕದ ಅಧ್ಯಕ್ಷೆ ರಾಜ ಲಕ್ಷ್ಮಿ, ದಲಿತ ಮುಖಂಡ ಹಸನೋಗೆ ನಾಗರಾಜ್, ತಾಪಂ ಮಾಜಿ ಸದಸ್ಯರಾದ ಹಂಗರಬಾಯನಹಳ್ಳಿ ತಮ್ಮಣ್ಣ, ನಾಗಣ್ಣ, ಪುರಸಭೆ ಮಾಜಿ ಸದಸ್ಯರಾದ ಕೆ.ಉಮೇಶ್, ಕೆ.ಪಿ.ಪ್ರಭುಶಂಕರ್, ಸಂತೋಷ್ ಗೌಡ, ಸರೋಜಮ್ಮ, ಮಂಜುಳ ಚಿಕ್ಕವೀರು, ಮಾಜಿ ಸದಸ್ಯ ರಾಜ ಶ್ರೀಕಾಂತ್, ಬಾರ್ ಶಿವ ಕುಮಾರ್, ಕೆ.ಬಿ.ಸುಬ್ರಹ್ಮಣ್ಯ, ಜೆಡಿಎಸ್ ಮುಖಂಡರಾದ ಗಂಧನಹಳ್ಳಿ ಜಲೇಂದ್ರ, ಅನೀಪ್‌ಗೌಡ, ಡೈರಿಮಹೇಶ್, ವಡ್ಡರಕೊಪ್ಪಲು ಶ್ರೀಧರ್, ಸಾ.ರಾ.ಸ್ನೇಹ ಬಳಗದ ದೀಪು, ವಡ್ಡರವಿ, ಭಾಗ್ಯಲಕ್ಷ್ಮಿ, ಮೋಹನ ಕುಮಾರಿ, ರೂಪ, ರೀಚಾ, ಬಾಲಾಜಿ ಗಣೇಶ್, ಸಾತಿಗ್ರಾಮ ಶಂಕರ್, ನಾಗಣ್ಣ, ಮುಭಾರಕ್, ಚೌಕಳ್ಳಿ ಆನಂದ್, ಹೆಬ್ಬಾಳು ಶಿವಣ್ಣ, ಕಂಚಗಾರ ಕೊಪ್ಪಲು ದೇವೇಂದ್ರ, ದೇವು, ಮಂಚನಹಳ್ಳಿ ಮಂಜುನಾಥ್ ಸೇರಿದಂತೆ ಅನೇಕರು ಇದ್ದರು.

ನಿರಪರಾಧಿಯನ್ನು ಗಡಿಪಾರು ಮಾಡಿರುವುದು ಸರಿಯಲ್ಲ

ತಿ.ನರಸೀಪುರ ಒಕ್ಕಲಿಗರ ಮುಖಂಡರ ಸಭೆಯಲ್ಲಿ ಖಂಡನೆ



ಒಕ್ಕಲಿಗ ಮುಖಂಡರ ಸಭೆಯಲ್ಲಿ ಮೆಲ್ಲಹಳ್ಳಿ ಮಹದೇವಸ್ವಾಮಿ ಮಾತನಾಡಿದರು.

ತಿ.ನರಸೀಪುರ, ನ.21– ಪಟ್ಟಣದ ಪೊಲೀಸ್ ಅಧಿಕಾರಿಗಳು ನಿರಪರಾಧಿ ಒಕ್ಕಲಿಗ ಮುಖಂಡರೊಬ್ಬರನ್ನು ಟಾರ್ಗೆಟ್ ಮಾಡಿ ಗಡಿಪಾರಿಗೆ ಆದೇಶ ಮಾಡಿಸಿರುವುದು ಅತ್ಯಂತ ಖಂಡನೀಯ ಎಂದು ಪಡುವಾರಹಳ್ಳಿ ಗ್ರಾಮಾಭ್ಯುದಯ ಟ್ರಸ್ಟ್ ಅಧ್ಯಕ್ಷರೂ ಹಾಗು ಬಿಜೆಪಿ ಮುಖಂಡರೂ ಆದ ಮೆಲ್ಲಹಳ್ಳಿ ಮಹದೇವಸ್ವಾಮಿ ಗಂಭೀರ ಆರೋಪ ಮಾಡಿದರು.

ತಿರುಮಕೂಡಲಿನ ಆದಿ ಚುಂಚನಗಿರಿ ರಜತೋತ್ಸವ ಭವನದಲ್ಲಿ ಒಕ್ಕಲಿಗ ಮುಖಂಡರು ಕರೆದಿದ್ದ ಸಭೆಯಲ್ಲಿ ಮಾತನಾಡಿದ ಅವರು ತಿರುಮಕೂಡಲು ಗ್ರಾಮದ ಮಣಿಕಂಠರಾಜ ಗೌಡ ಸೇವಾ ಶ್ರಯ ಫೌಂಡೇಶನ್ ಸಂಸ್ಥಾಪಕರಾಗಿದ್ದು, ಸಾರ್ವಜನಿಕವಾಗಿ ಎಲ್ಲಾ ಸಮಾಜದ ಮುಖಂಡರೊಂದಿಗೆ ಹೊಂದಾಣಿಕೆ ಹಾಗು ಸಹಕಾರ ಮನೋಭಾವನೆಯೊಂದಿಗೆ ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಇದನ್ನು ಸಹಿಸದೇ ಅವರ ಮೇಲೆ ಇಲ್ಲ ಸಲ್ಲದ ಆರೋಪ ಹೊರಿಸುವ ಮೂಲಕ ಗಡಿಪಾರು ಮಾಡಿದೆ ಎಂದರು.

ಕಾಂಗ್ರೆಸ್ ಸರ್ಕಾರ ಒಕ್ಕಲಿಗ ಮುಖಂಡರನ್ನು ಟಾರ್ಗೆಟ್ ಮಾಡುವ ಕೆಲಸಕ್ಕೆ ಮುಂದಾಗಿದ್ದು, ಮೈಸೂರು ಜಿಲ್ಲಾ ಒಕ್ಕಲಿಗರು ಎಚ್ಚೆತ್ತುಕೊಳ್ಳಬೇಕಿದೆ. ಈ ಕೂಡಲೇ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾ ಎಸ್‌ಪಿ ಹಾಗು ಜಿಲ್ಲಾಧಿಕಾರಿಗಳು ಒಕ್ಕಲಿಗ ಮುಖಂಡನ ಗಡಿಪಾರು ಆದೇಶದ ವಿಚಾರದಲ್ಲಿ ಸೂಕ್ಷ್ಮವಾಗಿ ಪೋಲೀಸ್ ಇಲಾಖೆಯ ಕಾರ್ಯವೈಖರಿಯನ್ನು ಪರಿಶೀಲನೆ ಮಾಡಬೇಕು ಹಾಗು ಗಡಿಪಾರು ಮಾಡಿರುವ ಆದೇಶವನ್ನು ರದ್ದು ಮಾಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಲಾರಿ ಮಾಲೀಕರ ಸಂಘದ ತಾಲೂಕು ಅಧ್ಯಕ್ಷ ಹೆಚ್.ರವಿ, ಕೆಂಪೇಗೌಡ ಯುವ ಬಳಗದ ಅಧ್ಯಕ್ಷ ಸಿ.ಸುನೀಲ್ ಮಾತನಾಡಿದರು. ಈ ವೇಳೆ ನಜರ್ ಬಾದ್ ಪ್ರಕಾಶ್, ಮಾಜಿ ಕಾಂಗ್ರೆಸ್ ತಾಲೂಕು ಅಧ್ಯಕ್ಷ ಎಲ್.ಮಹದೇವಪ್ಪ, ಜೆಡಿಎಸ್ ಟೌನ್ ಅಧ್ಯಕ್ಷ ಬಾಳೆಎಲೆ ಕುಮಾರ್, ಕೇಬಲ್ ಮಣಿಕಂಠ, ಗೌತಮ್, ಬಿ.ಆನಂದ್, ಸಿ.ರಮೇಶ್ , ಡೈರಿ ಬಾಬು, ಬಸ್ ಸ್ವಾಮಿಗೌಡ, ತಿರುಮಕೂಡಲು ನಾಗಣ್ಣ,ಯುವ ಮುಖಂಡ ಈಶ್ವರ್, ಅಂಬರೀಶ್ ಹಾಜರಿದ್ದರು.

ಹುಲ್ಲಹಳ್ಳಿ ಬಳಿ ಬೈಕಿನಿಂದ ಬಿದ್ದು ಯುವಕ ಸಾವು



ಮಲ್ಕುಂಡಿ: ಬೈಕಿನಿಂದ ಬಿದ್ದು ಯುವಕ ಸಾವನ್ನಪ್ಪಿರುವ ಘಟನೆ ಹುಲ್ಲಹಳ್ಳಿ ಸಮೀಪದ ಕಂಬದ ಕೊಲಿ ಬಳಿ ಗುರುವಾರ ಸಂಭವಿಸಿದೆ.

ನಂಜನಗೂಡು ತಾಲೂಕಿನ ಶಿರಮಳ್ಳಿ ಗ್ರಾಮದ ಮಾದೇಶ್ (20) ದುರಂತದಲ್ಲಿ ಸಾವನ್ನಪ್ಪಿದ ದುರ್ದೈವಿ.

ತನ್ನ ಬೈಕಿನಲ್ಲಿ ನಂಜನಗೂಡು ಕಡೆಯಿಂದ ಹುಲ್ಲಹಳ್ಳಿ ಗ್ರಾಮಕ್ಕೆ ಬರುತ್ತಿದ್ದ ವೇಳೆ ನಿಯಂತ್ರಣ ತಪ್ಪಿ ಕೆಳಗೆ ಬಿದ್ದಾಗ ತಲೆ ಭಾಗಕ್ಕೆ ಪೆಟ್ಟು ಬಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಸ್ಥಳಕ್ಕೆ ಹುಲ್ಲಹಳ್ಳಿ ಪೊಲೀಸ್ ಠಾಣೆಯ ಪಿಎಸ್ಐ ಚೇತನ್ ಕುಮಾರ್ ಭೇಟಿ ನೀಡಿ ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಶವವನ್ನು ನಂಜನಗೂಡಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ನಂತರ ವಾರಸುದಾರರಿಗೆ ಹಸ್ತಾಂತರಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ನಂ.ಗೂಡು ದೇವಸ್ಥಾನದಲ್ಲಿ ಭಾರೀ ಭ್ರಷ್ಟಾಚಾರ, ಭಕ್ತರ ಓಡಾಟಕ್ಕೆ ಅಡ್ಡಿ

ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ್ ವಾಗ್ದಾಳಿ



ಶಾಸಕರಾದ ದರ್ಶನ್ ಹಾಗೂ ಯತೀಂದ್ರ ಅವರ ಅಧ್ಯಕ್ಷತೆಯಲ್ಲಿ ತ್ರೈಮಾಸಿಕ ಕೆಡಿಬಿ ಸಭೆ ನಡೆಯಿತು.

ನಂಜನಗೂಡು: ನಗರದ ಶ್ರೀಕಂಠೇಶ್ವರ ದೇವಾಲಯದ ಮಳಿಗೆಗಳಲ್ಲಿ ವ್ಯಾಪಾರಿಗಳು ತಮ್ಮ ವ್ಯಾಪ್ತಿ ಮೀರಿ ಮಳಿಗೆಯ ಹೊರಗೆ ವಸ್ತುಗಳನ್ನು ಇಟ್ಟುಕೊಂಡು ಭಕ್ತರ ಓಡಾಟಕ್ಕೆ ತೊಂದರೆ ಕೊಡುತ್ತಿದ್ದಾರೆ, ದೇವಾಲಯದಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿರುವ ಬಗ್ಗೆ ದೂರುಗಳು ಬಂದಿವೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ದೇವಾಲಯದ ಇಒ ಜಗದೀಶ್ ಕುಮಾರ್ ಅವರನ್ನು ತರಾಟೆ ತೆಗೆದುಕೊಂಡರು.

ನಗರದ ತಾ.ಪಂ. ಕಚೇರಿ ಸಭಾಂಗಣದಲ್ಲಿ ಶುಕ್ರವಾರ ನಡೆದ ತ್ರೈಮಾಸಿಕ ಕೆಡಿಬಿ ಸಭೆಯಲ್ಲಿ ಅವರು ಮಾತನಾಡಿದರು.

ಪ್ರತಿ ಬಾರಿ ಸಭೆಯಲ್ಲಿ ನಿಮಗೆ ಒಳ್ಳೆ ಮಾತಲ್ಲಿ ಹೇಳಿ ಸಾಕಾಗಿದೆ, ನಿಮಗೆ ಯಾವ ಭಾಷೆಯಲ್ಲಿ ಹೇಳಬೇಕು, ನಿಮಗೆ ಕೆಲಸ ಮಾಡಲು ಇಷ್ಟವಿಲ್ಲದಿದ್ದರೆ ಹೇಳಿ ವ್ಯವಸ್ಥೆ ಮಾಡೋಣ ಎಂದು ವಾಗ್ದಾಳಿ ನಡೆಸಿ ದೇವಾಲಯದ ಇಒಗೆ ವ್ಯವಸ್ಥೆ ಸರಿಪಡಿಸುವಂತೆ ಎಚ್ಚರಿಕೆ ನೀಡಿದರು.

ಶಾಸಕ ಯತೀಂದ್ರ ಸಿದ್ದರಾಮಯ್ಯ ಪ್ರತಿಕ್ರಿಯಿಸಿ ದೇವಾಲಯದಲ್ಲಿ ನಡೆಯುವ ಅಕ್ರಮಗಳ ಬಗ್ಗೆ ಭಕ್ತರು ಟ್ವಿಟ್ಟರ್ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಬರೆದು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಇದರಿಂದ ಜಿಲ್ಲೆಗೆ, ನಮಗೆ ಅವಮಾನ, ಪಾರ್ಕಿಂಗ್ ವ್ಯವಸ್ಥೆ, ನದಿಯ ಬಳಿ ರಕ್ಷಣೆಗೆ ಸಿಬ್ಬಂದಿಯನ್ನು ನೇಮಿಸಿ, ಅಕ್ರಮವನ್ನು ತಡೆಗಟ್ಟಿ ಎಂದು ಹರಿಹಾಯ್ದರು.

ಶ್ರೀಕಂಠೇಶ್ವರ ದೇವಾಲಯದ ವಿಐಪಿ ವಸತಿಗೃಹ ದುರಸ್ತಿ ನಡೆಸಲಾಗಿದೆ, ಪೀಠೋಪಕರಣಗಳ ವ್ಯವಸ್ಥೆ ಮಾಡಿ, ದೇವಾಲಯದ ಬಳಿ ಗೋಶಾಲೆ ನಿರ್ಮಿಸಬೇಕು, ತಾಲೂಕಿನ ಕಂತೆ ಮಹದೇಶ್ವರ ಬೆಟ್ಟಕ್ಕೆ ರಸ್ತೆ ನಿರ್ಮಿಸಲು ಮರಗಳನ್ನು ತೆರವುಗೊಳಿಸಿ,ಬೆಟ್ಟದ 1.7 ಗುಂಟೆ ಜಾಗದಲ್ಲಿ ಭಕ್ತರ ಅನುಕೂಲಕ್ಕಾಗಿ ನಿರ್ಮಿಸಲು ಕ್ರಮವಹಿಸಬೇಕು ಎಂದು ಶಾಸಕರು ತಾಕೀತು ಮಾಡಿದರು,

ನಗರದ ನ್ಯಾಯಬೆಲೆ ಅಂಗಡಿಗಳಲ್ಲಿ ಜನರಿಗೆ ಸರಿಯಾಗಿ ಪಡಿತರ ವಿತರಣೆ ಮಾಡದಿರುವ ಬಗ್ಗೆ ವ್ಯಾಪಕ ದೂರುಗಳು ಕೇಳಿ ಬಂದಿವೆ, ಪಡಿತರ ಅಕ್ಕಿ ಕಳ್ಳಸಾಗಣೆದಾರರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಎಂದು ದರ್ಶನ್ ಧ್ರುವನಾರಾಯಣ ಆಹಾರ ಇಲಾಖೆ ಶಿರಸ್ತೆದಾರ್ ಅವರಿಗೆ ಸೂಚನೆ ನೀಡಿದರು.

ಶಾಸಕ ಯತೀಂದ್ರ ಸಿದ್ದರಾಮಯ್ಯ ತಾಲೂಕಿನಲ್ಲಿ ಮಳೆ ಹಾನಿಗೊಳಗಾದ 52 ಮನೆಗಳಿಗೆ ವಿಳಂಬ ಮಾಡದೆ ಪರಿಹಾರ ವಿತರಿಸಿ, ಶೇ 60 ಕ್ಕಿಂತ ಮನೆ ಹಾನಿಯಾಗಿದ್ದರೆ ಗರಿಷ್ಠ ಪರಿಹಾರ ನೀಡಿ, ಮನೆ ಕಳೆದುಕೊಂಡವರಿಗೆ ನೆರವಾಗಿ. ತಾಲೂಕಿನ ವರುಣ ಕ್ಷೇತ್ರದ ಭಾಗದ 14 ಗ್ರಾಮಗಳಲ್ಲಿ ಸ್ಮಶಾನವಿಲ್ಲ, ಪ್ರತಿ ಗ್ರಾಮಗಳಲ್ಲಿ ಸ್ಮಶಾನದ ವ್ಯವಸ್ಥೆ ಇರಬೇಕು, ಸ್ಮಶಾನವಿಲ್ಲದ ಕಡೆ ಜಾಗ ಗುರ್ತಿಸಿ, ಕೆರೆ ಹಾಗೂ ಸ್ಮಶಾನ ಒತ್ತುವರಿಯನ್ನು ಕಾಲಮಿತಿಯಲ್ಲಿ ತೆರವುಗೊಳಿಸಿ ಎಂದು ತಹಸೀಲ್ದಾರ್ ಅವರಿಗೆ ಸೂಚನೆ ನೀಡಿದರು.

ನಗರಸಭೆಯಲ್ಲಿ ಈ–ಖಾತೆ ಸಂಬಂಧ ಹೆಚ್ಚು ದೂರುಗಳು ಬರುತ್ತಿದ್ದು, ದಲ್ಲಾಳಿಗಳ ಹಾವಳಿಯನ್ನು ತಡೆಯಲು ಸಾಕಷ್ಟು ಬಾರಿ ನಿಮಗೆ ಸೂಚನೆ ನೀಡಿದ್ದರು ಸಹ, ನಿಯಂತ್ರಿಸುವಲ್ಲಿ ನೀವು ವಿಫಲರಾಗಿದ್ದೀರಿ, ನಿಮಗೆ ಕೆಲಸ ಮಾಡಲು ಆಸಕ್ತಿ ಇಲ್ಲದಿದ್ದಲ್ಲಿ ಬೇರೆ ಕಡೆ ವರ್ಗಾವಣೆ ಮಾಡಿಸಿಕೊಂಡು ಹೋಗಬಹುದು ಎಂದು ನಗರಸಭಾ ಆಯುಕ್ತ ವಿಜಯ್ ರವರ ಮೇಲೆ ಹರಿಹಾಯ್ದರು. ತಾ.ಪಂ. ಇಒ ಜೆರಾಲ್ಡ್ ರಾಜೇಶ್, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷಹಾಡ್ಯ ರಂಗಸ್ವಾಮಿ ಇದ್ದರು.

ನಾಡು ಧರ್ಮ, ಸಂಸ್ಕೃತಿ ಉಳಿವಿನಿಂದ ಮಾತ್ರ ಜನಾಂಗದ ಹೆಸರು ಅಜರಾಮರ



ಕೈಲ್ ಮುಹೂರ್ತ ಸಂಘ ಕಾಕೋಟುಪರಂಬು 75ನೇ ವರ್ಷದ ವಜ್ರಮಹೋತ್ಸವ ಸಮಾರೋಪ ಸಮಾರಂಭವನ್ನು ಗಣ್ಯರು ಉದ್ಘಾಟಿಸಿದರು.

ವಿರಾಜಪೇಟೆ, ನ.21– ನಾಡು ಧರ್ಮ, ಸಂಸ್ಕೃತಿ ಉಳಿವಿನಿಂದ ಮಾತ್ರಜನಾಂಗದ ಹೆಸರು ಅಜರಾಮರವಾಗಿರುತ್ತದೆ ಎಂದು ಗಣ್ಯರೆಲ್ಲರ ಅಭಿಪ್ರಾಯವಾಗಿತ್ತು.

ಕೈಲ್ ಮುಹೂರ್ತ ಸಂಘ ಕಾಕೋಟುಪರಂಬು 75ನೇ ವರ್ಷದ ವಜ್ರಮಹೋತ್ಸವ ಸಮಾರಂಭದ ಸಮರೋಪ ಸಮಾರಂಭದಲ್ಲಿ ವಿವಿಧ ಆಟೋಟ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಬೆಂಗಳೂರು ಕೊಡವ ಸಮಾಜದ ಅಧ್ಯಕ್ಷ ಚೆರಿಯಪಂಡ ಸುರೇಶ್ ಮಾತನಾಡಿ, ಕೊಡವ ಜನಾಂಗ ಕಿರಿದಾದರೂ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದು ಉನ್ನತ ಸ್ಥಾನಮಾನಗಳನ್ನು ಅಲಂಕರಿಸಿದ್ದಾರೆ. ಕೃಷಿಯಲ್ಲಿ ಬದುಕು ಕಂಡು ಜೀವನ ಸಾಗಿಸುತಿದ್ದ ಹಲವರು ಇಂದು ತಮ್ಮ ಭೂಮಿಯನ್ನು ಮಾರಾಟ ಮಾಡುತ್ತಿರುವುದು ಕಳವಳಕಾರಿ ಸಂಗತಿ ಸ್ವ ಉದ್ಯೋಗ ರೂಪಿಸಿಕೊಂಡು ಸ್ವಾವಲಂಬಿ ಜೀವನ ಸಾಗಿಸುವತ್ತ ಜನಾಂಗ ಮುಂದಾಗಬೇಕು ಎಂದು ಹೇಳಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಚೀಫ್ ಎಲೆಕ್ಟ್ರಿಕಲ್ ಇನ್ಸ್‌ಪೆಕ್ಟರ್ ತೀತಿರ ರೋಶನ್ ಅಪ್ಪಚ್ಚು ತಮ್ಮ ಮಕ್ಕಳು ಇಂಜಿನಿಯರ್, ಡಾಕ್ಟರ್, ಲಾಯರ್ ಆಗಬೇಕು ಎನ್ನುವುದು ಹಲವರ ಕನಸಾಗಿದೆ. ಆದರೆ ಕ್ರೀಡಾಪಟುವಾಗಲಿ ಎಂದು ಕನಸುಕಾಣಬೇಕು. ಕ್ರೀಡಾ ಕ್ಷೇತ್ರದಲ್ಲಿ ವಿಮಲ ಅವಕಾಶಗಳಿವೆ. ಇದಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರೋತ್ಸಾಹ ನೀಡುತ್ತಿದೆ. ಸಾಧನೆಗೆ ಗುರಿ ಮತ್ತು ಛಲ ಮುಖ್ಯ ಗ್ರಾಮೀಣ ಕಲೆ ಸಾಹಿತ್ಯ ಸಂಸ್ಕೃತಿ ಎಂದಿಗೂ ಮಾಸದೆ ಉಳಿವಿಗಾಗಿ ಪ್ರಯತ್ನ ಸಾಗಬೇಕು ಎಂದರು.

ನೆಕ್ಟರ್ ಫ್ರೇಶ್ ಮತ್ತು ವೀರವ್ರತಂ ಫೌಂಡೇಶನ್‌ನ ವ್ಯವಸ್ಥಾಪಕ ನಿರ್ದೇಶಕ ಕುಪ್ಪಂಡ ಛಾಯ ನಂಜಪ್ಪ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ವಜ್ರ ಮಹೋತ್ಸವ ಆಚರಣಾ ಸಮಿತಿಯ ಅಧ್ಯಕ್ಷ ಮಂಡೇಟಿರ ಎಂ. ಸುರೇಶ್ ಮಾತನಾಡಿದರು, ಕೊಡವ ಜನಾಂಗಕ್ಕೆ ವಿರಳವಾದ ಹಬ್ಬಗಳು ಆಚರಣೆಯಲ್ಲಿದ್ದರೂ ನಮ್ಮ ಪೂರ್ವಜರು ಎಲ್ಲಾ ಹಬ್ಬಗಳಿಗೆ ವಿಶೇಷ ಅರ್ಥ ಕಲ್ಪಿಸಿದ್ದಾರೆ. ಕೈಲ್‌ಮುಹೂರ್ತ ಸಂಘದ ವಜ್ರಮಹೋತ್ಸವ ಕಾಕೋಟು ಪರಂಬು, ನಾಲ್ಕೇರಿ, ಕುಂಜಿಲಗೇರಿ, ಮೈತಾಡಿ ಬೆಳ್ಳುಮಾಡು, ಅರಮೇರಿ ಗ್ರಾಮಗಳ ವಾಸಿಗಳಿಗಾಗಿ ಮೂರು ದಿನಗಳ ಕಾಲ ವಿವಿಧ ಆಟೋಟ ಸ್ಪರ್ಧೆಗಳ ಮೂಲಕ ಯಶಸ್ಸು ಕಂಡಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ತೆಂಗಿನ ಕಾಯಿಗೆ ಗುಂಡು ಹೊಡೆಯುವ ಸ್ಪರ್ಧೆ, ಹಗ್ಗಜಗ್ಗಾಟ, ಸ್ಲೋಬೈಕ್ ರೇಸ್ ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕ ಸ್ಪರ್ಧೆಗಳು, ಥ್ರೋಬಾಲ್, ಪ್ರಾಥಮಿಕ ಶಾಲಾ, ಪ್ರೌಢಶಾಲಾ ಬಾಲಕ, ಬಾಲಕಿಯರಿಗೆ ಓಟದ ಸ್ಪರ್ಧೆ ಏರ್ಪಡಿಸಲಾಗಿತ್ತು. ವಿವಿಧ ಸ್ಪರ್ಧೆಗಳಲ್ಲಿ ವಿಜೇತ ತಂಡಗಳಿಗೆ ಪಾರಿತೋಷಕ– ನಗದು ಪುರಸ್ಕಾರ ನೀಡಿ ಗೌರವಿಸಲಾಯಿತು. ವಜ್ರ ಮಹೋತ್ಸವ ಆಚರಣಾ ಸಮಿತಿ ಗೌರವ ಕಾರ್ಯದರ್ಶಿ ಅಪ್ಪಚಂಗಡ ಪ್ರಕಾಶ್ ಪೂಣಚ್ಚ ಸ್ವಾಗತಿಸಿ, ಮಾಳೇಟಿರ ಶ್ರೀನಿವಾಸ್ ನಿರೂಪಿಸಿ, ಕಲ್ಪನಾ ವಂದಿಸಿದರು.

ಬೀದಿ ನಾಯಿಗಳ ಹಾವಳಿ ನಿಯಂತ್ರಣ ಕುರಿತ ನ್ಯಾಯಾಲಯ ಆದೇಶ

ಅನುಷ್ಠಾನಕ್ಕೆ ಡಿಸಿ ಶಿಲ್ಪಾ ನಾಗ್ ಸೂಚನೆ



ಚಾಮರಾಜನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಬೀದಿ ನಾಯಿಗಳ ತೊಂದರೆ ತಡೆಗಟ್ಟುವ ನಿಟ್ಟಿನಲ್ಲಿ ಜಿಲ್ಲಾ ಮಟ್ಟದ ಸಮಿತಿಯ ಅಧ್ಯಕ್ಷತೆ ವಹಿಸಿ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಮಾತನಾಡಿದರು.

ಚಾಮರಾಜನಗರ, ನ.21– ಬೀದಿ ನಾಯಿಗಳ ಹಾವಳಿ ನಿಯಂತ್ರಣಕ್ಕಾಗಿ ಸರ್ವೋಚ್ಚ ನ್ಯಾಯಾಲಯ ನೀಡಿರುವ ಆದೇಶ ಅನುಸಾರ ಸಂಬಂಧಪಟ್ಟ ಇಲಾಖೆಗಳು ಕಟ್ಟುನಿಟ್ಟಾಗಿ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಬೀದಿ ನಾಯಿಗಳ ತೊಂದರೆ ತಡೆಗಟ್ಟುವ ನಿಟ್ಟಿನಲ್ಲಿ ನ್ಯಾಯಾಲಯದ ನಿರ್ದೇಶನಗಳನ್ನು ಅನುಷ್ಠಾನಗೊಳಿಸುವ ಸಂಬಂಧ ರಚಿಸಲಾಗಿರುವ ಜಿಲ್ಲಾ ಮಟ್ಟದ ಸಮಿತಿಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸರ್ವೋಚ್ಚ ನ್ಯಾಯಾಲಯವು ಬೀದಿ ನಾಯಿಗಳ ಹಾವಳಿ ನಿಯಂತ್ರಣಕ್ಕಾಗಿ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಆದೇಶ ನೀಡಿದೆ. ಈ ಆದೇಶ ಅನುಸಾರ ನಗರ ಸ್ಥಳೀಯ ಸಂಸ್ಥೆಗಳು ಪ್ರಾಣಿ ಜನನ ನಿಯಂತ್ರಣ(ಎಬಿಸಿ) ನಿಯಮಾವಳಿ ಅನ್ವಯ ಸಕಲ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ. ಬೀದಿ ನಾಯಿಗಳನ್ನು ಸಂತಾನ ಹರಣ ಶಸ್ತ್ರ ಚಿಕಿತ್ಸೆಗೊಳಿಸುವ ಕುರಿತು ಪ್ರಾಣಿ ಕಲ್ಯಾಣ ಮಂಡಳಿಯಿಂದ ಮಾನ್ಯತೆ ಪಡೆದ ಎನ್‌ಜಿಒಗಳಲ್ಲದೆ ಹೆಚ್ಚಿನ ಸಂಸ್ಥೆಗಳಿಂದ ಪ್ರಸ್ತಾವನೆ ಪಡೆದು ನಿಯಮಾನುಸಾರ ಕ್ರಮವಹಿಸಬೇಕು ಎಂದರು.

ಸರ್ಕಾರಿ, ಖಾಸಗಿ ಶೈಕ್ಷಣಿಕ ಸಂಸ್ಥೆಗಳು, ಜಿಲ್ಲಾ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ವೈದ್ಯಕೀಯ ಕಾಲೇಜುಗಳು ಒಳಗೊಂಡಂತೆ ಆಸ್ಪತ್ರೆಗಳು, ಸಾರ್ವಜನಿಕ ಕ್ರೀಡಾಂಗಣಗಳು, ಕ್ರೀಡಾ ಸಂಕೀರ್ಣ, ಬಸ್ ನಿಲ್ದಾಣ, ಬಸ್ ಡಿಪೋ, ರೈಲು ನಿಲ್ದಾಣ, ಇನ್ನಿತರ ಸಾರ್ವಜನಿಕ ಪ್ರದೇಶಗಳಲ್ಲಿರುವ ಎಲ್ಲ ಬೀದಿ ನಾಯಿಗಳನ್ನು ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಗಳು ಸೆರೆ ಹಿಡಿದು ಅವುಗಳ ಸಂತನಾಹರಣ ಶಸ್ತ್ರ ಚಿಕಿತ್ಸೆಗೆ ಕ್ರಮ ಕೈಗೊಳ್ಳಬೇಕಿದೆ. ಸಾರ್ವಜನಿಕರ ಸುರಕ್ಷತೆಗೆ ಅಪಾಯವನ್ನುಂಟು ಮಾಡುವುದಿಲ್ಲವೆಂದು ಖಚಿತ ಪಡಿಸುವ ನಿಟ್ಟಿನಲ್ಲಿ ನಾಯಿ ಆಶ್ರಯ ಕೇಂದ್ರಗಳಲ್ಲಿ ಇರಿಸಲು ನ್ಯಾಯಾಲಯವು ನಿರ್ದೇಶನ ನೀಡಿದೆ ಎಂದು ತಿಳಿಸಿದರು.

ಸಾರ್ವಜನಿಕ ಸ್ಥಳಗಳಿಂದ ಬೀದಿ ನಾಯಿಗಳನ್ನು ಹಿಡಿದ ನಂತರ ಅವುಗಳಿಗೆ ಆಶ್ರಯ ನೀಡಲು ನಿಗದಿತ ಕಟ್ಟಡ, ಸ್ಥಳಗಳಿಗೆ ಸ್ಥಳಾಂತರಿಸಬೇಕು. ರೇಬಿಸ್ ಪೀಡಿತ ನಾಯಿಗಳನ್ನು ಪ್ರತ್ಯೇಕ ಕಟ್ಟಡ ಸ್ಥಳಗಳಲ್ಲಿ ನಿರ್ವಹಣೆ ಮಾಡಬೇಕು. ಪ್ರಾಣಿ ಜನನ ನಿಯಂತ್ರಣ (ಎಬಿಸಿ) ನಿಯಮಾವಳಿ ಅನ್ವಯ ಎಲ್ಲ ರಕ್ಷಣೆ, ಆಹಾರ, ಆರೋಗ್ಯ ಪಾಲನೆಗೆ ಹೆಚ್ಚಿನ ಮುತುವರ್ಜಿ ವಹಿಸಬೇಕು ಎಂದು ಜಿಲ್ಲಾಧಿಕಾರಿ ಹೇಳಿದರು.

ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಒಳಗೊಂಡ ಸಮಿತಿ ರಚಿಸಲಾಗಿದೆ. ಸಮಿತಿಯು ಸಭೆ ಸೇರಿ ನ್ಯಾಯಾಲಯದ ನಿರ್ದೇಶನಗಳನ್ನು ಪರಿಪಾಲಿಸಿ ಅನುಪಾಲನಾ ವರದಿಯನ್ನು ಸಲ್ಲಿಸಬೇಕಾಗಿದೆ. ಸ್ಥಳೀಯ ಸಂಸ್ಥೆಗಳೊಂದಿಗೆ ಸಮನ್ವಯತೆ ಸಾಧಿಸಲು ಎಲ್ಲ ಸಾರ್ವಜನಿಕ ಸಂಸ್ಥೆಗಳು ಓರ್ವ ಸಮನ್ವಯಾಧಿಕಾರಿಯನ್ನು ನೇಮಿಸಬೇಕು ಎಂದು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ತಿಳಿಸಿದರು.

ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಶೃತಿ, ಪಶುಪಾಲನಾ ಇಲಾಖೆ ಉಪನಿರ್ದೇಶಕ ಡಾ. ಮಂಜುನಾಥ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಎಂ.ವಿ. ಸುಧಾ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್.ಚಿದಂಬರ, ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಸಚಿವರಾದ (ಮೌಲ್ಯಮಾಪನ) ಜಿ.ವಿ.ವೆಂಕಟರಮಣ, ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕಿ ಪುಟ್ಟಗೌರಮ್ಮ, ತಾಲೂಕು ಪಶುವೈದ್ಯಾಧಿಕಾರಿಗಳು, ನಗರ ಸ್ಥಳೀಯ ಸಂಸ್ಥೆಗಳ ಆಯುಕ್ತರು, ಮುಖ್ಯಾಧಿಕಾರಿಗಳು, ಇನ್ನಿತರೆ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ನಾಪೋಕ್ಲುವಿನಲ್ಲಿ ನೂತನ ಪೆವಿಲಿಯನ್ ಉದ್ಘಾಟನೆ



ಪಾರಾಣೆಯ ಜಿಎಂಪಿ ಶಾಲಾ ಆಟದ ಮೈದಾನದಲ್ಲಿ ಪೆವಿಲಿಯನ್ ಕಟ್ಟಡವನ್ನು ಶಾಸಕ ಎ.ಎಸ್.ಪೊನ್ನಣ್ಣ ಉದ್ಘಾಟಿಸಿದರು.

ನಾಪೋಕ್ಲು: ಕ್ರೀಡಾಭಿಮಾನಿಗಳಿಗೆ ಅನುಕೂಲವಾಗಲೆಂದು ಪೆವಿಲಿಯನ್ ಕಟ್ಟಡದ ನಿರ್ಮಾಣವಾಗಿದ್ದು ಇದರ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳುವಂತಾಗಬೇಕೆಂದು ಶಾಸಕ ಎ.ಎಸ್.ಪೊನ್ನಣ್ಣ ಹೇಳಿದರು.

ಇಲ್ಲಿಗೆ ಸಮೀಪದ ಪಾರಾಣೆಯ ಜಿಎಂಪಿ ಶಾಲಾ ಆಟದ ಮೈದಾನದಲ್ಲಿ ಶಾಸಕರ ಅನುದಾನದ 20 ಲಕ್ಷ ರೂ.ನಲ್ಲಿ ನೂತನವಾಗಿ ನಿರ್ಮಾಣಗೊಂಡ ಪೆವಿಲಿಯನ್ ಕಟ್ಟಡದ ಉದ್ಘಾಟಿಸಿ ಮಾತನಾಡಿದ ಅವರು, ಕ್ರೀಡೆಯನ್ನು ವೀಕ್ಷಿಸಲು ಪ್ರೇಕ್ಷರಿಗೆ ಅನುಕೂಲವಾಗಲೆಂದು ಈ ಪೆವಿಲಿಯನ್ ನಿರ್ಮಾಣವಾಗಿದ್ದು, ಇದರ ಸದುಪಯೋಗವನ್ನು ಕ್ರೀಡಾಭಿಮಾನಿಗಳು ಸೇರಿದಂತೆ ಎಲ್ಲರೂ ಪಡೆದುಕೊಳ್ಳಬೇಕೆಂದು ತಿಳಿಸಿದರು. ಕ್ಷೇತ್ರದಲ್ಲಿನ ಆಟದ ಮೈದಾನಗಳಿಗೆ ಹಾಗೂ ಕ್ರೀಡಾ ಅಭಿವೃದ್ಧಿಗೆ ಕ್ರೀಡಾ ತರಬೇತಿ ಕೇಂದ್ರ, ಕ್ರೀಡಾ ವಸತಿ ನಿಲಯಗಳ ನಿರ್ಮಾಣ ಹಾಗೂ ನೂತನ ಕ್ರೀಡಾಂಗಣ ನಿರ್ಮಾಣಕ್ಕೆ ಒತ್ತು ನೀಡುತ್ತಿರುವುದಾಗಿ ಹೇಳಿದರು.

ಇಂತಹ ಕ್ರೀಡಾಂಗಣಗಳು ಸ್ಥಳೀಯ ಕ್ರೀಡಾ ಪ್ರತಿಭೆಗಳ ಏಳಿಗೆಗೆ ಸಹಕಾರಿಯಾಗಲಿ ಎಂದು ಶುಭ ಹಾರೈಸಿದರು. ಪಾರಾಣೆ ಪಂಚಾಯಿತಿ ಅಧ್ಯಕ್ಷ ಕಟ್ಟಿ ಕುಶಾಲಪ್ಪ, ಅಧ್ಯಕ್ಷತೆಯಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಪಾರಾಣೆ ಕೇಂದ್ರ ಕ್ರೀಡಾ ಮಂಡಳಿಯ ಅಧ್ಯಕ್ಷ ಮಚ್ಚಾಂಡ ಸಾಬು ದೇವಯ್ಯ ಕ್ರೀಡಾ ಮಂಡಳಿಯ ಪದಾಧಿಕಾರಿಗಳು, ಸಂಘ ಸಂಸ್ಥೆಗಳ ಪದಾಧಿಕಾರಿ ಸದಸ್ಯರು ಹಾಗೂ ಕ್ರೀಡಾಭಿಮಾನಿಗಳು ಉಪಸ್ಥಿತರಿದ್ದರು.

ನ.25 ರಂದು ವಿಶೇಷಚೇತನರಿಗೆ ಆಟೋಟ ಸ್ಪರ್ಧೆ

ಮಡಿಕೇರಿ: ತಾಲೂಕಿನ ಶಿಶು ಅಭಿವೃದ್ಧಿ ಯೋಜನೆ ಇಲಾಖೆ ವತಿಯಿಂದ ವಿಶ್ವವಿಶೇಷ ಚೇತನರ ದಿನಾಚರಣೆ ಅಂಗವಾಗಿ ಮಡಿಕೇರಿ ತಾಲೂಕಿನ ವಿಶೇಷಚೇತನರಿಗೆ ನಗರದ ಗಾಂಧಿ ಮೈದಾನದಲ್ಲಿ ನ.25 ರಂದು ಬೆಳಗ್ಗೆ 10 ಗಂಟೆಗೆ ಆಟೋಟ ಸ್ಪರ್ಧೆ ನಡೆಯಲಿದೆ.

ಮಡಿಕೇರಿ ತಾಲೂಕಿನ ಎಲ್ಲಾ ವಿಶೇಷಚೇತನರು ಭಾಗವಹಿಸಿ ಕಾರ್ಯಕ್ರಮ ಯಶಸ್ವಿ ಗೊಳಿಸುವಂತೆ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಅವರು ಕೋರಿದ್ದಾರೆ.

ಕಾಂಗ್ರೆಸ್ ಸರ್ಕಾರದ ವಿರುದ್ಧ ಪ್ರತಿಭಟನೆಗೆ ಮುಂದಾದ ಬಿಜೆಪಿ ಮುಖಂಡರ ಬಂಧನ, ಬಿಡುಗಡೆ

ಮುಖ್ಯಮಂತ್ರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ



ಬಿಜೆಪಿ ಮುಖಂಡರನ್ನು ಬಂಧಿಸಿ ಕರೆದೊಯ್ಯುತ್ತಿರುವ ಪೊಲೀಸರು.

ಚಾಮರಾಜನಗರ, ನ.21– ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆಗೆ ಮುಂದಾದ ಬಿಜೆಪಿ ಮುಖಂಡರನ್ನು ಪೊಲೀಸರು ಬಂಧಿಸಿ, ಬಿಡುಗಡೆ ಮಾಡಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಸಮಾರೋಪ ಸಮಾ ರಂಭದ ರಾಜ್ಯ ಸರ್ಕಾರ, ಮುಖ್ಯಮಂತ್ರಿ ಸಿದ್ದರಾ ಮಯ್ಯ ಅವರ ವಿರುದ್ಧ ಪ್ರತಿಭಟನೆಗೆ ಮುಂದಾದ ಬಿಜೆಪಿ ಎಸ್‌ಟಿ ಮೋರ್ಚಾದ ಜಿಲ್ಲಾ ಉಪಾಧ್ಯಕ್ಷ ಬುಲೆಟ್ ಚಂದ್ರು, ನಗರಮಂಡಲ ಅಧ್ಯಕ್ಷ ಶಿವರಾಜ್, ಮಾಜಿ ಅಧ್ಯಕ್ಷ ಸುಂದ ರ್‍ರಾಜ್, ಭಕ್ತಿ ರಾಜು, ಯುವ ಮೋರ್ಚಾದ, ಜಿಲ್ಲಾಧ್ಯಕ್ಷ ಸೂರ್ಯ ಬಾಲರಾಜ್, ಯಾನಗಳ್ಳಿ ನಂಜುಂಡ ನಾಯಕ, ನಗರ ಮಂಡಲ ಪ್ರಧಾನ ಕಾರ್ಯದರ್ಶಿ ಕೂಸಣ್ಣ, ರಾಜೇಂದ್ರ, ಮಣಿ ಅವರನ್ನು ಪೊಲೀಸರು ವಶಕ್ಕೆ ಪಡೆದು ಪಟ್ಟಣ ಪೊಲೀಸ್ ಠಾಣೆಗೆ ಕರೆದೊಯ್ಯುದು ಕಾರ್ಯಕ್ರಮ ಮುಗಿದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಾಪಸ್ ತೆರಳಿದ ಮೇಲೆ ಬಿಡುಗಡೆ ಮಾಡಿದರು.